# ಅಖಿಲ ಭಾರತ ಪತ್ರಿಕೆ
## ಜೂನ್ 2023



# ಶ್ರೀಮಾತೆಯ ಸಾಮಿಪ್ಯದೆಡೆಗೆ..

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಅವನೀಗ ಬೆಳೆವ ಅವಳ ಚಿತ್ಕಳೆಯ ಎಳೆಎಳೆಯ ನೇಯ್ಗೆಯಲ್ಲಿ;

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 62)**

**ಅಖಿಲ ಭಾರತ ಪತ್ರಿಕೆ**
**ಜೂನ್ 2023**

ಸಂಪುಟ: 33 ಸಂಚಿಕೆ: 06

**ಪರಿವಿಡಿ**

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಶ್ರೀಮಾತೆಯ ಸಾಮಿಪ್ಯದೆಡೆಗೆ..

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಶ್ರೀಮಾತೆಯೊಡನೆ ನೈಜ–ಸಂಪರ್ಕ** 4
**ಶ್ರೀಮಾತೆಯೊಡನೆ ಆಂತರಿಕ ಸಂಪರ್ಕ** 9
ಅನು: ನಾಗಜ್ಯೋತಿ ಮಾನ್ವಿ

**ಸಾಮಿಪ್ಯಕ್ಕೆ ಸೂಕ್ತ ಪಥ** 12
**ಶ್ರೀಮಾತೆಯ ಪ್ರೇಮ** 24
ಅನು: ಕಿಶೋರಕುಮಾರ ಕಾಸಾರ

**ಆಂತರ್ಯ–ಸ್ಪಂದ ಮತ್ತು ಬಾಹ್ಯ ಛಂದ** 29
ಅನು: ಡಾ॥ ಮಹಾದೇವ ಸಕ್ರಿ

**ನಾನು ನಿನ್ನೊಂದಿಗೇ ಇದ್ದೇನೆ..** 46
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 49
ಅನು: ಜಾನ್ವಿ

**ಶ್ರೀ ಅರವಿಂದರ ಕಾವ್ಯ "ಈಲಿಯನ್"** 69
ಅನು: ಡಾ॥ ಬಿ.ಆರ್. ಭೀಡ್

**ಶ್ರೀ ಅರವಿಂದರ ಕಾವ್ಯ**
**"ಶ್ರೀಮಾತೆಯ ರಕ್ಷೆಯೊಳಗೆ..."** 73
ಅನು: ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 76

## ಸಂಪಾದಕರ ಟಿಪ್ಪಣಿ

ಶ್ರೀಮಾತೆಯ ಕೃಪೆಯನ್ನು ಪಡೆಯುವದರ ಸಲುವಾಗಿ ನಮ್ಮನ್ನು ನಾವು ಮುಕ್ತಗೊಳಿಸಿಕೊಳ್ಳುವದೇ 'ಪೂರ್ಣ ಯೋಗ'ದ ಮುಖ್ಯ ಸೂತ್ರವಾಗಿದೆ. ಮೃಣ್ಮಯದ ಸ್ವಭಾವವನ್ನು ರೂಪಾಂತರಣಗೊಳಿಸುವ ಮೂಲಕ ಮತ್ತು ಅವಳ ಪ್ರಚಲಿತ ಸ್ವರೂಪಗಳಲ್ಲಿಯೇ ಇರುವ ಅಸ್ತಿತ್ವವನ್ನು ಅರಿತುಕೊಳ್ಳುವ ಜೀವ(ಪ್ರಾಣ)ವನ್ನು ರೂಪಿಸುವ ಮಹತ್ತರವಾದ ಯೋಜನೆಯು ಅವಳಿಂದಲೇ ಯೋಜಿಸಲ್ಪಟ್ಟಿದೆ. ಆ ಪರಮ ಶಕ್ತಿ ಅಥವಾ ದೈವೀ ಮಾತೆಯು ಈ ರೂಪಾಂತರಣದ ಪ್ರಕ್ರಿಯೆಯನ್ನು ಉಗಮಗೊಳಿಸುವ ಆದಿಬಿಂದುವಾಗಿದ್ದಾಳೆ. ಮಾನವನ ಭೌತಿಕ ಮನಸ್ಸಿನಲ್ಲಿ ಇಲ್ಲೊಂದು ಪ್ರಶ್ನೆ ಉದ್ಭವಿಸುತ್ತದೆ, ಅದೆಂದರೆ, ಈ ರೀತಿಯಲ್ಲಿ ಇರುವ ಶ್ರೀಮಾತೆಯೊಡನೆ ಹೇಗೆ ಸಾಮಿಪ್ಯ ಸಾಧಿಸಿಕೊಳ್ಳುವದು ಮತ್ತು ಅವಳೊಡನೆ ಹೇಗೆ ಸಂಪರ್ಕವನ್ನು ಹೊಂದುವದು, ಅದರಲ್ಲೂ ಶ್ರೀಮಾತೆಯ ಮೃಣ್ಮಯದ ಸ್ವರೂಪದ ದರ್ಶನ ಹಾಗೂ ಸಹಕಾರವಿರದೇ ಇದನ್ನು ಪಡೆದುಕೊಳ್ಳುವದು ಹೇಗೆ?

ಈ ಸಂಚಿಕೆಯು ಈ ರಹಸ್ಯವನ್ನು ಪರಿಹರಿಸುವ ಮತ್ತು ಆ ಮೂಲಕ ದೈವೀ ಮಾತೆಯ ಸಾಮಿಪ್ಯವನ್ನು ಪಡೆದುಕೊಳ್ಳುವ ಉದ್ದೇಶವನ್ನು ಹೊಂದಿ ರೂಪಿಸಲ್ಪಟ್ಟಿದೆ. [ಎಐಮ್]



*ಇವರೆಲ್ಲರೂ ಶ್ರೀಮಾತೆಯ ಮಕ್ಕಳೇ ಆಗಿದ್ದು, ಯಾರು ಮುಕ್ತರಾಗಿರುತ್ತಾರೋ ಅವರೆಲ್ಲರೂ ಆಕೆಗೆ ಸಮೀಪವಾಗಿರುತ್ತಾರೆ. ಅವರ ಅಂತರ್ಯದಲ್ಲಿಯೂ ಸಹಿತ ಅವಳಿಗೆ ಸಮೀಪವಾಗಿರುತ್ತಾರೆ. ಅವಳೊಡನೆ ಒಂದಾಗಿರುತ್ತಾರೆ. ಆದರೆ ಯಾರು ಕೇವಲ ಭೌತಿಕವಾಗಿ ಮಾತ್ರ ಆಗಮಿಸುತ್ತಾರೋ ಅವರೆಂದಿಗೂ ಅವಳಿಗೆ ಸಮೀಪವಾಗಲಾರರು.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/496 – ಶ್ರೀ ಅರವಿಂದರು**

# ಶ್ರೀಮಾತೆಯೊಡನೆ ನೈಜ–ಸಂಪರ್ಕ

**– ಅನು: ನಾಗಜ್ಯೋತಿ ಮಾನ್ವಿ**

## ಶ್ರೀಮಾತೆ ಮತ್ತು ಮಗು

*ಶ್ರೀಮಾತೆ ಮತ್ತು ನಮ್ಮೊಂದಿಗಿನ ನಿಜವಾದ ಸಂಬಂಧ – ಶ್ರೀಮಾತೆ ಮತ್ತು ಆಕೆಯ ಮಗುವಿನೊಂದಿಗಿನ ಸಂಬಂಧ ಏನು?*

ಶ್ರೀಮಾತೆ ಮತ್ತು ಮಗುವಿನ ನಡುವಿನ ಸಂಬಂಧವು ಒಂದು ಇಡಿಯಾದ ಪ್ರಾಮಾಣಿಕ ಮತ್ತು ಸರಳ ನಂಬಿಕೆ, ಪ್ರೀತಿ ಮತ್ತು ಅವಲಂಬನೆಯಾಗಿದೆ.

*

ಗುರುವಾಗಿದ್ದಲ್ಲಿ ಶಿಷ್ಯ ಮತ್ತು ಗುರುವಿನ ಸಂಬಂಧವು ಯಾವಾಗಲೂ ಆರಾಧನೆ, ಗೌರವ, ಸಂಪೂರ್ಣ ಸಂತೋಷಮಯ ಆತ್ಮವಿಶ್ವಾಸ, ಆತನ ಮಾರ್ಗದರ್ಶನದಲ್ಲಿ ಪ್ರಶ್ನಿಸಲಾರದ ಸ್ವೀಕರಿಸುವಿಕೆ ಇರುತ್ತದೆ. ಈ ಆಶ್ರಮದಲ್ಲಿ ಮಾತ್ರ ಇನ್ನೊಂದು ಸಿದ್ಧಾಂತವು ಮುನ್ನಡೆಯಲ್ಲಿದೆ. ಮತ್ತು ಅದು ತನ್ನ ಗುರಿಯನ್ನೂ ತಲುಪಿದೆ; ಸಾಮಾನ್ಯ ಮನುಷ್ಯನ ತಾಯಿಯೊಂದಿಗಿನ ಸಂಬಂಧವನ್ನು ತಪ್ಪಾಗಿ ಅನ್ವಯಿಸಲಾಗಿದೆ. ಅಥವಾ ತಪ್ಪಾದ ರೀತಿಯಲ್ಲಿ ವಿಸ್ತರಣೆಗೊಳಿಸಲಾಗಿದೆ. (ಇದೇ ಸಂಬಂಧವನ್ನು ಸರಿಯಾಗಿ ಅರಿತುಕೊಂಡಾಗ ಒಂದು ಹಂತದಲ್ಲಿ ಪಾಲಿಸುವುದು ತಪ್ಪೇನಲ್ಲ) ಮತ್ತು ಕೆಲವು ಬೇರೆಯ ತಪ್ಪಾಗಿ ಅರ್ಥೈಸಲ್ಪಟ್ಟ ಕಲ್ಪನೆಗಳು ಅಭಿಮಾನ ಮಾತ್ರವಲ್ಲದೆ, ಅಹಂಕಾರಭರಿತ ಆಧ್ಯಾತ್ಮಿಕ ಬಯಕೆ, ಅದ್ವೈವೀ ವಿಮರ್ಶೆ, ಪ್ರತಿರೋಧ, ಸಿಟ್ಟು ಮತ್ತು ಬೇರೆಯ ರೀತಿಯ ಇನ್ನೂ ಹೆಚ್ಚಾದ ಬೇಡವಾದ ಪ್ರಾಣಿಕ ಪ್ರತಿಕ್ರಿಯೆಗಳು (ಸಾಮಾನ್ಯವಾಗಿ ಆಧ್ಯಾತ್ಮಿಕ ಪ್ರಜ್ಞೆಗೆ ಅನ್ಯವಾದವುಗಳು) ಯೋಗದ ಭಾಗವಾಗಿ ಕೆಲವರಿಂದ ಮುಂದೆ ತರಲ್ಪಟ್ಟು ಬಹಳಷ್ಟು ಜನಗಳಿಂದ ಅಭ್ಯಾಸಿಸಲ್ಪಟ್ಟಿವೆ! ಇಂತಹ ವಿಧಾನವು ಹೇಗೆ ಆಧ್ಯಾತ್ಮಿಕ ಜೀವನದಲ್ಲಿ ಯಾವುದಾದರೂ ಒಳ್ಳೆಯ ಪರಿಣಾಮದೆಡೆಗೆ ನಡೆಸುತ್ತದೆ ಎಂದು ನನಗೆ ಗೊತ್ತಿಲ್ಲ.

*

## ಒಂದು ನಿಯಮ

ನಾನು ನಿಮಗಾಗಿ ಹಾಕಬಲ್ಲ ಒಂದು ನಿಯಮವೆಂದರೆ, "ನೀವು ಶ್ರೀಮಾತೆಯವರಿಂದ ಮರೆಮಾಚುವಂತಹುದನ್ನು ಯಾವುದನ್ನೂ ಮಾಡಬೇಡಿ,

ಹೇಳಬೇಡಿ ಅಥವಾ ವಿಚಾರ ಮಾಡಬೇಡಿ. ಇಂತಹ ಕ್ಷುಲ್ಲಕ ವಿಚಾರಗಳನ್ನು" ಶ್ರೀಮಾತೆಯವರ ಗಮನಕ್ಕೆ ತರಲು ವಿರುದ್ಧವಾದ ಉತ್ತರ ನಿಮ್ಮ ಪ್ರಾಣದಿಂದ ಬರುತ್ತದೆ. ಅಲ್ಲವೆ? ಶ್ರೀಮಾತೆಯವರಿಗೆ ಈ ವಿಷಯಗಳಿಂದ ತೊಂದರೆಯಾಗಿತ್ತು ಅಥವಾ ಇವುಗಳನ್ನು ಕ್ಷುಲ್ಲಕ ಎಂದು ಪರಿಗಣಿಸುತ್ತಾರೆ ಎಂದು ನೀನೇಕೆ ತಿಳಿದುಕೊಂಡಿರುವೆ? ಇಡೀ ಜೀವನವೇ "ಯೋಗ" ಎಂದ ಮೇಲೆ ಕ್ಷುಲ್ಲಕ ಎಂದು ಕರೆಯುವಂತಹುದು ಅಥವಾ ಮುಖ್ಯವಲ್ಲವಾದುದು ಏನಿದೆ? ಶ್ರೀಮಾತೆಯವರು ಉತ್ತರಿಸದೇ ಇದ್ದರೆ, ನಿಮ್ಮ ಬೆಳವಣಿಗೆಗೆ ಸಂಬಂಧಪಟ್ಟ ವಿಷಯವನ್ನು ಆಕೆಯ ಮುಂದೆ ಸರಿಯಾದ ಭಾವದಲ್ಲಿ ಇಡುವದರಿಂದ ಆಕೆಯ ರಕ್ಷಣೆಯಲ್ಲಿ ಸತ್ಯದ ಬೆಳಕಿನಡಿಯಲ್ಲಿ ಯಾವ ಶಕ್ತಿಯು ರೂಪಾಂತರಗೊಳಿಸಲು ಕೆಲಸ ಮಾಡುತ್ತದೆಯೋ ಅದರ ಕಿರಣದ ಅಡಿಯಲ್ಲಿ ಇಟ್ಟಂತಾಗುತ್ತದೆ. ಶ್ರೀಮಾತೆಯವರ ಗಮನಕ್ಕೆ ಬಂದ ತಕ್ಷಣ ಈ ಕಿರಣಗಳು ಆ ವಿಷಯದ ಮೇಲೆ ಪ್ರಭಾವ ಬೀರುತ್ತವೆ. ನಿಮ್ಮೊಳಗೆ ಯಾವುದೇ ಒಂದು ನಿಮಗೆ ಅದನ್ನು ಮಾಡದಂತೆ ಉಪದೇಶ ಮಾಡಿದರೆ, ಯಾವಾಗ ನಿಮ್ಮೊಳಗಿನ ಚೈತನ್ಯವು ನಿಮಗೆ ಕಿರಣ ಮತ್ತು "ಶಕ್ತಿಯ" ಕೆಲಸ ಮಾಡುವಿಕೆಯನ್ನು ಪ್ರಾಣದ ಒಂದು ಸಾಧನವು ಅದನ್ನು ತಳ್ಳಿಹಾಕಲು ಪ್ರಚೋದಿಸುತ್ತಿರುತ್ತದೆ. ಗಮನಕ್ಕೆ ಬಂದ ಇನ್ನೊಂದು ವಿಷಯವೆಂದರೆ, ನಿಮ್ಮ ಯಾವುದೇ ಭಾಗದ ಚಲನವಲನಗಳನ್ನು, ಆಕೆಯ ಗಮನಕ್ಕೆ ತರುವ ಮೂಲಕ ನಿಮ್ಮನ್ನು ನೀವು ಶ್ರೀಮಾತೆಯವರಿಗೆ ತೆರೆದುಕೊಂಡರೆ ಅದು ತನ್ನಷ್ಟಕ್ಕೆ ತಾನೇ ಒಂದು ಸಂಬಂಧವನ್ನು ಸೃಷ್ಟಿಸುತ್ತದೆ. ಆಕೆಯ ಸಾಮಾನ್ಯವಾದ, ನಿಶ್ಚಲವಾದ ಅಥವಾ ನೇರವಾಗಿ ಆಹ್ವಾನಿಸದೇ ಇರುವ ಕ್ರಿಯೆ, ಎಲ್ಲಾ ಸಾಧಕರನ್ನು ನಿರ್ವಹಿಸುತ್ತಿತ್ತೋ ಅದಕ್ಕಿಂತಲೂ ಬೇರೆಯೇ ಆದ ಒಂದು ವೈಯಕ್ತಿಕ ಸಾಮಿಪ್ಯ ಸೃಷ್ಟಿಯಾಗುತ್ತದೆ.

ಈ ಎಲ್ಲವೂ ಖಂಡಿತವಾಗಿಯೂ, ಈ ತೆರೆಯುವಿಕೆಗೆ ನೀವು ಸಿದ್ಧರಿದ್ದೀರಿ ಎಂದು ನಿಮಗನಿಸಿದರೆ, ನಿಮ್ಮೊಳಗಿರುವದನ್ನು ಆಕೆಯ ಮುಂದಿಡಲು ಚೈತನ್ಯವು ನಿಮ್ಮನ್ನು ಚಲಿಸುವಂತೆ ಮಾಡಿದರೆ, ಯಾವಾಗ ಅದು ಅಂತರಂಗದಿಂದ ಮತ್ತು ಸ್ವಯಂಪ್ರೇರಿತ ಮತ್ತು ನೈಜವಾಗಿರುತ್ತದೆಯೋ ಆಗ ಅದು ಫಲದಾಯಕವಾಗಿರುತ್ತದೆ.

*

## ಪ್ರೀತಿ, ಶ್ರದ್ಧೆ, ನಂಬಿಕೆ, ಆತ್ಮವಿಶ್ವಾಸ, ಆತ್ಮಸಮರ್ಪಣೆ

ಈ ರೀತಿಯ ಭಾವನೆಗಳನ್ನು ಯಾವಾಗಲೂ ತಿರಸ್ಕರಿಬೇಕಾಗುತ್ತದೆ ಮತ್ತು ಅವುಗಳಿಂದ ಮಾಡುವಂತಹುದು ಏನೂ ಇಲ್ಲ. ದೈವದೊಂದಿಗಿನ, ಶ್ರೀಮಾತೆಯೊಂದಿಗಿನ ಸಂಬಂಧವು ಪ್ರೀತಿಯ, ಶ್ರದ್ಧೆಯ, ನಂಬಿಕೆಯ, ಆತ್ಮವಿಶ್ವಾಸದ, ಆತ್ಮಸಮರ್ಪಣೆಯದ್ದಾಗಿರಲೇಬೇಕು – ಬೇರೆಯ ಸಾಮಾನ್ಯ ರೀತಿಯ ಪ್ರಾಣದ ಸಂಬಂಧವು ಸಾಧನಕ್ಕೆ ವಿರುದ್ಧವಾದ ಪ್ರತಿಕ್ರಿಯೆಯನ್ನು ತರುತ್ತದೆ. ಆಸೆ, ಅಹಂಕಾರಭರಿತ ಅಭಿಮಾನ, ಬಯಕೆ, ಪ್ರತಿರೋಧ ಮತ್ತು ಮನುಷ್ಯ ಪ್ರಕೃತಿಯ ಅಜ್ಞಾನದ ರಾಜಸಿಕ ಎಲ್ಲಾ ಗಲಭೆಗಳಿಂದ ವಿಮೋಚನೆ ಪಡೆಯುವುದು ಸಾಧನದ ಉದ್ದೇಶವಾಗಿದೆ.

*

## ನಿಜವಾದ ಆಧ್ಯಾತ್ಮಿಕ ಸಂಬಂಧ

ಅಂತರಂಗದಲ್ಲಿ ಜೀವಿಸುವುದು ಆಧ್ಯಾತ್ಮಿಕ ಜೀವನದ ಮೊದಲ ತತ್ವವಾಗಿದೆ ಮತ್ತು ಅಂತರಂಗದಿಂದ ಭೌತಿಕ ಅಸ್ತಿತ್ವವನ್ನು ಮರುರಚಿಸಬೇಕಾಗಿದೆ. ಆದರೆ ಬಹಿರಂಗದಲ್ಲಿ ಇರುವುದು ಮತ್ತು ಶ್ರೀಮಾತೆಯವರೊಂದಿಗೆ ಸಂಬಂಧವಿಟ್ಟು–ಕೊಳ್ಳುವಂತೆ ಬಹಳಷ್ಟು ಒತ್ತಾಯಿಸುವುದು ಬಹಿರಂಗದ ಆಧ್ಯಾತ್ಮೀಕರಣಗೊಳ್ಳದ ಪ್ರಕೃತಿಯ ಸಾಮಾನ್ಯ ಪ್ರತಿಕ್ರಿಯೆಗಳಾಗಿವೆ.

*

*ಕೆಲವು ಜನರಿಗೆ ನೀವು ಶ್ರೀಮಾತೆಯವರೊಂದಿಗೆ, "ಅಂತರಂಗದೊಂದಿಗೆ ಹತ್ತಿರದ ಸಂಬಂಧ" ಎಂಬುದರ ಬಗ್ಗೆ ಬರೆದಿರುವಿರಿ. ಅತ್ಯಂತ ವಾಸ್ತವವಾದ ಸಂಬಂಧದ ಬಗ್ಗೆ ನಾನು ತಿಳಿಯಲು ಬಯಸುತ್ತೇನೆ. ಆಕೆಯೊಂದಿಗೆ ಆತ್ಮದ ಸಂಬಂಧ ಮಾತ್ರ ನಿಜವಾದ ಸಂಬಂಧ ಅಲ್ಲವೇ? ಆತ್ಮದ ಸಂಬಂಧ ಎಂದರೇನು? ಅದನ್ನು ನಾನು ಗುರುತಿಸುವುದು ಹೇಗೆ?*

ಅಂತರಂಗದ(ಆತ್ಮ) ಸಂಬಂಧವೆಂದರೆ, ಶ್ರೀಮಾತೆಯವರ ಸಾನಿಧ್ಯವನ್ನು ನೀವು ಅನುಭವಿಸುವುದು, ಎಲ್ಲಾ ಸಮಯದಲ್ಲಿಯೂ ಆಕೆಯೆಡೆಗೆ ತಿರುಗುವುದು, ಆಕೆಯ ಶಕ್ತಿ ಚಲಿಸುತ್ತಿರುವುದು, ಮಾರ್ಗದರ್ಶಿಸುತ್ತಿರುವುದು, ಸಹಾಯಕ–ವಾಗಿರುವುದರ ಬಗ್ಗೆ ಜಾಗೃತನಾಗಿರುವುದು. ಆಕೆಗಾಗಿ ಪ್ರೀತಿಯಿಂದ ತುಂಬಿರುವುದು ಮತ್ತು ದೈಹಿಕವಾಗಿ ಹತ್ತಿರವಿದ್ದರೂ, ಇಲ್ಲದಿದ್ದರೂ, ಯಾವಾಗಲೂ ಒಂದು

ಅತ್ಯಂತ ಸಾಮಿಪ್ಯವನ್ನು ಅನುಭವಿಸುವುದು. ಈ ಸಂಬಂಧವು ನಿಮ್ಮ ಮನ ಶ್ರೀಮಾತೆಯವರ ಮನಕ್ಕೆ ಹತ್ತಿರವಾದಾಗ, ನಿಮ್ಮ ಪ್ರಾಣವು ಆಕೆಯೊಂದಿಗೆ ಸಾಮರಸ್ಯಯುತವಾದಾಗ, ನಿಮ್ಮ ಇಡೀ ಭೌತಿಕ ಪ್ರಜ್ಞೆ ಆಕೆಯಿಂದ ತುಂಬಿದಾಗ, ನಿಮ್ಮ ಮನ, ಪ್ರಾಣ ಮತ್ತು ಅಂತಃಭೌತಿಕವು ಈ ರೀತಿಯ ಆಂತರಿಕ ಸಂಬಂಧ ಇಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಇವು ಅಂತರಂಗದ ಐಕ್ಯತೆಯ ಅಂಶಗಳಾಗಿವೆ. ಕೇವಲ ಚೈತ್ಯದಲ್ಲಿ ಮತ್ತು ಆತ್ಮದಲ್ಲಿ ಮಾತ್ರವಲ್ಲದೆ ಪ್ರಕೃತಿಯಲ್ಲಿ ಮಾಡಬೇಕಾಗಿದೆ.

ನಾನು ಏನು ಬರೆದಿದ್ದೆನೋ ಅದು ನನಗೆ ನೆನಪಿಲ್ಲ, ಆದರೆ, ಇದು ಅಂತರಂಗದ ಸಂಬಂಧವಾಗಿದೆ. ಮತ್ತು ಇದರ ವಿರುದ್ಧವಾಗಿ ಕೇವಲ ಬಹಿರಂಗ ಸ್ತರದಲ್ಲಿ ಆಕೆಯೊಂದಿಗೆ ಇಟ್ಟುಕೊಳ್ಳುವ ಸಂಬಂಧವಾಗಿರುತ್ತದೆ. ಕೇವಲ ಭೌತಿಕವಾಗಿ ಶ್ರೀಮಾತೆಯವರನ್ನು ಪ್ರಣಾಮ ಮತ್ತು ಧ್ಯಾನದ ಸಮಯದಲ್ಲಿ ಹಾಗೂ ವರ್ಷಕ್ಕೊಮ್ಮೆ ಹುಟ್ಟುಹಬ್ಬದ ಸಮಯದಲ್ಲಿ ಭೇಟಿಯಾದಾಗಲೂ ಸಹ ಈ ರೀತಿಯ ಸಂಬಂಧವನ್ನು ಇಟ್ಟುಕೊಳ್ಳುವುದು ಸಾಧ್ಯವೂ ಮತ್ತು ನಿಜವೂ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/448–54**

ನೀವು ಶ್ರೀಮಾತೆಯವರ ಮಗು ಮತ್ತು ಆಕೆಯ ಮಕ್ಕಳಿಗಾಗಿ ಶ್ರೀಮಾತೆಯವರ ಪ್ರೀತಿಯು ನಿಸ್ಸೀಮವಾದುದು ಮತ್ತು ಅವರ ಪ್ರಕೃತಿಯ ಕುಂದುಕೊರತೆಗಳನ್ನು ಆಕೆ ತಾಳ್ಮೆಯಿಂದ ಸಹಿಸಿಕೊಳ್ಳುತ್ತಾಳೆ. ಶ್ರೀಮಾತೆಯವರ ನಿಜವಾದ ಮಗುವಾಗಲು ಪ್ರಯತ್ನಿಸಿ; ಆ ಸಾಧ್ಯತೆ ನಿಮ್ಮಲ್ಲಿದೆ. ಆದರೆ ನಿಮ್ಮ ಬಾಹ್ಯ ಮನವು ಕ್ಷುಲ್ಲಕ ವಸ್ತುಗಳಿಂದ ತುಂಬಿಕೊಂಡಿದೆ. ಮತ್ತು ಆಗ್ಗಾಗ್ಗೆ ಹಿಂಸಾತ್ಮಕ ಗಲಭೆಯಿಂದ ಕೂಡಿದೆ. ನೀವು ಶ್ರೀಮಾತೆಯವರನ್ನು ಕೇವಲ ಕನಸಿನಲ್ಲಿ ನೋಡುವುದು ಮಾತ್ರವಲ್ಲದೆ ಎಲ್ಲ ಸಮಯದಲ್ಲಿಯೂ ನಿಮ್ಮ ಜೊತೆಗೆ ಮತ್ತು ನಿಮ್ಮಲ್ಲಿ ಆಕೆಯನ್ನು ನೋಡುವುದು ಮತ್ತು ಭಾವಿಸುವದನ್ನು ಕಲಿಯಿರಿ. ಆಗ ನಿಮ್ಮಲ್ಲಿ ನೀವು ನಿಯಂತ್ರಿಸುವುದು ಮತ್ತು ಬದಲಾಯಿಸುವುದು ಸುಲಭವೆಂದು ನಿಮಗನಿಸುತ್ತದೆ. ಆಕೆ ಅಲ್ಲಿದ್ದುಕೊಂಡು ನಿಮಗಾಗಿ ಕೆಲಸ ಮಾಡುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/452–53 – ಶ್ರೀ ಅರವಿಂದರು**

## ಶ್ರೀಮಾತೆಯವರ ಕಾಳಜಿ ಎಲ್ಲರಿಗಾಗಿ

ಶ್ರೀಮಾತೆಯವರು ಎಲ್ಲರನ್ನೂ ತನ್ನ ಮಕ್ಕಳಂತೆ ಕಾಳಜಿ ವಹಿಸುತ್ತಾರೆ. ಮತ್ತು ನಿನ್ನ ಬಗ್ಗೆ ಕಾಳಜಿ ವಹಿಸುವದಿಲ್ಲ ಎಂಬ ನಿನ್ನ ಈ ಯೋಚನೆ ಸ್ಪಷ್ಟವಾಗಿ ಒಂದು ಆಧಾರವಿಲ್ಲದ ವಿಚಾರವಾಗಿದೆ. ಮತ್ತು ಯಾವುದೇ ಘನ ಬುನಾದಿಯ ಮೇಲೆ ನಿಲ್ಲಲಾರದು. ಆಕೆ ನಿನಗಾಗಿ ಪ್ರೀತಿ ಮತ್ತು ಕಾಳಜಿಯ ಮಮತಾಮಯಿ–ಯಾಗಿದ್ದಾಳೆ. ಬೇರೆಯವರೊಡನೆ ಎಷ್ಟು ಪ್ರೀತಿ ಮತ್ತು ಕಾಳಜಿಯಿಂದ ಇರುತ್ತಾರೋ ಅದಕ್ಕಿಂತಲೂ ಹೆಚ್ಚಾಗಿ ನಿನ್ನ ಜೊತೆಗಿದ್ದಾರೆ. ಆ ವಿಚಾರದಲ್ಲಿ ನಾವು ನೋಡಬಹುದಾದ ಘನವಾದ ಅಥವಾ ನಿರ್ದಿಷ್ಟವಾದುದು ಯಾವುದೂ ಇಲ್ಲ. ಖಂಡಿತವಾಗಿಯೂ, ಶ್ರೀಮಾತೆಯವರ ಭಾವನೆಗಳಲ್ಲಿ ಯಾವುದೇ ಈ ರೀತಿಯ ಅಂಶಗಳಿಲ್ಲ.

ಆದರೆ ನಾನು ಗಮನಿಸುವದೇನೆಂದರೆ ಸಾಧಕರ ಮತ್ತು ಸಾಧಕಿಯರು (ವಿಶೇಷವಾಗಿ ಸಾಧಕಿಯರಲ್ಲಿ) ಹತಾಶರಾದಾಗ ಅಥವಾ ಅವರು ಯಾವಾಗಲೂ ಈ ರೀತಿಯ ವಿಚಾರಗಳು ಬರುತ್ತಲೇ ಇರುತ್ತವೆ. "ನೀವು ಎಲ್ಲರಿಗೂ ಪ್ರೀತಿ ಮತ್ತು ಕಾಳಜಿ ತೋರುತ್ತೀರಿ; ಕೇವಲ ನನಗೆ ಮಾತ್ರ ಪ್ರೀತಿ ಮತ್ತು ಕಾಳಜಿ ತೋರುವದಿಲ್ಲ, ಸ್ಪಷ್ಟವಾಗಿ ನಾನು ಯೋಗಕ್ಕೆ ಅಯೋಗ್ಯನಿದ್ದೇನೆ. ಅಥವಾ ನೀವು ಆ ರೀತಿಯಾಗಿ ನನ್ನನ್ನು ನಿಮ್ಮಿಂದ ದೂರವಿಡಬಾರದಿತ್ತು. ನಾನು ಎಂದೂ ಏನನ್ನೂ ಸಾಧಿಸಲಾರೆ, ನಾನು ಕೇವಲ ನಿಮಗೆ ತೊಂದರೆ ಕೊಡಲು ಇಲ್ಲಿದ್ದೇನೆಯೇ ನಾನು ಇಲ್ಲಿರುವದರ ಪ್ರಯೋಜನವಾದರೂ ಏನಿದೆ? ನಾನು ಏತಕ್ಕಾಗಿ ಬದುಕಿರಲಿ?" ಎಂದು ಅವರು ಯಾವಾಗಲೂ ನಿನ್ನಂತೆಯೇ ಹೇಳುತ್ತಾರೆ. ಆದರೆ ಯಾವಾಗ ಚೈತ್ಯ ಪುರುಷ ಸರಿಯಾಗಿ ಜಾಗೃತವಾಗಿರುತ್ತದೆಯೋ, ಆಗ ಈ ಯೋಚನೆಗಳು, ಈ ಹತಾಶೆ, ಈ ದುರ್ಕಲ್ಪನೆಗಳು ತೊಲಗುತ್ತವೆ. ಈ ಹತಾಶೆ ಮತ್ತು ಅದು ತರುವ ತಪ್ಪಾದ ಸಲಹೆಗಳ ಕಾರಣದಿಂದ ನಿನಗೆ ಹೀಗನಿಸುತ್ತದೆ ಹೊರತು ನಿನ್ನೊಂದಿಗಿನ ಶ್ರೀಮಾತೆಯವರ ಭಾವನೆಗಳ ಅಥವಾ ವರ್ತನೆಗೆ ಅನುಗುಣವಾದ ಯಾವುದೇ ನೈಜತೆ ಇಲ್ಲವಾಗಿದೆ. ನಿಮ್ಮಲ್ಲಿ ಅಂತಃಸತ್ತೆ, ನಿಮ್ಮಲ್ಲಿಯ ಆತ್ಮವು ಹೆಚ್ಚು ಹೆಚ್ಚು ಮುಂದೆ ಬಂದಂತೆ ಇದು ಹೋಗುತ್ತದೆ. ನಿಮ್ಮಲ್ಲಿಯ ಆತ್ಮವು ಹೆಚ್ಚು ಹೆಚ್ಚು ಶ್ರೀಮಾತೆಯವರನ್ನು ಪ್ರೀತಿಸುತ್ತದೆ. ಮತ್ತು ಶ್ರೀಮಾತೆಯವರು ನಿನ್ನನ್ನು ಪ್ರೀತಿಸುತ್ತಾರೆ ಎಂಬುದು ಅದಕ್ಕೆ ತಿಳಿದಿರುತ್ತದೆ; ಮನ ಮತ್ತು ಪ್ರಾಣ ಪ್ರಕೃತಿಯನ್ನು ವಂಚಿಸುವ ಸಲಹೆಗಳಿಂದ ಅದು ಕುರುಡಾಗುವದಿಲ್ಲ.

ಹಾಗಾಗಿ ಈ ಆಧಾರವಿಲ್ಲದ ಯೋಚನೆಗಳಲ್ಲಿರಬೇಡಿ ಆದರೆ ಅವು ಕೇವಲ ಹತಾಶೆ ಅಥವಾ ಬಾಹ್ಯದಿಂದ ಬಂದ ಸಲಹೆಗಳ ಮಾನಸಿಕ ಸ್ಥಿತಿಯದ್ದಾಗಿರುತ್ತವೆ. ನಿಮ್ಮಲಿ ಅಂತರಾತ್ಮವು ಬೆಳೆಯಲಿ ಮತ್ತು ಶ್ರೀಮಾತೆಯವರ ಶಕ್ತಿ ಕಾರ್ಯಗೈಯಲಿ. ಮಗು ಮತ್ತು ಶ್ರೀಮಾತೆಯವರ ಸಂಬಂಧ ನಿಮ್ಮ ಆತ್ಮನಲ್ಲಿದೆ; ಇದು ತನ್ನಷ್ಟಕ್ಕೆ ತಾನೇ ನಿಮ್ಮ ಮನ ಮತ್ತು ಪ್ರಾಣ ಮತ್ತು ದೈಹಿಕ ಪ್ರಜ್ಞೆಗೆ ಅನುಭವವಾಗುವಂತೆ ಮಾಡುತ್ತದೆ. ಯಾವಾಗ ಇದು ನಮ್ಮ ಪ್ರಜ್ಞೆಯ ತಳಹದಿಯಾಗುತ್ತದೆಯೋ ಆಗ ಸಾಧನವು ಗಟ್ಟಿಯಾಗಿ ಸುಭದ್ರವಾಗಿ ನಡೆಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/454–55 – ಶ್ರೀ ಅರವಿಂದರು**

## ಶ್ರೀಮಾತೆಯೊಡನೆ ಆಂತರಿಕ ಸಂಪರ್ಕ

**– ಅನು: ನಾಗಜ್ಯೋತಿ ಮಾನ್ವಿ**

**ಶ್ರೀಮಾತೆಯವರೊಂದಿಗೆ ನಿಮ್ಮಲ್ಲಿ ಜೀವಿಸಿ**

*ಶ್ರೀಮಾತೆಯವರ ಪ್ರಜ್ಞೆಯ ಅಂತಃಭಾವನೆಯೊಂದಿಗೆ ನಾನು ನನ್ನ ಕೋಣೆಯಲ್ಲಿ ಬಹಳ ಸಂತೋಷದಿಂದ ಇದ್ದೆ. Xರವರನ್ನು ನಾನು ನೋಡಲು ಹೋದಾಗ, ನನಗೆ ಅಸಮಾಧಾನವೆಂದೆನಿಸಿತು. ಮತ್ತು ಶ್ರೀಮಾತೆಯವರೊಂದಿಗೆ ಅಂತಃಸಂಪರ್ಕವನ್ನು ನಾನು ಕಳೆದುಕೊಂಡೆನು. ಜನರೊಂದಿಗೆ ಬೆರೆಯುವದು ಅಂತಃಭಾವನೆಯನ್ನು ನಾಶಪಡಿಸುತ್ತದೆ. ಆದರೆ ನಾನು ಯಾವಾಗಲೂ ಏಕಾಂತವಾಗಿರಲಾಗುವದಿಲ್ಲ. ಯಾವುದು ಸರಿಯಾಗಿದೆ?*

ಶ್ರೀಮಾತೆಯವರೊಂದಿಗೆ ನಿಮ್ಮ ಅಂತರಂಗದಲ್ಲಿ ಆಕೆಯ ಪ್ರಜ್ಞೆಯ ಸಂಪರ್ಕದೊಂದಿಗೆ ಜೀವಿಸುವದನ್ನು ನೀವು ಕಲಿಯಬೇಕಾಗಿದೆ. ಮತ್ತು ನಿಮ್ಮ ಬಾಹ್ಯ ಅಸ್ತಿತ್ವದೊಂದಿಗೆ ಮಾತ್ರ ಬೇರೆಯವರನ್ನು ಭೇಟಿಯಾಗಿರಿ.

*

**ಶಾಂತಿಯ ಅವಶ್ಯಕತೆ**

ಈ ಸಾಧನಕ್ಕೆ ಅತ್ಯಂತ ಅವಶ್ಯವಾಗಿ ಬೇಕಾಗಿರುವ ವಸ್ತುವೆಂದರೆ ಶಾಂತಿ, ಸಮಾಧಾನ ವಿಶೇಷವಾಗಿ ಪ್ರಾಣದಲ್ಲಿ ಸಂದರ್ಭದ ಅಥವಾ ಸುತ್ತಮುತ್ತಲಿನ ವಾತಾವರಣದ ಮೇಲೆ ಅವಲಂಬಿತವಾಗದೇ ಇರಬೇಕು, ಆದರೆ ಅದು ಶ್ರೀಮಾತೆಯವರ ಒಂದು ಉನ್ನತ ದೈವ ಪ್ರಜ್ಞೆಯೊಡನೆ ಆಂತರಿಕ ಸಂಬಂಧದಿಂದ

ಹುಟ್ಟಿದ ಶಾಂತಿಯಾಗಿರಬೇಕು. ಯಾರಿಗೆ ಈ ರೀತಿಯ ಶಾಂತಿಯಿಲ್ಲವೋ ಅಥವಾ ಅದಕ್ಕೆ ಅಭೀಪ್ಸೆ ಪಡುವದಿಲ್ಲವೋ ಅವರು ಆಶ್ರಮಕ್ಕೆ ಬಂದು ಹತ್ತು ಅಥವಾ ಇಪ್ಪತ್ತು ವರ್ಷ ಕಾಲದವರೆಗೆ ವಾಸಿಸಿದ್ದರೂ ಅವರ ಹೋರಾಟ ಮತ್ತು ಅವಿಶ್ರಾಂತತೆ ಇಲ್ಲಿ ಕೊನೆಯಾಗುವದಿಲ್ಲ. ಆದರೆ ಯಾರು ತಮ್ಮ ಮನ, ಪ್ರಾಣವನ್ನು ಶ್ರೀಮಾತೆಯವರ ಶಾಂತಿ ಮತ್ತು ಶಕ್ತಿಗೆ ತೆರೆದುಕೊಳ್ಳುತ್ತಾರೋ, ಅವರ ಕೆಲಸವು ಅತಿ ಕಠಿಣ ಮತ್ತು ಅಹಿತವಾಗಿದ್ದರೂ ಮತ್ತು ಪರಿಸರ ಎಷ್ಟೇ ಕೆಟ್ಟದ್ದಾಗಿದ್ದರೂ ಅವರು ಈ ಶಾಂತಿಯನ್ನು ಪಡೆಯಲು ಸಾಧ್ಯವಾಗುತ್ತದೆ.

*

**ಅಂತರಂಗದೆಡೆಗೆ ತಿರುಗುವುದು**

*ಯಾರೊಂದಿಗೇ ಆಗಲಿ ನನ್ನ ಎಲ್ಲಾ ಸಂಬಂಧಗಳನ್ನು ಬಿಟ್ಟುಕೊಡಲು ಸಿದ್ಧನಿದ್ದೇನೆ ಮತ್ತು ಕೇವಲ ಶ್ರೀಮಾತೆಯಲ್ಲಿ ಮಾತ್ರ ಲೀನವಾಗ–ಬೇಕೆಂದೆನಿಸುತ್ತದೆ. ದಯವಿಟ್ಟು ಈ ಎಲ್ಲಾ ಅಡೆತಡೆಗಳಿಂದ ಹೊರಬರಲು ಯಾವ ನಿಯಮ ಪಾಲಿಸಬೇಕೆಂದು ತಿಳಿಸಿ. ಅಂತರಂಗ ಮತ್ತು ಬಹಿರಂಗದಲ್ಲಿಯೂ ಸಹ ಶ್ರೀಮಾತೆಯವರು ನನಗೆ ಸಹಾಯ ಮಾಡಲಿ.*

ಅತ್ಯಂತ ಪ್ರಮುಖವಾದ ವಿಷಯವೆಂದರೆ ಅಂತರಂಗದಲ್ಲಿ ಶ್ರೀಮಾತೆಯೆಡೆಗೆ ಮತ್ತು ಆಕೆಯೆಡೆಗೆ ಮಾತ್ರ ತಿರುಗುವದಾಗಿದೆ. ಇದಕ್ಕೆ ಸಹಾಯಕ ಎಂಬಂತೆ ಬಹಳಷ್ಟು ಬಾಹ್ಯದ ಸಂಪರ್ಕಗಳನ್ನು ತಿರಸ್ಕರಿಸುವುದು ಅವಶ್ಯವಾಗಿದೆ. ಆದರೆ ಜನರೊಂದಿಗಿರುವ ಬಾಹ್ಯದ ಸಂಪರ್ಕಗಳನ್ನು ತಿರಸ್ಕರಿಸುವುದ ಅವಶ್ಯಕ ಅಥವಾ ಅಪೇಕ್ಷಣೀಯವೇನಲ್ಲ. ಸಂಪರ್ಕಗಳನ್ನು ಸರಿಯಾದ ಅಂತಃಪ್ರಜ್ಞೆಯಿಂದ ಭೇಟಿಯಾಗುವುದು ಅವಶ್ಯಕವಾಗಿದೆ. ನಿಮ್ಮಲ್ಲಿ ನೀವು ಬಾಹ್ಯದಲ್ಲಿಯೇ ಇರುವುದಲ್ಲ – ಅವುಗಳನ್ನು ಮೇಲ್ಮೈಯ ವಿಷಯಗಳು ಎಂದು ನಡೆದುಕೊಳ್ಳಬೇಕು. ಅವುಗಳಿಗೆ ಮೋಹಿತರಾಗುವದಾಗಲಿ ಅಥವಾ ಯಾವುದೇ ರೀತಿಯಲ್ಲಿ ಅವುಗಳ ಪ್ರಭಾವದೊಳಗೆ ಸಿಲುಕಬಾರದು.

*

**ಖಿನ್ನತೆ ಮತ್ತು ಕಲ್ಪನೆಗಳು**

ಯಾವುದೇ ಸಂದರ್ಭದಲ್ಲಿ ನೀವು ಶ್ರೀಮಾತೆಯವರ ಸಂಪರ್ಕವನ್ನು ಯಾವಾಗಲೂ ಇಟ್ಟುಕೊಳ್ಳಬೇಕೆಂದು ಬಯಸಿದರೆ, ನೀವು ಖಿನ್ನತೆಯಿಂದ ಮತ್ತು

ಅದನ್ನು ತರುವ ಮಾನಸಿಕ ಕಲ್ಪನೆಯಿಂದ ಹೊರಬರಲೇಬೇಕು. ಮಾರ್ಗದಲ್ಲಿ ಇದಕ್ಕಿಂತ ಹೆಚ್ಚಾಗಿ ಬೇರೆಯ ಅಂಶಗಳು ಅಡ್ಡಿಪಡಿಸಲಾರವು.

*

ಯಾರೊಬ್ಬರೂ ಯಾವುದರ ಅಥವಾ ಯಾರೊಬ್ಬರ ಬಗ್ಗೆ ಮಾತ್ಸರ್ಯ ಹೊಂದುವ ಅವಶ್ಯಕವಿಲ್ಲ; ಪ್ರತಿಯೊಬ್ಬರೂ, ತಮ್ಮದೇ ರೀತಿಯ ವಿಶಿಷ್ಟ ಸಂಪರ್ಕವನ್ನು ಹೊಂದಿರುತ್ತಾರೆ.


*

ಇದು ಎಲ್ಲರೂ ಇಟ್ಟುಕೊಂಡಿರುವ ಸಂಪರ್ಕಕ್ಕಿಂತಲೂ ವಿಶಿಷ್ಟವಾಗಿರುತ್ತದೆ. ಇದು ಹಾಗಿದ್ದ ಕಾರಣ ನೀವು ಬಾಹ್ಯದಲ್ಲಿ ಬದುಕುತ್ತಿದ್ದೀರಿ, ಬಾಹ್ಯದ ಸಂಪರ್ಕಗಳಿಂದ ಗೊಂದಲಕ್ಕೊಳಗಾಗಲು ನಿಮಗೆ ನೀವು ಅಪ್ಪಣೆ ಕೊಟ್ಟಿದೀರಿ. ಅಂತರಂಗದಲ್ಲಿ ಬದುಕದ ಹೊರತು ನೀವು ಶಾಶ್ವತವಾದ ಸಂತೋಷವನ್ನು ಪಡೆಯಲು ಸಾಧ್ಯವಿಲ್ಲ. ಕಾರ್ಯ, ಕ್ರಿಯೆಯನ್ನು ಶ್ರೀಮಾತೆಯವರಿಗೆ ಅರ್ಪಿಸಲೇಬೇಕು. ನಿಮಗಾಗಿ ಎಂಬ ಯಾವುದೇ ಯೋಚನೆಯಿಲ್ಲದೆ, ನಿಮ್ಮ ಸ್ವಂತ ವಿಚಾರಗಳು ಪ್ರಾಧಾನ್ಯತೆಗಳು, ಭಾವನೆಗಳು, ಇಷ್ಟಗಳು ಮತ್ತು ಇಷ್ಟ ಇಲ್ಲದಿರುವಿಕೆಗಳು ಇಲ್ಲದೆ ಆಕೆಗೋಸ್ಕರ ಮಾತ್ರ ಮಾಡಬೇಕು. ಒಂದು ವೇಳೆ ನಿಮ್ಮ ಲಕ್ಷ್ಯ ಈಗ ಹೇಳಿದ ವಿಷಯಗಳು ಮೇಲಿದ್ದರೆ, ಆಗ ಪ್ರತಿ ಹೆಜ್ಜೆಯಲ್ಲಿಯೂ ನೀವು ಮನದಲ್ಲಿ ಅಥವಾ ಪ್ರಾಣದಲ್ಲಿ ಕೆಲವು ಘರ್ಷಣೆಗಳನ್ನು ಅನುಭವಿಸಬೇಕಾಗುತ್ತದೆ. ಅಥವಾ ಇವು ತುಲನಾತ್ಮಕವಾಗಿ ನಿಶ್ಚಲವಾಗಿದ್ದರೆ, ದೇಹದಲ್ಲಿ ಮತ್ತು ನರಗಳಲ್ಲಿ ಘರ್ಷಣೆಯಾಗುತ್ತದೆ. ನೀವು ಅಂತರಂಗದಲ್ಲಿ ಶ್ರೀಮಾತೆಯವರೊಂದಿಗೆ ಜೀವಿಸಿದರೆ ಶಾಂತಿ ಮತ್ತು ಸಂತೋಷ ಸ್ಥಿರವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/457–60 – ಶ್ರೀ ಅರವಿಂದರು**

ಶ್ರೀಮಾತೆಯವರ ಪ್ರಜ್ಞೆಯೊಂದಿಗಿನ ಸಂಪರ್ಕವು ಎಲ್ಲಾ ಅವಶ್ಯಕ ಸಾಕ್ಷಾತ್ಕಾರ ಮತ್ತು ನಿಜ ಅಭೀಪ್ಸೆಗಳ ನೆರವೇರಿಕೆಗಳೆಡೆ ಕರೆದೊಯ್ಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/457 – ಶ್ರೀ ಅರವಿಂದರು**



# ಸಾಮಿಪ್ಯಕ್ಕೆ ಸೂಕ್ತ ಪಥ

**– ಅನು: ಕಿಶೋರಕುಮಾರ ಕಾಸಾರ**

## ದಿವ್ಯಮಾತೆಯೆಡೆಗಿನ ಋತಂಬರ ಪ್ರೇಮ

*ತಾಯಿ ಮತ್ತು ಮಗುವಿನ ನಡುವಿನ ಪ್ರೇಮಬಂಧನವೆಂದರೆ, ಅದು ಕೇವಲ ತಾಯಿ ತನ್ನ ಮಗುವಿನೆಡೆಗೆ ತೋರುವ ಪ್ರೀತಿಯಲ್ಲ. ಬದಲಾಗಿ ತಾಯಿ ಹರಿಸುವ ಪ್ರೀತಿಗೆ ಪ್ರತಿಯಾಗಿ ಮಗುವೂ ಸಹ ತನ್ನ ತಾಯಿಯೆಡೆಗೆ ಪ್ರೀತಿಯ ಭಾವನೆಯನ್ನು ಇರಿಸಿಕೊಂಡಿರಬೇಕು. ಅಷ್ಟೇ ಅಲ್ಲದೆ, ಅವಳ ನುಡಿಗಳನ್ನು ಪರಿಪಾಲಿಸಬೇಕು. ಅಂತೆಯೇ ನೀವು ಸಹ ದಿವ್ಯಮಾತೆಯ ನಿಜವಾದ ಪ್ರಿಯಪುತ್ರರಾಗ ಬಯಸಿದರೆ, ನೀವು ಮೊದಲು ಮಾಡಬೇಕಿರುವ ಕರ್ತವ್ಯವೆಂದರೆ, ನೀವು ನಿಮ್ಮತನವನ್ನು ಸಂಪೂರ್ಣವಾಗಿ ಅವಳಡಿಯಲ್ಲಿ ಸಮರ್ಪಿಸಬೇಕು ಮತ್ತು ಅವಳು ನಿರ್ದೇಶಿಸುವ ಆಜ್ಞೆಗಳನ್ನು ಪಾಲಿಸುತ್ತ, ಅವಳ ಇಚ್ಛೆಯಂತೆ ನಡೆಯಬೇಕು. ಹಾಗೂ ಯಾವುದೇ ಸಂದರ್ಭದಲ್ಲೂ ಅವಳಿಚ್ಛೆ–ಸಲಹೆಗಳನ್ನು ಧಿಕ್ಕರಿಸಿ ದಂಗೆಯೇಳಲು ಪ್ರಯತ್ನಿಸಬಾರದು. ಶ್ರೀಮಾತೆಯು ನಿಮಗಾಗಿ ಒಳ್ಳೆಯದನ್ನೇ ನಿರ್ದೇಶಿಸುತ್ತಿರಬೇಕಾದರೆ ನೀವೇಕೆ ಅದನ್ನು ನಿರ್ಲಕ್ಷಿಸುವಿರಿ?*

ಮಗುವು ತನ್ನದೇ ಆದ ಬೌದ್ಧಿಕ ಮಟ್ಟದಲ್ಲಿ ಬಯಸುವ ಎಲ್ಲಾ ಬಯಕೆಗಳನ್ನು ಮಾತೆಯಾದವಳು ಈಡೇರಿಸುವದಿಲ್ಲ. ಏಕೆಂದರೆ ಮಗುವು ಬಯಸುತ್ತಿರುವ ದ್ರವ್ಯವು ಅವನಿಗೆ ಅಪಾಯಕಾರಿಯಾಗಬಹುದೆಂಬ ಸತ್ಯವು ಮಾತೆಗೆ ತಿಳಿದಿರುತ್ತದೆ. ಹಾಗಾಗಿಯೇ ಅವಳು ತನ್ನ ಮಗುವಿನ ಬಯಕೆಯನ್ನು ನಿಷ್ಠುರವಾಗಿಯೇ ತಿರಸ್ಕರಿಸುತ್ತಾಳೆ. ಇದೇ ಅವಳ ನಿಜವಾದ ಪ್ರೀತಿಯುತ ಭಾವನೆಯಾಗಿದೆ. ಹಾಗೆಂದ ಮಾತ್ರಕ್ಕೆ ಮನುಷ್ಯ ಮಾತ್ರನು ಬಯಸುವ ಬಯಕೆಗಳೆಲ್ಲವೂ ಕೆಟ್ಟದ್ದೆಂದು ಹೇಳಲಾಗದು. ನಿಮ್ಮ ವೈಚಾರಿಕ ಮಿತಿಯೊಳಗೆ ನುಸುಳುವ ಎಲ್ಲ ಪ್ರಚೋದನೆಗಳನ್ನು ಸ್ವೀಕರಸದೇ, ಅವುಗಳನ್ನು ನಿಮ್ಮ ಗ್ರಹಿಕೆಯ ಮಿತಿಯಲ್ಲಿ ಪರಾಮರ್ಶಿಸಿ. ಅವುಗಳು ಯೋಗ್ಯವೆಂದು ನಿಮಗನಿಸಿದ್ದಲ್ಲಿ, ದಿವ್ಯಮಾತೆಯ ಇಚ್ಛೆಗೆ ನಿಮ್ಮನ್ನು ಒಂದು ಮಾಧ್ಯಮವನ್ನಾಗಿಸಿಕೊಂಡು ಮುನ್ನಡೆಯಿರಿ. ಏಕೆಂದರೆ ಅವಳ ಇಚ್ಛೆಯೊಂದಿದ್ದರೆ ನೀವು ನಿಮ್ಮದೇ ಆದ ಮಾರ್ಗದಲ್ಲಿ ಸಾಧನೆಗೈಯಲು ಸಮರ್ಥರಾಗುವಿರಿ.

*

**ದಿವ್ಯತೆಯೆಡೆಗೆ ಮುಖ ಮಾಡಿರುವ ಪ್ರೇಮ**

ದಿವ್ಯತೆಯೆಡೆಗೆ ಮುಖಮಾಡಿರುವ ಪ್ರೇಮವೆಂಬುದು ಮನುಷ್ಯ ಮಾತ್ರನು ದಿನನಿತ್ಯದಲಿ ಬಳಸುವ ಸಾಮಾನ್ಯ ಪ್ರೀತಿಯ ಭಾವನೆಯಾಗಿರಬಾರದು. ಏಕೆಂದರೆ ಅದು ಪ್ರೇಮವಲ್ಲ, ಬದಲಾಗಿ ಕೇವಲ ಒಂದು ವೈಚಾರಿಕ ಬಯಕೆಯಾಗಿದೆ; ಅದು ದಿವ್ಯ ಪ್ರೇಮವಲ್ಲ, ಬದಲಾಗಿ ಸರ್ವವನ್ನೂ ಸ್ವಾಧೀನಪಡಿಸಿಕೊಂಡು ಅದರ ಮೇಲೆ ತನ್ನ ಏಕಸ್ವಾಮಿತ್ವವನ್ನು ಜಾರಿಗೆ ತರಬೇಕೆಂಬ ಪ್ರಚೋದನೆಯಾಗಿದೆ; ಹಾಗಾಗಿ ಇಂತಹ ಕ್ಷುದ್ರ ಪ್ರಚೋದನೆಯನ್ನು ಅಲ್ಪ ಪ್ರಮಾಣದಲ್ಲೂ ಸಹ ಯೋಗ ಸಾಧನೆಯೊಳಗೆ ಪ್ರವೇಶಿಸದಂತೆ ಪ್ರತಿಬಂಧಿಸಬೇಕು. ನಿಜವಾದ ದಿವ್ಯ ಪ್ರೇಮವೆಂದರೆ, ಯಾವುದೇ ಸ್ವಾರ್ಥ–ಅಪೇಕ್ಷೆಗಳಿಲ್ಲದೆ ದಿವ್ಯಮಾತೆಯಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ಸ್ವ–ಅರ್ಪಣೆ, ಸಮರ್ಪಣೆಗೊಳ್ಳುವುದೇ ಆಗಿದೆ. ಇಂತಹ ದಿವ್ಯ ಪ್ರೇಮವು ಯಾವುದೇ ತೆರನಾದ ಹಕ್ಕನ್ನು ಚಲಾಯಿಸುವದಿಲ್ಲ, ಘೋರ ಷರತ್ತುಗಳನ್ನು ವಿಧಿಸುವದಿಲ್ಲ, ಕರಾರುಗಳನ್ನು ಹೇರುವದಿಲ್ಲ, ಅಸೂಯೆ–ಹೆಮ್ಮೆ–ಕೋಪಗಳಂತಹ ತ್ರಿವಿಧ ಭಾವನೆಗಳಿಂದ ಉದಿಸುವ ಹಿಂಸಾತ್ಮಕ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವದಿಲ್ಲ. ಏಕೆಂದರೆ ದಿವ್ಯ ಪ್ರೇಮವು ಇಂತಹ ಅಸುರೀ

ಭಾವನೆಗಳಿಂದ ಮುಕ್ತವಾಗಿದ್ದು, ನಮ್ಮಿಂದ ಹರಿಯುವ ದಿವ್ಯ ಪ್ರೇಮಕ್ಕೆ ಪ್ರತಿಯಾಗಿ ದಿವ್ಯಮಾತೆಯೂ ತನ್ನನ್ನು ತಾನೇ ಸಮರ್ಪಿಸಿಕೊಳ್ಳುತ್ತಾಳೆ. ದಿವ್ಯಮಾತೆಯ ಈ ಸಮರ್ಪಣೆಯ ಪ್ರಕ್ರಿಯೆಯು ನಿಮ್ಮ ಅಂತರಂಗದಲ್ಲಿ ನೆಲೆಗೊಂಡ ಸಮರ್ಪಣಾ ಮನೋಭಾವನೆಯನ್ನು ಪ್ರತಿನಿಧಿಸುವ ಸಾಂಕೇತಿಕ ನಿರೂಪಣೆಯೇ ಆಗಿದೆ. ಏಕೆಂದರೆ, ನಿಮ್ಮ ಅನ್ನಮಯ–ಪ್ರಾಣಮಯ–ಮನೋಮಯಗಳಲ್ಲಿ ಅವಳ ಸನ್ನಿಧಿಯಿದ್ದು, ಅಲ್ಲಿಯಿಂದಲೇ ಅವಳು ನಿಮ್ಮನ್ನು ದಿವ್ಯ ಸಾಮ್ರಾಜ್ಯಕ್ಕೆಂದು ಸಿದ್ಧಪಡಿಸುತ್ತಿದ್ದಾಳೆ. ನಿಮ್ಮ ಅಸ್ತಿತ್ವದ ಎಲ್ಲಾ ಚಾಲಕ ಶಕ್ತಿಗಳನ್ನು ಏಕೀಕರಿಸಿ, ಅವುಗಳನ್ನು ಪ್ರಜ್ಞೆಯ ಪೂರ್ಣತ್ವದೆಡೆಗೆ ಪ್ರವಹಿಸುತ್ತಿದ್ದಾಳೆ, ಕೊನೆಗೊಮ್ಮೆ ತನ್ನ ದಿವ್ಯ ಪ್ರೇಮದ ತೋಳ್ಬಂಧನದಲ್ಲಿ ನಿಮ್ಮನ್ನು ಸುರಕ್ಷಿತವಾಗಿ ಎತ್ತಿಕೊಂಡು ಪರಮ ಪುರುಷನೆಡೆಗೆ ಕರೆದೊಯ್ಯುತ್ತಾಳೆ. ಈ ಅನುಭವವನ್ನು ನೀವೆಲ್ಲರೂ ಅನುಭವಿಸಲೇಬೇಕು ಮತ್ತು ಆ ಆನಂದವನ್ನು ನಿಮ್ಮ ದೇಹ–ಪ್ರಾಣ–ಮನಗಳ ತುಂಬ ತುಂಬಿಸಿಕೊಳ್ಳಬೇಕು. ಈ ದರ್ಶನಕ್ಕೆ ಕಾಲ ಮತ್ತು ಪೂರ್ಣತೆಯ ಮಿತಿಯಿಲ್ಲ. ಒಮ್ಮೆ ಈ ಅನುಭವವನ್ನು ಪಡೆದದ್ದೇ ಆದಲ್ಲಿ, ನಿಮಗೆ ಭೌತಿಕ ಪ್ರಪಂಚದ ಬೇರಾವ ನಿರಾಶಾದಾಯಕ ಬಯಕೆಗಳು ಕಾಡುವದಿಲ್ಲ. ಈ ದಿವ್ಯಾನುಭವವನ್ನು ಅಪೇಕ್ಷಿಸುವ ಪ್ರತಿಯೊಬ್ಬ ಮನುಷ್ಯನಿಗೂ ಅದನ್ನು ಒದಗಿಸಿಕೊಡಲೆಂದು ಪ್ರಕೃತಿಯು ಶುದ್ಧೀಕರಣ ಪ್ರಕ್ರಿಯೆಯನ್ನು ಆರಂಭಿಸುತ್ತದೆ. ಅದರ ಮುಖಾಂತರ ಸಾಧಕನು ಆ ಅನುಭವವನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾನೆ.

ನೀವು ನಿಮ್ಮ ಪ್ರೇಮವನ್ನು ಸ್ವಾರ್ಥ ಮತ್ತು ಅಪೇಕ್ಷೆಗಳಿಂದ ಮುಕ್ತವಾಗಿಸಿ ಶುದ್ಧವಾಗಿರಿಸಿಕೊಳ್ಳಿ. ಆಗ ಮಾತ್ರ ನೀವು ನಿಮ್ಮ ಸಾಧನೆಗೆ ಪ್ರತಿಯಾಗಿ ದಿವ್ಯ ಪ್ರೇಮವನ್ನು ಪಡೆಯುತ್ತೀರಿ.

*

**ಶ್ರೀಮಾತೆಯೊಂದಿಗೆ ಇತರರನ್ನೂ ಪ್ರೀತಿಸಿ**

ದಿವ್ಯಮಾತೆಯ ಮೇಲೆ ನಿಮಗಿರುವ ಗಾಢವಾದ ಪ್ರೇಮ ಮತ್ತು ನಿಮ್ಮ ದೈನಂದಿನ ಜೀವನದಲ್ಲಿ ನಿಮ್ಮ ಜೊತೆಗಿರುವ ಅಥವಾ ನಿಮ್ಮ ಜೊತೆಗೆ ಕಾರ್ಯ ನಿರ್ವಹಿಸುತ್ತಿರುವ ಇತರ ಜನರೊಂದಿಗೆ ನೀವು ಬೆಳೆಸಿಕೊಂಡ ಮಮತೆ–ವಾತ್ಸಲ್ಯದ ಪ್ರವೃತ್ತಿಗಳೆಲ್ಲವೂ ಆ ಊರ್ಧ್ವಮೂಲದ ಅತೀಂದ್ರಿಯ ಸ್ತರದಿಂದಲೇ

ಬಂದಿರುವಂತವುಗಳಾಗಿವೆ. ಮತ್ತು ಅಲ್ಲಿಯಿಂದಲೇ ಆ ಅತೀಂದ್ರಿಯತ್ವವು ನಿಮ್ಮೊಳಗೆ ಈ ಪ್ರೇಮಮಯ ಭಾವನೆಗಳನ್ನು ತುಂಬಿಸಿರುತ್ತದೆ. ಒಮ್ಮೊಮ್ಮೆ ಆ ದಿವ್ಯ ಶಕ್ತಿಯು ತನ್ನ ಪ್ರಭಾವವನ್ನು ತೀವ್ರಗೊಳಿಸಿದಾಗ ದಿವ್ಯಮಾತೆಯ ಮೇಲಿರುವ ನಿಮ್ಮ ಪ್ರೇಮ ಭಾವನೆಯು ಮತ್ತಷ್ಟು ಬಲಗೊಳ್ಳುತ್ತದೆ. ಈ ಪ್ರಕ್ರಿಯೆಯೇ ಮುಂದೆ ಪ್ರಕೃತಿಯ ಪ್ರಮುಖ ಚಾಲಕ ಶಕ್ತಿಯಾಗಿ ಪರಿವರ್ತನೆಯಾಗುತ್ತದೆ. ಇನ್ನು ಇತರ ಜನಾಂಗದೆಡೆಗೆ ನಿಮಗಿರುವ ದಯೆ–ವಾತ್ಸಲ್ಯದ ಭಾವನೆಗಳೂ ಸಹ ಗಟ್ಟಿಯಾಗುತ್ತವೆ. ಈ ಪ್ರವೃತ್ತಿಯು ನಿಮ್ಮ ವೈಯಕ್ತಿಯ ಸಂಬಂಧದ ಪರಿಣಾಮದಿಂದ ಸಂಭವಿಸಿದ್ದಲ್ಲ. ಬದಲಾಗಿ ಆ ದಿವ್ಯಮಾತೆಯ ಮಕ್ಕಳಾದ ಇಡೀ ಮಾನವ ಜನಾಂಗದ ಸುಪ್ತಪ್ರಜ್ಞೆಯಾಳದಲ್ಲಡಗಿದ ಆತ್ಮ–ಆತ್ಮಗಳ ಬಂಧನವೇ ಈ ಪ್ರೇಮವೃದ್ಧಿಗೆ ಕಾರಣವಾಗಿರುತ್ತದೆ. ಚ್ಯುತಿಯಿರದ ಈ ದಿವ್ಯಾನುಭವವು ಕಷ್ಟ–ನಷ್ಟಗಳಿಂದ ದೂರವಾಗಿದ್ದು, ಸದಾಕಾಲ ದಿವ್ಯಾನಂದ ಮತ್ತು ವಿಶ್ವಮಾನವ ಪ್ರೇಮವನ್ನು ಸೃಷ್ಟಿಸುತ್ತ ಅವುಗಳನ್ನು ಮರ್ತ್ಯಲೋಕದೆಡೆಗೆ ಪ್ರವಹಿಸುವ ಕಾರ್ಯದಲ್ಲಿ ನಿರತವಾಗಿರುತ್ತದೆ. ವ್ಯಕ್ತಿಗತವಾದ ಪ್ರೇಮ ಭಾವನೆಯು ಪರಿಶುದ್ಧವಾದ ದಿವ್ಯ ವಲಯದಿಂದ ಸದಾ ದೂರದಲ್ಲೇ ನೆಲೆಸಿರುವದರಿಂದ, ಈ ವ್ಯಕ್ತಿಗತವಾದ ಸಂಬಂಧವನ್ನು ಪರಿತ್ಯಜಿಸಬಹುದು. ಇದರಿಂದ ಸಾಧಕನ ಪ್ರಜ್ಞೆಯು ದಿವ್ಯಮಾತೆಯ ಪ್ರಜ್ಞೆಯೊಡನೆ ಬೆರೆತು ಆತ್ಮದ ಉನ್ನತಿಗೆ ಸಹಕಾರಿಯಾಗುತ್ತದೆ.

*

**ದಿವ್ಯಮಾತೆಯಲ್ಲಿ ಅರ್ಪಣೆಗೊಳ್ಳುವುದು**

ಶ್ರೀಮಾತೆಯು ಮರ್ತ್ಯದ ಪ್ರತಿಯೋರ್ವ ಮನುಜನು ಬಯಸುವ ಸಕಲ ದ್ರವ್ಯಗಳನ್ನೂ ನೀಡಲು ಸಿದ್ಧಳಿದ್ದಾಳೆ. ಅವಳೆಂದಿಗೂ ತನ್ನ ಮಕ್ಕಳ ಅಪೇಕ್ಷೆಯನ್ನು ತಿರಸ್ಕರಿಸುವದಿಲ್ಲ. ಅಲ್ಲದೆ ತಾನು ನೀಡುವ ಫಲಗಳನ್ನು ಸ್ವೀಕರಿಸುವಂತೆ ಮನುಜರನ್ನು ಸಿದ್ಧಪಡಿಸುತ್ತಾಳೆ. ಆದರೆ ನಾವು ಮಾತ್ರ ಅವಳು ಕರುಣಿಸುವ ಫಲವನ್ನು ಸ್ವೀಕರಿಸಲು ಸಿದ್ಧರಾಗಿಲ್ಲ.

ಹೌದು ಶ್ರೀಮಾತೆಯು ಯಾವಾಗಲೂ ಫಲಗಳನ್ನು ಕರುಣಿಸಲು ಸಿದ್ಧಳಾಗಿರುತ್ತಾಳೆ. ಅವಳು ನೀಡುವ ದ್ರವ್ಯಗಳನ್ನು ಸ್ವೀಕರಿಸಿ ಅವಳನ್ನು ಮೆಚ್ಚಿಸುವುದೊಂದೇ ನಾವು ಮಾಡಬೇಕಿರುವ ಕರ್ತವ್ಯವಾಗಿದೆ.

*

## ಶ್ರೀಮಾತೆಯೊಂದಿಗಿನ ದಿವ್ಯ ಬಂಧನ

*ನನ್ನ ವೈಚಾರಿಕ ಮಿತಿಯು ತನ್ನ ದಿನನಿತ್ಯದ ಜಂಜಡಗಳಿಂದ ಬೇಸತ್ತು ದುಃಖಿಸುತ್ತದೆ. ಶ್ರೀಮಾತೆಯು ತನ್ನ ಮೇಲೆ ಅನುಕಂಪ–ಸಹಾನುಭೂತಿಯನ್ನು ತೋರುತ್ತಿಲ್ಲವೆಂದು ಭಾವಿಸುತ್ತದೆ. ಮತ್ತು ಶ್ರೀಮಾತೆಯ ವಾತ್ಸಲ್ಯದಿಂದ ವಂಚಿತನಾಗಿರುವೆಂದು ಶೋಕಿಸುತ್ತದೆ. ತನ್ನ ತಾಪತ್ರಯಗಳಿಗೆ ಅವಳು ಕಿವಿಗೊಡುತ್ತಿಲ್ಲವೆಂದು ಅವಳ ಅಖಂಡ ಮೌನಕ್ಕೆ ಮುಗ್ಗರಿಸಿ ಬೀಳುತ್ತದೆ; ಅವಳ ನಿರ್ಲಕ್ಷ್ಯದಿಂದ ಕುಗ್ಗಿಹೋಗುತ್ತದೆ.*

ನವೀಕರಣಗೊಳ್ಳದ, ಪುನರುಜ್ಜೀವನಗೊಳ್ಳದ ನಮ್ಮ ವೈಚಾರಿಕತೆಯು ಅಹಂಕಾರ, ಬಯಕೆ ಮತ್ತು ಬೇಡಿಕೆಗಳಿಂದ ತುಂಬಿದ್ದು ನಮ್ಮಲ್ಲಿ ಅತೃಪ್ತತೆ–ವೈಫಲ್ಯತೆಗಳನ್ನು ಸೃಜಿಸಿ ನಮ್ಮನ್ನು ಸ್ವಯಂನಿರ್ಮಿತ ದುಃಖಗಳ ಕೋಟಲೆಯೊಳಗೆ ಬಂಧಿಯಾಗಿರುವಂತೆ ಮಾಡುತ್ತದೆ.

ಆದರೆ ಈ ಜಡದ ಸುಖ–ದುಃಖಗಳನ್ನೆಲ್ಲ ಮೀರಿ ಮೇಲೆರುವ ವಿಧಾನವೊಂದನ್ನು ನಾನು ಬಲ್ಲೆ. ಅದುವೇ ದಿವ್ಯಮಾತೆಯೆಡೆಗಿನ ಸಮರ್ಪಣಾ ಮನೋಭಾವನೆ. ಈ ಪ್ರಕ್ರಿಯೆಯಲ್ಲಿ ಪ್ರಜ್ಞೆಯು ಅವಳಿಂದ ಯಾವುದೇ ಫಲಾಪೇಕ್ಷೆಗಳನ್ನು ಬಯಸುವದಿಲ್ಲ. ಅದು ಕೇವಲ ತನ್ನನ್ನು ತಾನು ಅವಳಡಿಯಲ್ಲಿ ಸಮರ್ಪಿಸಿಕೊಳ್ಳಲು ಬಯಸುತ್ತಿರುತ್ತದೆ. ಆ ಮೂಲಕ ದಿವ್ಯಮಾತೆಯೇ ಮೃಣ್ಮಯಕ್ಕೆ ಅವರೋಹಿಸಿ ತನ್ನ ಪ್ರಜ್ಞೆಯನ್ನು ಊರ್ಧ್ವ ಲೋಕದೆಡೆಗೆ ಹಿಡಿದೆತ್ತುವಂತೆ ಪ್ರಾರ್ಥಿಸುತ್ತದೆ. ಈ ಪ್ರಾರ್ಥನೆಯು ಹೃದಯದಿಂದ ಹೊರಡುವದು. ಮತ್ತು ಇದರ ಮುಖ್ಯ ಲಕ್ಷಣವೆಂದರೆ ದಿವ್ಯಮಾತೆಯಲ್ಲಿ ನಮಗಿರುವ ಸಮರ್ಪಣಾ ಮನೋಭಾವನೆಯಾಗಿದೆ.

*

## ಶ್ರೀಮಾತೆಯೆಡೆಗಿನ ದಿವ್ಯ ಪ್ರೇಮ

*ಶ್ರೀಮಾತೆಯ ದರ್ಶನ ಮಾತ್ರದಿಂದ ಲಭಿಸುವ ಆನಂದ ಮತ್ತು ತೃಪ್ತಿಯು ಅನುಭವಕ್ಕೆ ಏನೆಂದು ಕರೆಯಬಹುದು?*

ಅದುವೇ ದಿವ್ಯಾನುಭವ.

*ಶ್ರೀಮಾತೆಯ ಸ್ಮೃತಿ ಮಾತ್ರದಿಂದ ಲಭಿಸುವ ಆನಂದ ಮತ್ತು ತೃಪ್ತಿಯು ಅನುಭವಕ್ಕೆ ಏನೆಂದು ಕರೆಯಬಹುದು?*

ಅದುವೇ ದಿವ್ಯಾನುಭವ.

*ಶ್ರೀಮಾತೆಯ ಬಗೆಗಿನ ವ್ಯತಿರಿಕ್ತ ನುಡಿಗಳನ್ನು ಕೇಳಿದಾಕ್ಷಣ ಹೃದಯ ಘಾಸಿಯಾಗುವ ಅನುಭವಕ್ಕೆ ಏನೆಂದು ಕರೆಯಬಹುದು?*

ಅದುವೇ ದಿವ್ಯಾನುಭವ.

*ಶ್ರೀಮಾತೆಯು ನಮ್ಮಿಂದ ಬಹುದೂರದ ದಿವ್ಯ ಲೋಕದಲ್ಲಿ ನೆಲೆಸಿದ್ದರೂ ನೆನೆದಾಕ್ಷಣ ಹೃದಯ ಗಹ್ವರದಲ್ಲಿ ಅವಳ ಸನ್ನಿಧಿಯನ್ನು ಕಾಣುವ ಅನುಭವಕ್ಕೆ ಏನೆಂದು ಕರೆಯಬಹುದು?*

ಅದುವೇ ದಿವ್ಯಾನುಭವ.

*ನಾನು ಪೂರ್ಣರೂಪದ ದಿವ್ಯ ಪ್ರೇಮದ ವಲಯದಲ್ಲಿರುವೆನೆಂದು ನಿರ್ಧರಿಸುವ ಬಗೆ ಹೇಗೆ ?*

ಅಹಂಕಾರದ ಅಳಿವು, ಭಕ್ತಿಯ ಗೆಲುವು ಮತ್ತು ದಿವ್ಯತೆಯೆಡೆಗಿನ ಅರ್ಪಣೆ–ಸಮರ್ಪಣೆ ಮನೋಭಾವನೆಗಳು ಜಾಗೃತವಾಗಿದ್ದರೆ ಅದುವೇ ದಿವ್ಯ ಪ್ರೇಮದ ಸನ್ನಿಧಿಯಾಗಿರುತ್ತದೆ.

*

*ಬಾಹ್ಯದ ಜಡದ್ರವ್ಯಗಳೆಲ್ಲದರಿಂದ ಕದವಿಕ್ಕಿ, ಸುತ್ತೆಲ್ಲ ಸ್ತಬ್ಧತೆ ಮತ್ತು ಶಾಂತತೆಯಿಂದ ಕೂಡಿರುವಾಗ ನಾನು ನನ್ನ ಹೃದಯಾಂತರಾಳದ ದಿವ್ಯಾನುಭವವೊಂದನ್ನು ಪಡೆಯುತ್ತೇನೆ; ಆಗ ಹೃತ್ಕಮಲದಿಂದ ಉದ್ಭವಿಸುವ ಸಿಹಿ–ಮಧುರವಾದ ಭಾವನೆಯೊಂದು ದೇಹವ್ಯಾಪಿಯಾಗಿ ಸಂಚರಿಸಿ, ಎನ್ನಾತ್ಮವನ್ನು ದಿವ್ಯಮಾತೆಯೆಡೆಗೆ ಕೊಂಡೊಯ್ಯುತ್ತದೆ. ಅಲ್ಲಿ ದಿವ್ಯತೆಯೊಡನೆ ಮೃದು–ಮಧುರವಾದ ಸಂಬಂಧವನ್ನು ಬೆಸೆಯುತ್ತದೆ. ಅದು ಸರ್ವ ಚೇತನಗಳನ್ನು ಹದಗೊಳಿಸುವ ಸ್ತಬ್ಧ ಮತ್ತು ಶಾಂತ ವಲಯವಾಗಿದ್ದು, ದೈವಿಕ ತೃಪ್ತಿಯೊಂದು ಸದಾ ಅಲ್ಲಿ ನಿತಾಂತವಾಗಿರುತ್ತದೆ.*

ಅದುವೇ ದಿವ್ಯ ಪ್ರೀತಿಯಾಗಿದೆ.

*

*ಮುಂಜಾವಿನಿಂದಲೂ ನಾನು ದಿವ್ಯಮಾತೆಯೊಡನೆ ತಾದ್ಯಾತ್ಮವನ್ನು ಹೊಂದುತ್ತಲೇ ಇದ್ದೇನೆ. ಅವಳ ಸನ್ನಿಧಿಯ ಸಾಮಿಪ್ಯವನ್ನು ಅನುಭವಿಸುತ್ತಲೇ ಇದ್ದೇನೆ. ಅವಳ ಮತ್ತು ನನ್ನ ನಡುವೆ ಯಾವುದೇ ವ್ಯತ್ಯಾಸವೇ ಇಲ್ಲವೇನೋ ಎಂಬಂತೆ ನನ್ನ ಪ್ರಜ್ಞೆಯು ಆ ದಿವ್ಯ ಪ್ರಜ್ಞೆಯೊಡನೆ ಸಂಪರ್ಕವನ್ನು ಸಾಧಿಸಿದೆ. ಆದರೆ ನಮ್ಮಿಬ್ಬರ ನಡುವೆ ಇರುವ ಅಗಾಧವಾದ ವ್ಯತ್ಯಾಸವೆಂದರೆ ನಾನು ಮಾನಸ ಸ್ತರದಲ್ಲಿದ್ದರೆ ಅವಳು ಸುಪ್ರಮಾನಸದ ಸ್ತರದಲ್ಲಿರುವಳು.*

ದಿವ್ಯಮಾತೆಯು ಸುಪ್ರಮಾನಸದ ಪ್ರಭೃತಿಯಾದರೂ ಅವಳು ಎಲ್ಲ ಸ್ತರಗಳಲ್ಲೂ ನೆಲೆಸಿರುತ್ತಾಳೆ. ಪ್ರಮುಖವಾಗಿ ಅವಳು ಪ್ರತಿಯೋರ್ವ ಮರ್ತ್ಯನ ಹೃದಯಾಂತರಾಳದಲ್ಲಿ ನೆಲೆಸಿದ್ದು, ಮೃಣ್ಮಯವು ತನ್ನ ಹೃದಯದ ಕವಾಟವನ್ನು ತೆರೆದು ತನ್ನನ್ನು ನೇರವಾಗಿ–ನಿಕಟವಾಗಿ ದರ್ಶನಗೈಯಲೆಂದು ಬಯಸುತ್ತಾಳೆ. ಹಾಗಾಗಿ ನಾವು ಆಂತರಿಕ ಹೃದಯದ ದ್ವಾರವನ್ನು ತೆರೆದಲ್ಲಿ ಸಹಜವಾಗಿಯೇ ದಿವ್ಯಮಾತೆಯೊಡನೆ ತಾದ್ಯಾತ್ಮ ಹೊಂದಬಹುದು.

*

*ನಾನು ಪ್ರತಿಯೊಂದು ಬಾರಿಯೂ ದಿವ್ಯಮಾತೆಯನ್ನು ದರ್ಶನ ಗೈದಾಗಲೂ ಪ್ರೇಮ–ಆನಂದವನ್ನೇಕೆ ಅನುಭವಿಸುತ್ತಿಲ್ಲ?*

ದಿವ್ಯಮಾತೆಯ ಪ್ರೇಮ ಮತ್ತು ಆನಂದದ ಅನುಭವವು ಸಾಧಕನ ಮಾನಸಿಕ ಸ್ಥಿತಿಗತಿಯ ಮೇಲೆ ನಿರ್ಧರಿತವಾಗಿರುತ್ತದೆ.

*

*ಕಳೆದ ಎರಡು ದಿನಗಳಿಂದ ನನ್ನೊಳಗೆ ದಿವ್ಯಮಾತೆ ಮತ್ತು ನಿನ್ನ ಮೇಲೆ ಅತೀವ ಪ್ರೇಮವೊಂದು ಮನೆಮಾಡಿತ್ತು. ಆ ಪ್ರೇಮವು ಸುತ್ತಣ ಪ್ರಭಾ ವಲಯವನ್ನು ಚೈತನ್ಯಯುತವಾಗಿರಿಸಿತ್ತು. ನಂತರ ಆ ಪ್ರೇಮದ ಭಾಗಾಂಶವೊಂದು ಉಳಿದುಕೊಂಡಿತು. ಅದುವೇ ಮಹಾತ್ಮರ ಮತ್ತು ದಿವ್ಯಮಾತೆಯ ಮೇಲಿನ ಅಚಲ ಶ್ರದ್ಧೆ. ಅದೊಂದು ಭೌತಿಕತೆಯು ತುಂಬಲಶಕ್ಯವಾದ ಅವರ್ಣನೀಯ ಆನಂದದ ಕೇಂದ್ರವಾಗಿತ್ತು.*

ಅದುವೇ ಮಾನಸ ಶಕ್ತಿ.

*ದಿವ್ಯತೆಯ ಮೇಲಿರುವ ಪ್ರೇಮದ ಭಾವನೆಯು ಕಂಬನಿಯ ರೂಪದಲ್ಲಿ ನನ್ನಿಂದ ಹೊರಬರುವುದನ್ನು ನೋಡಿದ್ದೇನೆ.*

ಆ ಕಂಬನಿಯೇ ಭಕ್ತಿಯಾಧಿಕ್ಯದ ಸಂಕೇತ.

*

ಇಂದು ಮಹಿಳಾ ಅತಿಥಿಯೊಬ್ಬರು ಆಶ್ರಮದಿಂದ ನಿರ್ಗಮಿಸಲು ಸಿದ್ಧರಾಗಿದ್ದರು. ಶ್ರೀಮಾತೆಯವರು ಅವರಿಗೆ ದರ್ಶನವನ್ನು ನೀಡಿ ಪ್ರಣಾಮ ಸಭೆಯನ್ನು ಮುಗಿಸಿ ಮೆಟ್ಟಿಲುಗಳನ್ನೇರಿ ಮೇಲೇರುತ್ತಿದ್ದಂತೆಯೇ, ಈ ಮಹಿಳೆಯು ಕಂಬನಿ ಹರಿಸುತ್ತ ಅಳಲು ಪ್ರಾರಂಭಿಸಿದಳು. ಇದು ಅವಳಲ್ಲಿದ್ದ ಭಕ್ತಿಯಾಧಿಕ್ಯವು ಹೊರಹರಿಯುತ್ತಿದ್ದ ಸಂಕೇತವಾಗಿತ್ತೇ?

ಅದು ಭಕ್ತಿಯ ಹೊರಹರಿವಿನ ಪ್ರಶ್ನೆಯಲ್ಲ. ಬದಲಾಗಿ ಅವರಂತರಂಗದಲ್ಲಿ ಉಸಿರಾಡುತಿಹ ದಿವ್ಯಚೇತನವು ಸದಾ ಜಾಗ್ರತವಾಗಿದ್ದು, ಅದು ಶ್ರೀಮಾತೆಯ ಅಂತರಂಗದೊಡನೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಇಂದು ಆಶ್ರಮವನ್ನು ತೊರೆದು ಹೋಗುತ್ತಿರುವ ಭಾವನೆಯನ್ನು ಪ್ರಕಟಿಸುತ್ತಿರುವ ಸಂಕೇತವಾಗಿದೆ.

*

*ನನಗಾದ ದರ್ಶನದ ಸ್ತರದಲ್ಲಿ ನನ್ನ ಪ್ರಜ್ಞೆಯು ಮಂತ್ರಮುಗ್ಧವಾಗಿ ರೋಮಾಂಚನದ ಅನುಭವವನ್ನು ಪಡೆಯಿತು. ಅದೊಂದು ಅದ್ಭುತಕ್ಷಣ. ಆ ದರ್ಶನವು ನನ್ನ ಅಸ್ತಿತ್ವವನ್ನು ಮಾನಸ ಹಂತಕ್ಕೆ ಏರುವಂತೆ ಪ್ರೇರಿಸಿತು. ಹಾಗೆ ನನ್ನನ್ನು ರೋಮಾಂಚಿತಗೊಳಿಸಿ ನನ್ನನ್ನು ಆರೋಹಣಗೈಯಲು ಸಹಕಾರಿಯಾದ ಆ ದೈವೀಕ ದ್ರವ್ಯವಾದರೂ ಯಾವುದು?*

ಅದುವೇ ಶ್ರೀಮಾತೆಯ ದಿವ್ಯ ಹಸ್ತ ಸ್ಪರ್ಶದ ಅನುಭವ. ಅದು ಮರ್ತ್ಯದ ವೈಚಾರಿಕ ಮತ್ತು ಮಾನಸಿಕ ಎರಡೂ ಸ್ತರಗಳನ್ನು ಜಾಗ್ರತಗೊಳಿಸಲು ಶಕ್ಯವಾಗಿದೆ.

*

*ನಮ್ಮ ಪ್ರಜ್ಞೆಯು ಮಾನಸ ಹಂತಕ್ಕೆ ಏರುವದಕ್ಕೂ ಮುನ್ನವೇ ನಮ್ಮ ಮನವು ದಿವ್ಯಮಾತೆಯೊಡನೆ ಸಂಪರ್ಕವನ್ನಿರಿಸಿಕೊಂಡಿತ್ತೇ?*

ಹೌದು ಮರ್ತ್ಯಮನವು ದಿವ್ಯಮಾತೆಯೊಂದಿಗೆ ನಿರಂತರ ಸಂಪರ್ಕದಲ್ಲಿರುತ್ತದೆ. (ಆದರೆ ಅದನ್ನು ಅನುಭವಿಸಲು ಸಾಧನೆಯ ಅವಶ್ಯಕತೆಯಿದೆ.)

**ಮಾನಸ ಹಂತದ ವರ್ತನೆ**

> *ನನ್ನ ಪ್ರಜ್ಞೆಯು ದಿವ್ಯಮಾತೆಯ ಅವಿಭಾಜ್ಯ ಅಂಗವೇ ಆಗಿದೆಯೇನೋ ಎಂಬಂತೆ, ಅದು ಸದಾ ತನ್ನ ಗಮನವನ್ನು ಅವಳ ಹೃದಯ ಮಂಡಲದ ಮೇಲೇಯೇ ಕೇಂದ್ರಿಕೃತವಾಗಿರಿಸಿರುತ್ತದೆ. ದಿವ್ಯಮಾತೆಯೊಡನೆ ಒಂದಾಗಬೇಕೆಂಬುದೇ ಈ ಪ್ರಜ್ಞೆಯ ಅಭೀಪ್ಸೆಯಾಗಿದೆ. ಒಮ್ಮೊಮ್ಮೆ ನನ್ನ ಪ್ರಜ್ಞೆಯ ಮೇಲೆದ್ದು ಬಂದು ನುಡಿಯುತ್ತದೆ, "ನಾನು ಸದಾ ದಿವ್ಯಮಾತೆಯೊಡನೆ–ದಿವ್ಯಮಾತೆಯೊಳಗೆ ಇರಬೇಕೆಂದು ಬಯಸುತ್ತೇನೆ. ಇದರ ಹೊರತಾಗಿ ನನಗಿನ್ನೇನೂ ಬೇಕಿಲ್ಲ" ಎಂದು ಉದ್ಘೋಷಿಸುತ್ತದೆ. ಅಲ್ಲದೇ ದಿವ್ಯಮಾತೆಯೊಡನೆಯ ತಾದ್ಯಾತ್ಮದ ಹೊರತಾಗಿ ಅದಕ್ಕೆ ಬೇರೆ ಇನ್ನಾವ ಆಸೆ–ಆಕಾಂಕ್ಷೆಗಳೂ ಇಲ್ಲ. ಅವಳ ಬಿಟ್ಟು ಇತರ ಉನ್ನತ ಆಲೋಚನೆ, ಆಧ್ಯಾತ್ಮಿಕ ಆಲೋಚನೆಗಳಾವುವನ್ನೂ ಅದು ತನ್ನೊಳಗೆ ಆಮಂತ್ರಿಸುವದಿಲ್ಲ. ಈ ರೀತಿಯ ಮನೋಭಾವನೆಯನ್ನು ನೀವು ಏನೆಂದು ಅರ್ಥೈಸುವಿರಿ?*

ಮರ್ತ್ಯದ ಆಂತರಿಕ ಮತ್ತು ಮಾನಸಿಕ ಸ್ತರದ ಜಾಗೃತಿಗಾಗಿ ಈ ವರ್ತನೆಯು ಒಳ್ಳೆಯದೇ ಆಗಿದೆ. ಆದರೆ ಬೇರೆ ಇನ್ನಾವ ಉನ್ನತ ಅನುಭವಗಳು ಪ್ರಾಪ್ತವಾದರೂ ಈ ವರ್ತನೆಯು ತನ್ನ ಬಿಗಿಪಟ್ಟನ್ನು ಸಡಿಲಿಸಬಾರದು.

*

ನಮ್ಮಲ್ಲಿನ ಮಾನಸ ಹಂತದ ವರ್ತನೆಯು ಸಬಲ ಮತ್ತು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದರೆ. ಅದು ಇತರ ಯಾವುದೇ ಮಾನಸಿಕ ಮತ್ತು ವೈಚಾರಿಕ ತತ್ವಗಳಿಗೆ ಬೆಲೆ ಕೊಡುವದಿಲ್ಲ. ಅದು ಕೂಡಲೆ ಅವುಗಳ ಕ್ರಿಯಾ ಚಟುವಟಿಕೆಗಳನ್ನು ಕುಂಠಿತಗೊಳಿಸುವಂತೆ ಬಲ ಪ್ರಯೋಗಿಸುತ್ತದೆ. ಮತ್ತು "ದಿವ್ಯಮಾತೆಯು ನಿರ್ಧರಿಸಿದ ನಿರ್ಣಾಯಕ ಅಂಶಗಳನ್ನು ನಾವು ಸಂತಸ ಮತ್ತು ಸಮರ್ಪಣಾ ಮನೋಭಾವನೆಯಿಂದ ಸ್ವೀಕರಿಸಬೇಕು. ಮತ್ತು ಈ ಹಂತದಲ್ಲಿ ಮಾನಸಿಕತೆಯು ತಾನೇ ಶ್ರೇಷ್ಠವೆಂದೂ, ದಿವ್ಯಮಾತೆಯ ನಿರ್ಧಾರಗಳಿಗಿಂತಲೂ ತನ್ನ ನಿರ್ಣಯವೇ ಉತ್ತಮವೆಂಬ ಟೊಳ್ಳುವಾದವನ್ನೂ ತ್ಯಜಿಸಬೇಕು; ಮತ್ತು ವೈಚಾರಿಕತೆಯು ದಿವ್ಯಮಾತೆಯ ಸಂದೇಶಗಳನ್ನು ತನ್ನ ಇಚ್ಛೆ ಮತ್ತು ಆದ್ಯತೆಗಳ ಅನುಸಾರವಾಗಿ ಕಾರ್ಯಪ್ರವೃತ್ತವಾಗುವಂತೆ ಪ್ರೇರೇಪಿಸಬಾರದು. ಈ ಕ್ಷುದ್ರ ಆಲೋಚನೆಗಳು ಭೂತ(ಕಾಲ)ದೊಂದಿಗೆ ಮರೆಯಾಗಿ ಹೋಗಿವೆ. ಅಹಮಿಕೆಯ

ಈ ತತ್ವಗಳಿಗೆ ಮಾನಸಿಕ ಮತ್ತು ಆಧ್ಯಾತ್ಮಿಕ ನೆಲೆಯಲ್ಲಿ ಯಾವುದೇ ಬೆಲೆಯಿಲ್ಲ" ಎಂದು ಕರೆಯ ನೀಡುತ್ತದೆ. ಈ ವರ್ತನೆಯು ಪ್ರಕೃತಿಯ ಮೇಲೆ ನಿಯಂತ್ರಣವನ್ನು ಸಾಧಿಸಲು ಶಕ್ಯವಾಗಿದ್ದಲ್ಲಿ. ಅದು ನಮ್ಮನ್ನು ಮಾನಸಿಕವಾಗಿ ಕುಗ್ಗಿಸುವ ಮತ್ತು ಬಲಹೀನಗೊಳಿಸುವ ಅಸುರೀ ಶಕ್ತಿಗಳನ್ನು ತಡೆದು–ತೊಡೆದು ನಿರ್ಮೂಲನೆ ಮಾಡುತ್ತದೆ. ಮುಂಬರಿದು ಅದು ಸಂಪೂರ್ಣ ನಿಯಂತ್ರಣದ ಶಕ್ತಿಯನ್ನು ಹೊಂದಿದ್ದೇ ಆದಲ್ಲಿ, ನಮ್ಮನ್ನು ಕುಗ್ಗಿಸುವ–ಬಲಹೀನಗೊಳಿಸುವ ಅಸುರೀ ಶಕ್ತಿಗಳನ್ನು ಮೃಣ್ಮಯದಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸದೇ ಬಿಡುವದಿಲ್ಲ. ಆದರೆ ಈ ಮಾನಸ ಹಂತದ ವರ್ತನೆಯು ಪೂರ್ಣ ರೂಪದಲ್ಲಿ ಮರ್ತ್ಯದ ಮೇಲೆ ತನ್ನ ಸಂಪೂರ್ಣ ಪ್ರಭಾವವನ್ನು ಬೀರಿಯೇ ಇಲ್ಲ. ಏಕೆಂದರೆ ಅದು ಭುವಿಯ ಮೇಲೆ ಇನ್ನು ಆವಿರ್ಭವಿಸಿಯೇ ಇಲ್ಲ. ಮನುಷ್ಯ ಮಾತ್ರನ ವೈಚಾರಿಕತೆಗಳೇ ಈ ಮಾನಸಿಕ ವರ್ತನೆಯನ್ನು ಸುತ್ತಿ–ಮುತ್ತಿ ಮರೆಯಾಗಿಸಿ ಅದರ ಪ್ರಭಾವವು ಮಾನವ ಜನಾಂಗದ ಮೇಲಾಗದಂತೆ ಪ್ರತಿಬಂಧಿಸಿದೆ. ಒಂದು ವೇಳೆ ಅದು ತೆರೆಮರೆಯನ್ನು ಸರಿಸಿ, ಕಾರ್ಯ ವೇದಿಕೆಯ ಮೇಲೆ ಕಾಣಿಸಿಕೊಂಡದ್ದೇ ಆದಲ್ಲಿ ಬೇರೆಯಾವುದೇ ಶಕ್ತಿಗಳಿಗೂ ಅದನ್ನು ತಡೆಯಲು ಸಾಧ್ಯವಿಲ್ಲ. ಹಾಗಾಗಿ ಪ್ರತಿಯೋರ್ವರೂ ಶಾಂತರಾಗಿ, ಜಾಗೃತರಾಗಿ, ಶ್ರದ್ಧೆಯಿಂದ ಅದನ್ನು ಸ್ವಾಗತಿಸಬೇಕಿದೆ.

*

> *ದಿವ್ಯಮಾತೆಯ ಪ್ರೇಮವು ಭೌತಿಕ ವಲಯದಲ್ಲಿ ಪ್ರಾಪ್ತವಾಗದೇ ಇದ್ದಲ್ಲಿ, ನಾನು ನಿಶ್ಚಲನಾಗಿರಲು ಸಾಧ್ಯವೇ ಇಲ್ಲ. (ನಾನು ನನ್ನ ಸ್ವ–ಪ್ರಯತ್ನದಿಂದ ಮುನ್ನುಗ್ಗಲೇಬೇಕು!)*

ಭೌತಿಕ ಸ್ತರದಲ್ಲಿ ದಿವ್ಯ ಪ್ರೇಮದ ಅಸ್ತಿತ್ವಕ್ಕಾಗಿ ಕಾದು ಕುಳಿತುಕೊಳ್ಳುವ ನಮ್ಮ ಮನಸ್ಥಿತಿಯು ಮೊದಲು ತೊಲಗಬೇಕು. ಈ ಬಯಕೆಯ ಒಡ್ಡು(ಅಡೆತಡೆ) ನಮ್ಮ ಸಾಧನೆಯ ಹಾದಿಯಲ್ಲಿ ಮಾರ್ಗ ಪ್ರತಿಬಂಧಕವನ್ನೊಡ್ಡಿ ಅಪಾಯಕಾರಿ ತಿರುವನ್ನು ನೀಡಬಹುದು. ಭೋಗಪ್ರಧಾನವಾದ ನಿಲುವಿನಿಂದ ರಚಿತವಾದ ಈ ಸಿದ್ಧಾಂತವು ಅಸುರಕ್ಷಿತವಾಗಿದ್ದು, ಒಂದೊಮ್ಮೆ ತನ್ನನ್ನು ರೂಪಿಸಿದ ಕ್ಷುದ್ರ ಶಕ್ತಿಯಿಂದಲೇ ಇದು ನಾಶವಾಗುವುದು.

*

## ಶ್ರೀಮಾತೆಯೆಡೆಗಿನ ಭಕ್ತಿ

*ಇಂದು ಸಾಯಂಕಾಲ ಶ್ರೀಮಾತೆಯವರು ಮಹಡಿ ಮೇಲಿನಿಂದ ನನ್ನೆಡೆಗೆ ಒಮ್ಮೆ ದೃಷ್ಟಿ ಹಾಯಿಸಿದರಷ್ಟೇ, ಅದೇ ಕ್ಷಣಕ್ಕೆ ನಾನು ಅವರೆಡೆಗಿನ ಅಸದಳವಾದ ಭಕ್ತಿಯಾಧಿಕ್ಯದ ಭಾವಪರವಶತೆಯಲ್ಲಿ ಮುಳುಮುಳುಗಿ ಎದ್ದಂತೆ ಭಾಸವಾಯಿತು. ನಾನು ಹಲವು ದಿನಗಳಿಂದ ಇಂತಹ ದಿವ್ಯಾನುಭೂತಿಗಾಗಿಯೇ ಹಂಬಲಿಸಿದ್ದೆ. ಭಕ್ತಿಯಾಳದಲ್ಲಿ ನಾನು ಈ ಅನುಭೂತಿಯನ್ನು ಪಡೆಯುವದಕ್ಕೂ ಪೂರ್ವದಲ್ಲಿ, ಇಂತಹ ಆನಂದದ ಪರಿಧಿಯೊಂದು ಅಸ್ತಿತ್ವದಲ್ಲಿದೆ ಎಂಬುದನ್ನೇ ನಾನು ಅರಿತಿರಲಿಲ್ಲ. ಹಾಗಾಗಿ ನಾನು ಸದಾ ಶ್ರೀಮಾತೆಯ ಅಹೇತುಕ–ಭಕ್ತಿ (ಪ್ರಾರ್ಥನೆಯಿಲ್ಲದಾಗ್ಯೂ ದೊರೆಯುವ ಭಕ್ತಿ)ಯನ್ನುಅಪೇಕ್ಷಿಸುತ್ತೇನೆ. ಶ್ರೀ ರಾಮಕೃಷ್ಣರು ಹೇಳುವಂತೆ, 'ಭಕ್ತಿಯ ಅಪೇಕ್ಷೆಯೇ ಪರಮಾಧಿಕ್ಯದ ಅಭೀಪ್ಸೆಯಲ್ಲ.' ಹಾಗಾಗಿ ನಾನು ಭಕ್ತಿಯನ್ನು ಅಪೇಕ್ಷಿಸುತ್ತಾ ಬೇರೆ ಇನ್ನೇನೋ ಮಹತ್ತರವಾದುದನ್ನು ಬೇಕೆಂದು ವಾದ ಹೂಡುತ್ತಿಲ್ಲವೆಂಬ ಸತ್ಯವನ್ನು ಅರಿತಿದ್ದೇನೆ. ಭಕ್ತಿ ಎಂಬುದು ನಿತ್ಯಸತ್ಯವಾದ ಋತದ ಅವಿಭಾಜ್ಯ ಅಂಗವೇ ಆಗಿರುವದರಿಂದ ಅದನ್ನು ಹೃದಯಪೂರಿತವಾಗಿ–ನ್ಯಾಯಪೂರಿತವಾಗಿ ಪಡೆಯಬೇಕೆಂಬುದೇ ನಿಯಮ. ಅಲ್ಲವೇ?*

*

*ಶ್ರೀಮಾತೆಯ ಬಗೆಗಿನ ಶುದ್ಧ ಭಕ್ತಿಯನ್ನು ಪಡೆಯುವ ಬಗೆ ಹೇಗೆ?*

ಪರಿಶುದ್ಧ ಆರಾಧನೆ, ಶ್ರದ್ಧೆ ಮತ್ತು ಒತ್ತಡವಿಲ್ಲದ ದಿವ್ಯ ಪ್ರೇಮವೇ ಶುದ್ಧ ಭಕ್ತಿಯನ್ನು ಪಡೆಯುವ ಮಾರ್ಗವಾಗಿದೆ.

*ಇದು ಯಾವ ಸ್ತರದಿಂದ ವ್ಯಕ್ತಗೊಳ್ಳುತ್ತದೆ.*

ಮಾನಸ ಹಂತದಿಂದ.

*

*ದಿವ್ಯಮಾತೆಯ ಮೇಲೆ ನಮಗಿರುವ ಅತಿಮಾನಸಿಕ ಭಕ್ತಿ, ಮಾನಸಿಕ ಭಕ್ತಿ, ಮತ್ತು ವೈಚಾರಿಕ ಭಕ್ತಿಗಳ ವಿಶೇಷತೆಗಳೇನು? ಮತ್ತು ಅವುಗಳನ್ನು ಗುರುತಿಸುವ ಬಗೆ ಹೇಗೆ?*

ಅತಿಮಾನಸವು ಯಾವುದೇ ಅಪೇಕ್ಷೆಯನ್ನಿಟ್ಟುಕೊಳ್ಳದ ಪ್ರೇಮ ಮತ್ತು ಸಮರ್ಪಣೆಯಿಂದ ರಚಿತವಾಗಿದೆ, ವೈಚಾರಿಕತೆಯು ಶ್ರೀಮಾತೆಯನ್ನು ದರ್ಶಿಸುವ ಮತ್ತು ಅವಳನ್ನು ಸೇವೆಗೈಯುವ ಇಚ್ಚೆಯಿಂದ ರೂಪುಗೊಂಡಿದೆ, ಇನ್ನು ಮಾನಸವು ಶ್ರೀಮಾತೆಯಿಂದ ಇಳಿದು ಬರುವ ಎಲ್ಲ ಸಂದೇಶಗಳನ್ನು ಮೌನವಾಗಿಯೇ ಸ್ವೀಕರಿಸುವ ನಂಬಿಕೆಯಿಂದ ಮಾಡಲ್ಪಟ್ಟಿದೆ. ಇದು ಬಾಹ್ಯದಲ್ಲಿ ತೋರಿಕೆಯಾಗುವ ಭಕ್ತಿಯಾಗಿದ್ದರೂ ಅದರ ಅಸ್ತಿತ್ವವು ಆಂತರ್ಯದಲ್ಲಿ ಸದಾ ಜಾಗೃತ ಸ್ಥಿತಿಯಲ್ಲಿರುವದನ್ನು ಗುರುತಿಸಬಹುದು. ಅದೊಂದು ಅವರ್ಣನೀಯ ಸ್ವರೂಪವಾಗಿದೆ.

*ಯೋಗಿಕ ವಿಧಾನದಲ್ಲಿ ಮಾನಸಿಕ ಭಕ್ತಿ ಮತ್ತು ವೈಚಾರಿಕ ಭಕ್ತಿಗಳಿಗೆ ಸ್ಥಾನವಿಲ್ಲವೇ?*

ಹಾಗೆಂದು ಹೇಳಿದವರಾರು? ಎಲ್ಲಿಯವರೆಗೆ ಆ ಎಲ್ಲಾ ಭಕ್ತಿಗಳು ನಿಜವಾದ ಭಕ್ತಿಯನ್ನು ತೋರಿಸುವವವೋ, ಅಲ್ಲಿಯವರೆಗೂ ಆ ಎಲ್ಲ ಭಕ್ತಿ ವಿಧಗಳೂ ಮಾನ್ಯವೇ ಆಗಿರುತ್ತವೆ.

*

**ಅತ್ಯುತ್ತಮ ಅಡಿಪಾಯ**

*ದಿವ್ಯಮಾತೆ, ನಾನು ನಿನ್ನೊಡನೆ ತಾದ್ಯಾತ್ಮವನ್ನು ಹೊಂದಬಯಸಿ ಪ್ರಯತ್ನಿಸಿದ ಸಾವಿರದ ಮೂರನೆಯ ಬಾರಿಯೂ ವಿಫಲನಾದೆ. ಅದಾಗ್ಯೂ ನನ್ನ ಈ ಆರು ವರ್ಷಗಳ ಸತತ ವೈಫಲ್ಯಗಳಲ್ಲೂ ನಾನು ಕಂಡುಕೊಂಡ ಸತ್ಯಗಳೆಂದರೆ, 'ನೀನೇ ನನ್ನ ತಾಯಿ, ನಾನು ನಿನ್ನ ಹೃದಯದಿಂದಲೇ ಜನಿಸಿರುವೆನು!' ಎಂಬುದಾಗಿದೆ. ಈ ಅನುಭವಕ್ಕಾದರೂ ನಾನು ನಿನಗೆ ಚಿರಋಣಿಯಾಗಿದ್ದೇನೆ.*

ಈ ಮನಸ್ಥಿತಿಯೇ ಬರಲಿರುವ ಎಲ್ಲ ಸತ್ಯದರ್ಶನಗಳಿಗೆ ನಿನ್ನನ್ನು ನೀನು ಸಿದ್ಧಪಡಿಸಿಕೊಳ್ಳಲು ಇರುವ ಸುಭದ್ರ ಅಡಿಪಾಯವಾಗಿದೆ. ಇದೇ ನೀನು ಪಡೆಯಲಿರುವ ಉತ್ತಮ ಫಲಿತಾಂಶಗಳ ನೆಲೆಯಾಗಿದೆ.

*

**ದಿವ್ಯಮಾತೆಯೆಡೆಗಿನ ಪವಿತ್ರ ಮಾರ್ಗ**

*ಕೆಲವೊಮ್ಮೆ ನಾನು ಧ್ಯಾನದಾಳದಲ್ಲಿ ಮುಳುಗಿರುವಾಗ, "ಮಾ–ಮಾ–ಮಾ" ಎನ್ನುತ್ತ ಪ್ರಾರ್ಥಿಸುತ್ತೇನೆ. ಆಗ ಎಲ್ಲವೂ ಸ್ಥಬ್ಧವಾಗಿ ನಾನು ಆಂತರ್ಯದಲ್ಲೂ*

*–ಬಾಹ್ಯದಲ್ಲೂ ಪರಮ ಶಾಂತಿಯನ್ನು ಅನುಭವಿಸುತ್ತೇನೆ. ಅದೇ ಸಮಯಕ್ಕೆ ನನ್ನ ಸುತ್ತಲಿನ ವಾತಾವರಣವೂ ನನ್ನೊಟ್ಟಿಗೆ "ಮಾ–ಮಾ–ಮಾ" ಎಂದು ಪಿಸುಗುಡುತ್ತಿರುವಂತೆ ಭಾಸವಾಗುತ್ತದೆ. ಅದು ನಿಜವಾಗಿಯೂ ಪ್ರಕೃತಿಯ ಪ್ರಾರ್ಥನೆಯೇ ಅಥವಾ ಅದು ಕೇವಲ ನನ್ನ ನುಡಿ ಪ್ರತಿಧ್ವನಿಯಷ್ಟೆಯೇ?*

ನಿಮ್ಮ ಸುತ್ತಲೂ ವ್ಯಾಪಿಸಿರುವ ಪ್ರಕೃತಿಯು ನಿಮ್ಮ ಪ್ರಜ್ಞಾ ವಲಯದ–ಪ್ರಭಾ ವಲಯದ ಅವಿಭಾಜ್ಯ ಅಂಗವೇ ಆಗಿರುತ್ತದೆ. ನೀವು ನಿಮ್ಮಾಂತರ್ಯದಲ್ಲಿ ಪಡೆಯುವ ಅನುಭವಗಳೆಲ್ಲವೂ ನಿಮ್ಮಿಂದ ಹೊರಹೊಮ್ಮಿ ಸುತ್ತಲಿನ ವಾತಾವರಣಕ್ಕೆ ಹರಿಯುತ್ತಿರುತ್ತದೆ. ನೀವು ಶ್ರೀಮಾತೆಯನ್ನು ಕೂಗಿ ಕರೆಯುತ್ತಿರುವಾಗ ನಿಮ್ಮೊಡನೆ ನಿಮ್ಮ ಆಂತರ್ಯದ ಚೇತನ, ಬಾಹ್ಯದ ವಾತಾವರಣ ಎರಡೂ ಏಕಕಾಲಕ್ಕೆ ಪ್ರತಿಧ್ವನಿಸುತ್ತವೆ. ಹಾಗಾಗಿ ನಿಮಗಾದ ಈ ಅನುಭೂತಿಯು ಸತ್ಯವೇ ಆಗಿದೆ. ಹಾಗೂ ಸಾಧನೆಯಲ್ಲಿ ಇಂತಹ ಅನುಭವಗಳು ಉತ್ತಮ ಪ್ರತಿಕ್ರಿಯೆಯನ್ನೇ ನೀಡುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/460–479 – ಶ್ರೀ ಅರವಿಂದರು**

## ಶ್ರೀಮಾತೆಯ ಪ್ರೇಮ

**– ಅನು: ಕಿಶೋರಕುಮಾರ ಕಾಸಾರ**

**ಸರಿಯಾದ ವರ್ತನೆ**

ನೀವು ಶ್ರೀಮಾತೆಗೆ ಎಂದಿಗೂ ಕ್ಷಮೆ ಕೇಳುವ ಅಗತ್ಯವಿಲ್ಲ. ಏಕೆಂದರೆ ಶ್ರೀಮಾತೆಗೆ ನಿಮ್ಮ ಮೇಲೆ ಕೋಪವಾಗಲೀ, ಅಸಮಾಧಾನವಾಗಲೀ ಇಲ್ಲವೇ ಇಲ್ಲ. ಅವಳ ದಿವ್ಯ ಪ್ರೇಮವು ಸದಾ ನಿಮ್ಮನ್ನು ರಕ್ಷಿಸುತ್ತಿರುತ್ತದೆ ಎಂಬುದನ್ನು ನೀವು ಮನಗಾಣಬೇಕು.

*

*ಇನ್ನು ಮುಂದೆ ನಾನು ದಿವ್ಯಮಾತೆಯ ಪ್ರೇಮವನ್ನು ಬಾಹ್ಯ ಮಾರ್ಗದಲ್ಲಿ ಅರಸಲು ಪ್ರಯತ್ನಿಸುವದಿಲ್ಲ. ನನಗೆ ಅವಳ ದಿವ್ಯ ಹಸ್ತದ ಸ್ಪರ್ಶವು ಆಗಲಿ ಅಥವಾ ಆಗದೇ ಇರಲಿ ಅದರಿಂದ ಯಾವ ವ್ಯತ್ಯಾಸವೂ ಆಗದು. ಅವಳ ಪ್ರೇಮವನ್ನು ಆಂತರ್ಯದಲ್ಲಿಯೇ ಯುಕ್ತ ರೀತಿಯಿಂದ ಸ್ವೀಕರಿಸಿದರೆ*

*ಅದಕ್ಕಿಂತ ಉತ್ತಮ ಕಾರ್ಯ ಬೇರೊಂದಿಲ್ಲ. ಅದನ್ನು ಬಿಟ್ಟು ಅವಳ ದಿವ್ಯ ಪ್ರೇಮವನ್ನು ಪಡೆಯದೇ ಇರುವುದು, ಅಥವಾ ಪಡೆದ ಪ್ರೇವವನ್ನು ವಾಮ ಮಾರ್ಗದಲ್ಲಿ ಬಳಸಿದ್ದೇ ಆದಲ್ಲಿ ಅದು ಹಂದಿಯೊಂದರ ಮುಂದೆ ಮುತ್ತುಗಳನ್ನೆಸೆದಂತೆ ವ್ಯರ್ಥವಾಗುವುದು.*

ಹೌದು ಈ ಮಾರ್ಗದಲ್ಲಿ ಪ್ರತಿಯೋರ್ವರೂ ಸರಿಯಾದ ವರ್ತನೆಯನ್ನೇ ತೋರಬೇಕು.

*

**ಪ್ರೇಮವು ಮಿಶ್ರಣ ರೂಪದಲ್ಲಿದೆ**

*ನಮಗೆಲ್ಲರಿಗೂ ಶ್ರೀಮಾತೆಯ ದಿವ್ಯ ಪ್ರೇಮದ ಅವಶ್ಯಕತೆಯಿದೆ. ಆದರೆ ಆಶ್ಚರ್ಯವೆಂಬಂತೆ ಶ್ರೀಮಾತೆಯ ಪ್ರೇಮಕ್ಕೆ ಬದಲಾಗಿ ನಾವೆಷ್ಟು ಜನ ಶ್ರೀಮಾತೆಯನ್ನು ಹೃದಯಪೂರ್ವಕವಾಗಿ ಪ್ರೀತಿಸುತ್ತೇವೆ ಎಂಬುದೇ ಪ್ರಶ್ನೆ. ಯಾರ‍್ಯಾರು ಏಕಕೇಂದ್ರೀಯವಾಗಿ, ತ್ಯಾಗ ರೂಪದಲ್ಲಿ ಮತ್ತು ಸೋಲರಿಯದ ಪ್ರೇಮವನ್ನು ಹೋಂದಿದ್ದೀರಿ? ಯಾರು ಕೇವಲ ದಿವ್ಯತೆಗೆ ಮಾತ್ರ ಪ್ರೇಮವನ್ನರ್ಪಿಸುವಿರಿ?*

ಹಾಗೆಂದ ಮಾತ್ರಕ್ಕೆ ನಮಗೆಲ್ಲರಿಗೂ ಶ್ರೀಮಾತೆಯ ಮೇಲೆ ಅಚಲವಾದ ಪ್ರೇಮ ಭಾವನೆ ಇಲ್ಲವೆಂದು ಅರ್ಥವಲ್ಲ. ನಮ್ಮೆಲ್ಲರಿಗೂ ಶ್ರೀಮಾತೆಯ ಮೇಲೆ ಪ್ರೇಮವಿದೆ ಆದರೆ ಅದು ಇತರ ದ್ರವ್ಯಗಳೊಂದಿಗೆ ಮಿಶ್ರಿತವಾಗಿದೆ ಹಾಗೂ ನಮ್ಮ ಅಹಮಿಕೆ, ಬೇಡಿಕೆ ಮತ್ತು ವೈಚಾರಿಕತೆಗಳು ಆ ಪ್ರೇವವನ್ನು ಮುತ್ತಿಗೆ ಹಾಕಿ ಮರೆಮಾಚಿವೆ. ಎಲ್ಲರ ವಿಷಯದಲ್ಲೂ ಹೀಗೆಯೇ ಆಗಿದೆ ಎಂದು ಹೇಳಲಾಗದು. ಆದರೆ ಕೆಲವರ ವಿಚಾರದಲ್ಲಿ ಈ ಪ್ರೇಮವೆಂಬುದು ತೆರೆಮರೆಯಲ್ಲಿಯೇ ಸುಪ್ತವಾಗಿ ನೆಲೆಸಿದೆ. ಕೆಲವರಿಗೆ ಪ್ರೇಮ ಭಾವನೆಯೆ ಇಲ್ಲವೆಂಬುದು ಖೇದಕರ ಸಂಗತಿಯಾಗಿದೆ. ಇನ್ನು ಕೆಲವರು ಪ್ರೇಮವನ್ನು ಕೇವಲ ಸ್ವೀಕರಿಸಲು ಮಾತ್ರ ಸಿದ್ಧರಿದ್ದಾರೆ. ಅವರಿಗೆ ಪ್ರೇಮವನ್ನು ನೀಡಲು ಅಥವಾ ಮರಳಿಸಲು ಮನವಿಲ್ಲ. ಇನ್ನು ಬಹುತೇಕರಲ್ಲಿ ಮಾನಸದ ಕಿಡಿಯು ಕಪಟ ಧೂಮದಿಂದ ಕೂಡಿ ಮಂಜಾಗಿ ಹೋಗಿದೆ. ಆ ಧೂಮವು ಕಳೆದು ಕಿಡಿಯು ಜ್ವಾಲೆಯಾಗಿ ಪ್ರೇಮ ಭಾವನೆಯು ಸುತ್ತೆಲ್ಲ ವ್ಯಾಪಿಸಬೇಕಿದೆ.

*

ಶ್ರೀಮಾತೆಯು ನಿಮ್ಮಿಂದ ಬಹು ದೂರದಲ್ಲಿ ನೆಲೆಸಿರುವಳೆಂದು ಬಗೆದು ನೀವು ಇತರರಿಗೆ ಕೆಡುಕನ್ನುಂಟು ಮಾಡಲು ಬಯಸುವ ಮನಸ್ಥಿತಿಯೇ ನಿಮ್ಮ ಅಧಃಪತನಕ್ಕೆ ಕಾರಣವಾಗಬಹುದು. ಏಕೆಂದರೆ ಶ್ರೀಮಾತೆ ಮತ್ತು ನೀವು ಸದಾ ಸಾಮಿಪ್ಯದಲ್ಲೇ ಇರುತ್ತೀರಿ. ನಾನು ತಿಳಿಸಿದಂತೆ ನೀವು, "ದಿವ್ಯಮಾತೆಯು ಸದಾ ನನ್ನನ್ನು ಪ್ರೀತಿಸುತ್ತಾಳೆ ಮತ್ತು ನಾನು ಅವಳಿಂದಲೇ ನಿರ್ಮಿತವಾಗಿದ್ದೇನೆ" ಎಂದು ಕಾರ್ಯಪ್ರವೃತ್ತಿಯಾದಲ್ಲಿ, ನಿಮ್ಮ ಮತ್ತು ಶ್ರೀಮಾತೆಯ ಮಧ್ಯೆ ಇರುವ ಪರದೆಯು ಸರಿದು ಸತ್ಯದರ್ಶನವಾಗುತ್ತದೆ. ಏಕೆಂದರೆ ಆ ಪರದೆಯು ನಿಮ್ಮ ಆಲೋಚನೆಯಿಂದಲೇ ರಚಿತವಾಗಿದ್ದು, ನಿಮ್ಮ ಆಲೋಚನೆಯಿಂದಲೇ ಅದನ್ನು ಸರಿಸಬೇಕಿದೆ.

### ಶ್ರೀಮಾತೆಯ ಪ್ರೇಮವು ಸದಾ ನಿಮ್ಮ ಮೇಲಿರುತ್ತದೆ

ಶ್ರೀಮಾತೆಯ ಪ್ರೇಮವನ್ನು ಸಂಪಾದಿಸಲು ನೀವು ಒಳ್ಳೆಯವರೇ ಆಗಿರಬೇಕೆಂಬ ನಿಯಮವೇನಿಲ್ಲ. ಅವಳ ನಿತ್ಯನೂತನ ಪ್ರೇಮವು ಚಿರಂತನವಾಗಿ ನಿಮ್ಮ ಮೇಲೆ ಸದಾ ಪ್ರವಹಿಸುತ್ತಿರುತ್ತದೆ. ಅದಕ್ಕೆ ಮಾನವ ಸ್ವಭಾವದ ಅಪರಿಪೂರ್ಣತೆಗಳು, ಕೀಳು ಮನೋಭಾವನೆಗಳು ಅಡ್ಡಿಯಾಗುವದಿಲ್ಲ. ಇದನ್ನು ನೀವು ಅರಿತಿರಬೇಕು. ಅದಕ್ಕಾಗಿ ನಮ್ಮ ಪ್ರಜ್ಞೆಯು ಯಾವಾಗಲೂ ಮಾನಸ ಹಂತದಲ್ಲೇ ನೆಲೆಸಿರಬೇಕು. ಏಕೆಂದರೆ ಮನೋಮಯಕ್ಕೆ ಬೌದ್ಧಿಕ, ವೈಚಾರಿಕ ಮತ್ತು ಭೌತಿಕದ ಲಕ್ಷಣಗಳು ಕೇವಲ ಮೇಲ್ಮೈ ಮುಖವಾಡಗಳು ಮಾತ್ರ ಅವಕ್ಕೆ ಪ್ರೇಮವನ್ನು ತಪ್ಪು ದಾರಿಗೆಳೆಯುವ ಶಕ್ತಿಯಿಲ್ಲವೆಂಬ ಸತ್ಯದ ಅರಿವಿದೆ. ಯಾವಾಗ ಶ್ರೀಮಾತೆಯ ದಿವ್ಯ ಶಕ್ತಿಯು ಕಾರ್ಯಪ್ರವೃತ್ತವಾಗಿರುವುದೋ ಆಗ ನಮ್ಮ ಪ್ರಜ್ಞೆಯು ಮನೋಮಯಕ್ಕೇರಿ ನಾವು ದಿವ್ಯ ಮಾತೆಯ ಪ್ರೇಮದ ಸಾಮಿಪ್ಯವನ್ನು ಅನುಭವಿಸುತ್ತೇವೆ. ಆದರೆ ಮಾನಸದ ಹೊರತಾಗಿ ಇರುವ ಇತರ ಸ್ತರಗಳೂ ಈ ಅನುಭೂತಿಯನ್ನು ಪಡೆಯಬೇಕಿದೆ. ಅದಕ್ಕಾಗಿ ಅವು ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳಲು ಸ್ವಲ್ಪ ಸಮಯಾವಕಾಶದ ಅವಶ್ಯಕತೆಯಿರುತ್ತದೆ. ಅದಕ್ಕೆ ತಾಳ್ಮೆ ಮತ್ತು ವಿಶ್ವಾಸದ ಅಗತ್ಯವಿದೆ. ಆಗ ಮಾತ್ರ ಶ್ರೀಮಾತೆಯು ಸಾಧನೆಯ ಮಾರ್ಗದಲ್ಲಿ ಒಳನುಸುಳುವ ಕಾಲವಂಚನೆಯಂತಹ ಇತರ ತೊಂದರೆಗಳಿಂದ ಪಾರುಮಾಡಿ ನಿಮ್ಮನ್ನು ತನ್ನ ದಿವ್ಯವೂ–ಭವ್ಯವೂ ಆದ ಸುಪ್ರಮಾನಸದ ಮಹಾಸೌಧಕ್ಕೆ ಕರೆದೊಯ್ಯುತ್ತಾಳೆ.

**ಎರಡು ತಪ್ಪುಗಳು**

'X' ಎನ್ನುವವರು ಮುಖ್ಯವಾಗಿ ಎರಡು ತಪ್ಪುಗಳನ್ನೆಸಗುತ್ತಿದ್ದಾರೆ. ಮೊದಲನೆಯದು, ಶ್ರೀಮಾತೆಯ ದಿವ್ಯ ಪ್ರೇಮವನ್ನು ಬಾಹ್ಯದ ಜಡ ಪ್ರಪಂಚದಲ್ಲಿ ಹುಡುಕಲು ಪ್ರಯತ್ನಿಸುತ್ತಿರುವುದು; ಎರಡನೆಯದು, ಶ್ರೀಮಾತೆಯ ಪ್ರೇಮಕ್ಕೆ ತಾನು ಮರಳಿಸಬೇಕಿರುವ ಮುಕ್ತ ಮನೋಭಾವನೆ ಮತ್ತು ಸಮರ್ಪಣಾ ಮನೋಭಾವನೆಯಿಲ್ಲದೆ ಶೀಘ್ರವಾದ ಪ್ರಗತಿಯನ್ನು ಬಯಸುತ್ತಿರುವುದು. ಇವುಗಳೇ ಸಾಧಕರು ನಿರಂತರವಾಗಿ ಮಾಡುತ್ತಿರುವ ಎರಡು ಪ್ರಮುಖ ತಪ್ಪುಗಳಾಗಿವೆ. ಒಂದು ವೇಳೆ ಸಾಧಕನು ಮುಕ್ತಮನದಿಂದ ಸಮರ್ಪಣೆಯ ಮನದಿಂದ ಪ್ರಯತ್ನಿಸಿದ್ದೇ ಆದಲ್ಲಿ ಪ್ರಕೃತಿಯು ತನಗೆ ತಾನೇ ನಮ್ಮ ಸಾಧನೆಯಲ್ಲಿ ಪ್ರಗತಿಯನ್ನು ತರುತ್ತದೆ; ಆದರೆ ಮುಕ್ತತೆ–ಸಮರ್ಪಣೆಯಿಲ್ಲದೇ ಕೇವಲ ವೈಯಕ್ತಿಕವಾದ ಏಕಾಗ್ರತೆಯಿಂದ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಿದ್ದೇ ಆದಲ್ಲಿ ಅದು ನಮ್ಮ ಮಾರ್ಗದಲ್ಲಿ ತೊಂದರೆಗಳನ್ನು, ಪ್ರತಿರೋಧಗಳನ್ನು ಮತ್ತು ನಿರಾಶೆಯ ಕೂಪಗಳನ್ನು ತಂದೊಡ್ಡುತ್ತದೆ. ಏಕೆಂದರೆ ಆ ಸಮಯದಲ್ಲಿ ನಮ್ಮ ಮನಸ್ಸು ಸರಿಯಾದ ದೃಷ್ಟಿಕೋನದಿಂದ ದ್ರವ್ಯಗಳನ್ನು ಈಕ್ಷಿಸುವದಿಲ್ಲ. ಶ್ರೀಮಾತೆಯವರಿಗೆ X ಅವರ ಮೇಲೆ ವಿಶೇಷವಾದ ದಯೆಯಿತ್ತು. ಹಾಗಾಗಿಯೇ ಅವರು ಪ್ರಣಾಮ ಸಭೆಯಲ್ಲಿ ಅವರ ಮೇಲೆ ಪ್ರಬಲವಾದ ಶಕ್ತಿಯನ್ನು ಪ್ರವಹಿಸುತ್ತಿದ್ದರು. ಏಕೆಂದರೆ, X ಅವರು ತಮ್ಮ ಮಾನಸ ಮತ್ತು ವೈಚಾರಿಕ ಸ್ತರದಲ್ಲಿ ಪರಮ ಶಾಂತಿಯನ್ನು ಅನುಭವಿಸಲೆಂದು, ಪವಿತ್ರಗೊಳ್ಳಲೆಂದು ಆ ಮುಖಾಂತರ ಅವರು ಒಂದು ಪ್ರಜ್ಞಾ ಪಾತ್ರೆಯಾಗಲೆಂದು ಶ್ರೀಮಾತೆಯವರು ಬಯಸಿದ್ದರು. ದಿವ್ಯ ಪ್ರೇಮವು ಮನುಷ್ಯಮಾತ್ರನ ಪರಿಧಿಯ ಸಾಮಾನ್ಯ ಪ್ರೇಮವಾಗಿರದೇ, ಅದು ಆಳವೂ–ಅಗಲವೂ–ಮೌನವೂ ಆಗಿರುವ ದ್ರವ್ಯವಾಗಿದೆ. ಅದರ ಆದ್ಯಂತವನ್ನು ಅರಿಯಬೇಕಿದ್ದರೆ ಸಾಧಕನ ಪ್ರಜ್ಞೆಯು ಕೂಡ ಆಳವೂ–ಅಗಲವೂ–ಮೌನವೂ ಆಗಿರಬೇಕು. ಹಾಗೂ ತನ್ನನ್ನು ತಾನು ಪೂರ್ಣ ರೂಪದಲ್ಲಿ ಸಮರ್ಪಣಾ ಮನೋಭಾವನೆಯಿಂದ ರೂಪಿಸಿಕೊಂಡಿರಬೇಕು ಆಗ ಮಾತ್ರ ಆತನು ಸುವರ್ಣ ಲೋಕಗಳಿಂದ ಧುಮ್ಮಿಕ್ಕುವ ದಿವ್ಯ ಪ್ರವಾಹವನ್ನು ಸಂಗ್ರಹಿಸುವ ಪ್ರಜ್ಞಾ ಪಾತ್ರೆಯಾಗುತ್ತಾನೆ. ದಿವ್ಯ ಜ್ಞಾನ ಮತ್ತು ದಿವ್ಯ ಪ್ರೇಮವನ್ನು ತನ್ನೊಳಗೆ ತುಂಬಿಕೊಳ್ಳುತ್ತಾನೆ. ಆದರೆ ಈ ಪ್ರಗತಿ–ಏಳಿಗೆ ಮತ್ತು ಜ್ಞಾನ–ಅನುಭವಗಳನ್ನು ಇಷ್ಟೇ ಸಮಯದಲ್ಲಿ ಸಂಪಾದಿಸಬೇಕೆಂದು ಅವನನ್ನು ಕಾಲದ ಸರ್ಪ ಬಂಧನದಲ್ಲಿ

ಸಿಲುಕಿಸಬಾರದು. ಪ್ರತಿಯೊಂದು ಸಾಧನೆಗೆ ಪ್ರತಿಯೊಂದು ಪ್ರಗತಿಗೆ ಕಾಲವ್ಯಯ–ವಾಗುವುದು ಸಹಜ. ಹಾಗಾಗಿ ಅವನು ತನ್ನ ಸಾಧನೆಗಾಗಿ ಸಿದ್ಧನಾಗಿರಬೇಕು, ತನ್ನಿಡೀ ಬದುಕನ್ನೇ ಅದಕ್ಕೆಂದು ಮೀಸಲಾಗಿಟ್ಟು ಕಾಯುತ್ತಿರಬೇಕು. ದಿವ್ಯತೆಯಲ್ಲಿ ಸಮರ್ಪಣೆಗೊಳ್ಳಬೇಕು. ಈ ಸಮರ್ಪಣೆಯು ಬಯಕೆ ಮತ್ತು ಅಪೇಕ್ಷೆಗಳ ಗೂಡಾಗಬಾರದು. ಏಕೆಂದರೆ, ಎಷ್ಟು ದ್ರವ್ಯಗಳನ್ನು ತುಂಬಿಕೊಳ್ಳುತ್ತಿದ್ದರೂ ಸಾಧಕನ ಪ್ರಜ್ಞೆಯು ತನ್ನ ಸ್ವೀಕರಿಸುವ ಶಕ್ತಿಯನ್ನು ಬೆಳೆಸಿಕೊಳ್ಳುತ್ತಲೇ ಇರುತ್ತದೆ. ತನ್ನ ಜ್ಞಾನ ದಾಹವನ್ನು ತೀರಿಸಿಕೊಳ್ಳಲು ಅದು ದಂಗೆಯೇಳದಂತೆ ನಿಯಂತ್ರಿಸಬೇಕಿದೆ. ಮತ್ತು ನಿರಂತರವಾಗಿ ತನ್ನ ಆಧ್ಯಾತ್ಮಿಕ ಪ್ರಯತ್ನಗಳನ್ನು ಮುಂದುವರಿಸುತ್ತಲೇ ಇರಬೇಕು.

*

ಶ್ರೀಮಾತೆಯ ದಿವ್ಯ ಪ್ರೇಮ ಮತ್ತು ದಿವ್ಯಾನುಭವವನ್ನು ಪಡೆಯಲು ಶಕ್ಯರಾಗಿರುವ ಸಾಧಕರಿಗೆ ಮಾತ್ರ ಅದನ್ನು ನೀಡಲಾಗುತ್ತದೆ. ಕೇವಲ ಭೌತಿಕವಾದ–ಪ್ರಜ್ಞಾಶೂನ್ಯವಾದ–ಭೌತವೈಚಾರಿಕವಾದ ನಿಲುವನ್ನುಳ್ಳವರಿಗೆ ಇದರ ಮೌಲ್ಯವು ತಿಳಿಯುವದಿಲ್ಲ.

*

ಶ್ರೀಮಾತೆಯು ಎಂದಿಗೂ ನಿಮ್ಮನ್ನು ದುಃಖಿಸುವಂತೆ ಪ್ರೇರೇಪಿಸುವದಿಲ್ಲ. ನಿಮ್ಮ ವೈಚಾರಿಕ ಶಕ್ತಿಗಳೇ ನಿಮ್ಮನ್ನು ದುಃಖಿತರನ್ನಾಗಿಸಿ ಕೊನೆಗೆ ಸಾಯುವ ಮನಸ್ಥಿತಿಯನ್ನು ತರುತ್ತವೆ. ಶ್ರೀಮಾತೆಯು ಕೇವಲ ದಿವ್ಯ ಪ್ರೇಮ, ದಿವ್ಯ ಪ್ರಕಾಶ, ದಿವ್ಯ ಶಾಂತಿ, ದಿವ್ಯಾನಂದ ಮತ್ತು ಆಧ್ಯಾತ್ಮಿಕ ಜೀವನವನ್ನು ಮಾತ್ರ ಕರುಣಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/479–82 – ಶ್ರೀ ಅರವಿಂದರು**

ಪ್ರೇಮ ಮತ್ತು ಭಕ್ತಿಗಳು ನಿಮ್ಮ ಮನೋಮಯದ ಬಾಗಿಲನ್ನು ತೆರೆಯು–ವದಕ್ಕಾಗಿಯೇ ಕಾದುಕುಳಿತಿರುತ್ತದೆ. ಅವುಗಳನ್ನು ಸಂಪಾದಿಸಬೇಕಿದ್ದರೆ ನಿಮ್ಮ ಜಡ ಬಯಕೆಗಳನ್ನು ಮೊಟಕುಗೊಳಿಸಬೇಕಿದೆ. ಕೆಲವರು ಶ್ರೀಮಾತೆಗೆ ಮಾನಸ ಪ್ರೇಮವನ್ನು ನೀಡುವುದರ ಬದಲು ವೈಚಾರಿಕ ಪ್ರೇಮವನ್ನು ಕೊಡುತ್ತಾರೆ. ಇದು ಗೊಂದಲವನ್ನು ಸೃಷ್ಟಿಸುತ್ತದೆ. ಏಕೆಂದರೆ, ಆ ವೈಚಾರಿಕ ಪ್ರೇಮವು ಕೇವಲ ಜಡ ಬಯಕೆಯ ಮಟ್ಟದಲ್ಲೇ ನೆಲೆಸಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/475 – ಶ್ರೀ ಅರವಿಂದರು**

# ಆಂತರ್ಯ–ಸ್ಪಂದ ಮತ್ತು ಬಾಹ್ಯ ಛಂದ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಶ್ರೀಮಾತೆಯೊಬ್ಬಳೆ

ಅನೇಕ ರೂಪಗಳಲ್ಲಿರುವ ಶ್ರೀಮಾತೆಯು ಒಬ್ಬಳೇ ಆಗಿದ್ದಾಳೆಂಬುದು ನಿಜ, ಆದರೆ ಬಾಹ್ಯ ಮತ್ತು ಆಂತರಿಕ ಮಾತೆಯ ನಡುವಿನ ವ್ಯತ್ಯಾಸವನ್ನು ತುಂಬಾ ತೀಕ್ಷ್ಣವನ್ನಾಗಿ ಮಾಡಬಾರದು; ಏಕೆಂದರೆ ಅವಳು ಒಬ್ಬಳೇ ಅಲ್ಲ, ಭೌತಿಕ ತಾಯಿಯು ತನ್ನಲ್ಲಿ ಇತರರೆಲ್ಲರನ್ನೂ ಒಳಗೊಂಡಿದ್ದಾಳೆ ಮತ್ತು ಅವಳಲ್ಲಿ ಆಂತರಿಕ ಮತ್ತು ಬಾಹ್ಯ ಅಸ್ತಿತ್ವದ ನಡುವಿನ ಸಂಪರ್ಕವು ಸ್ಥಾಪಿಸಲ್ಪಟ್ಟಿದೆ. ಬಾಹ್ಯ ಮಾತೆಯನ್ನು ತಿಳಿದುಕೊಳ್ಳಬೇಕಾದರೆ, ಅವಳ ಬಾಹ್ಯ ರೂಪಗಳೆಡೆಗೆ ಮಾತ್ರ ನೋಡದೆ, ಅವಳಂತರಂಗದಲ್ಲಿ ಏನಿದೆ ಎನ್ನುವುದನ್ನು ನಾವು ತಿಳಿದಿರಲೇಬೇಕು. ಅದು ಸಾಧ್ಯವಾಗುವುದು, ನಾವು ಅವಳನ್ನು ಅಂತಃ ಪುರುಷನೊಂದಿಗೆ ಭೇಟಿಯಾದರೆ ಮತ್ತು ಅವಳ ಪ್ರಜ್ಞೆಯಲ್ಲಿ ಬೆಳೆದರೆ ಮಾತ್ರ – ಬಾಹ್ಯ ಬಾಂಧವ್ಯವನ್ನು ಮಾತ್ರ ಬಯಸುವವರು ಅದನ್ನು ಮಾಡಲು ಸಾಧ್ಯವಿಲ್ಲ.

## ಬಾಂಧವ್ಯವು ಅಂತರಂಗದಿಂದ ಪ್ರಾರಂಭವಾಗುತ್ತದೆ

ಆಧ್ಯಾತ್ಮಿಕ ಬಾಂಧವ್ಯವು ಒಳಗಿನಿಂದ ಪ್ರಾರಂಭವಾಗಬೇಕು ಮತ್ತು ಅಲ್ಲಿಂದ ಹರಡಬೇಕು; ಇದು ಬಾಹ್ಯವಾದ ಯಾವುದರ ಮೇಲೂ ಆಧರಿಸಿರಲು ಸಾಧ್ಯವಿಲ್ಲ – ಹಾಗೇನಾದರು ಅದು ಆಧರಿಸಿದ್ದರೆ, ಬಾಂಧವ್ಯವು ಆಧ್ಯಾತ್ಮಿಕವಾಗಿರಲು ಅಥವಾ ನೈಜವಾಗಿರಲು ಸಾಧ್ಯವಿಲ್ಲ. ಇಲ್ಲಿ ಅನೇಕರು ಮಾಡುವ ದೊಡ್ಡ ತಪ್ಪು ಅದಾಗಿದೆ: ಅವರು ಶ್ರೀಮಾತೆಯವರೊಂದಿಗಿನ ಬಾಹ್ಯ ಪ್ರಾಣಿಕ ಅಥವಾ ಭೌತಿಕ ಬಾಂಧವ್ಯಕ್ಕೆ ಹೆಚ್ಚು ಒತ್ತು ನೀಡುತ್ತಾರೆ, ಪ್ರಾಣಿಕ ವಿನಿಮಯ ಇಲ್ಲವೆ ಭೌತಿಕ ಸಂಪರ್ಕಕ್ಕೆ ಆಗ್ರಹಿಸುತ್ತಾರೆ ಮತ್ತು ಅವರ ತೃಪ್ತಿಗನುಸಾರವಾಗಿ ಪಡೆದುಕೊಳ್ಳಲು ಸಾಧ್ಯವಾದಾಗ, ಎಲ್ಲಾ ರೀತಿಯ ಅಡಚಣೆಗಳಿಗೆ, ಪ್ರತಿಭಟನೆಗೆ, ಅನುಮಾನಕ್ಕೆ, ಖಿನ್ನತೆಗೆ ಒಳಗಾಗುತ್ತಾರೆ. ಇದು ಸಂಪೂರ್ಣವಾಗಿ ತಪ್ಪು ದೃಷ್ಟಿಕೋನವಾಗಿದೆ ಮತ್ತು ಅದು ಹೆಚ್ಚಿನ ಅಡಚಣೆ ಮತ್ತು ತೊಂದರೆಯನ್ನು ಉಂಟುಮಾಡುತ್ತದೆ. ಮನಸ್ಸು, ಪ್ರಾಣ, ಭೌತಿಕಗಳು ಮಿಲನದಲ್ಲಿ ಭಾಗವಹಿಸಬಹುದು ಮತ್ತು ಅದರಲ್ಲಿ ಭಾಗವಹಿಸಲು ಸಂಕಲ್ಪ ಮಾಡಿವೆ, ಆದರೆ ಅದಕ್ಕಾಗಿ ಅವುಗಳು ಚೈತ್ಯಕ್ಕೆ

ಅರ್ಪಿಸಿಕೊಂಡಿರಬೇಕು, ತಮ್ಮನ್ನು ತಾವು ಚೈತ್ಯಗೊಳಿಸಿಕೊಳ್ಳಬೇಕು; ಮಿಲನವು ಒಂದು ಚೈತ್ಯವಾಗಿರಬೇಕು ಮತ್ತು ಮನಸ್ಸು, ಪ್ರಾಣ ಹಾಗೂ ಭೌತಿಕದೆಡೆಗೆ ಹರಡುವ ಆಧ್ಯಾತ್ಮಿಕ ಸೇರುವಿಕೆಯಾಗಿರಬೇಕು. ಭೌತಿಕವೂ ಸಹ ಶ್ರೀಮಾತೆಯ ಸಾಮಿಪ್ಯವನ್ನು, ಅವಳ ಸ್ಪಷ್ಟ ಉಪಸ್ಥಿತಿಯನ್ನು ಅಗೋಚರವಾಗಿ ಅನುಭವಿಸಲು ಶಕ್ತವಾಗಬೇಕು – ಆಗ ಮಾತ್ರ ಮಿಲನವು ನೈಜವಾಗುತ್ತದೆ ಮತ್ತು ಪೂರ್ಣಗೊಳ್ಳುತ್ತದೆ, ನಂತರ ಯಾವುದೇ ಭೌತಿಕ ನಿಕಟತೆ ಅಥವಾ ಸ್ಪರ್ಶವು ಅದರ ನಿಜವಾದ ಮೌಲ್ಯವನ್ನು ಕಂಡುಕೊಳ್ಳುತ್ತದೆ ಮತ್ತು ಅದರ ಆಧ್ಯಾತ್ಮಿಕ ಉದ್ದೇಶವನ್ನು ಪೂರೈಸುತ್ತದೆ. ಅಲ್ಲಿಯವರೆಗೆ ಯಾವುದೇ ಭೌತಿಕ ಸಂಪರ್ಕವು ಆಂತರಿಕ ಸಾಧನಕ್ಕೆ ಸಹಾಯ ಮಾಡುವವರೆಗೆ ಮಾತ್ರ ಮೌಲ್ಯಯುತವಾಗಿರುತ್ತದೆ, ಆದರೆ ಎಷ್ಟನ್ನು ಕೊಡಬಹುದು ಮತ್ತು ಏನು ಸಹಾಯ ಮಾಡುತ್ತದೆ ಅಥವಾ ಅಡ್ಡಿಮಾಡುತ್ತದೆ ಎನ್ನುವುದನ್ನು ಶ್ರೀಮಾತೆಯವರು ಮಾತ್ರ ನಿರ್ಣಯಿಸಬಹುದು, ಸಾಧಕನು ನ್ಯಾಯಾಧೀಶರಾಗಲು ಸಾಧ್ಯವಿಲ್ಲ – ಅವನು ಆಸೆಗಳಿಂದ ಮತ್ತು ನಿಮ್ನ ಪ್ರಾಣಿಕ ಅಹಂಕಾರದಿಂದ ನಿರ್ದೇಶಿಸಲ್ಪಡುವನು (ವಾಸ್ತವವಾಗಿ ಅನೇಕರು ನಿರ್ದೇಶಿಸಲ್ಪಟ್ಟಂತೆ). ಶ್ರೀಮಾತೆಯವರು ಸ್ಥಾಪಿಸಿದ ಭೌತಿಕ ಸ್ಪರ್ಶದಿಂದ ಸಹಾಯ ಮಾಡುವ ಅಂತಹ ವಿಧಾನಗಳು ಸಾಧಕರ ದುರುಪಯೋಗದಿಂದ (ತಪ್ಪು ವರ್ತನೆಯಿಂದ) ಹೆಚ್ಚಾಗಿ ಹಾಳಾಗಿವೆ. ಪ್ರಾಣಿಕ ಬೇಡಿಕೆಯು ತನ್ನ ಹಕ್ಕುಗಳೊಂದಿಗೆ ಮತ್ತು ಪ್ರತಿಭಟನೆಯೊಂದಿಗೆ ಇದ್ದಾಗ ಮತ್ತು ಬಾಹ್ಯ ಸಂಪರ್ಕ ಅಥವಾ ನಿಕಟತೆಯ ಬಯಕೆಯನ್ನು ಈ ವಿಷಯಗಳಿಗೆ ಕಾರಣವಾಗಿ ಅಥವಾ ಸಂದರ್ಭವಾಗಿ ತೆಗೆದುಕೊಂಡಾಗ, ಅದು ಆಂತರಿಕ ಮಿಲನದ ಬೆಳವಣಿಗೆಗೆ ಗಂಭೀರ ಅಡಚಣೆಯಾಗುತ್ತದೆ, ಅದು ಯಾವುದೇ ಸಹಾಯವನ್ನು ಮಾಡುವುದಿಲ್ಲ. ಶ್ರೀಮಾತೆಯವರು ಒಬ್ಬ ವ್ಯಕ್ತಿಯನ್ನು ಇನ್ನೊಬ್ಬನಿಗಿಂತ ಹೆಚ್ಚು ನೋಡಿದಾಗ ಅದು ವೈಯಕ್ತಿಕ ಆದ್ಯತೆಯ ಕಾರಣದಿಂದಾಗಿ ಮತ್ತು ಆ ವ್ಯಕ್ತಿಗೆ ಹೆಚ್ಚು ಪ್ರೀತಿ ಮತ್ತು ಸಹಾಯವನ್ನು ನೀಡುತ್ತಿದ್ದಾರೆ ಎಂದು ಸಾಧಕರು ತಮ್ಮ ಅಜ್ಞಾನದಲ್ಲಿ ಯಾವಾಗಲೂ ಕಲ್ಪಿಸಿಕೊಳ್ಳುತ್ತಾರೆ. ಒಟ್ಟಾರೆ ಅದೊಂದು ಪ್ರಮಾದ. ಭೌತಿಕ ನಿಕಟತೆ ಮತ್ತು ಸಂಪರ್ಕವು ಸಾಧಕನಿಗೆ ಒಂದು ತೀವ್ರವಾದ ಅಗ್ನಿಪರೀಕ್ಷೆ–ಯಾಗಬಹುದು; ಇದು ಪ್ರಾಣಿಕ ಬೇಡಿಕೆಗಳನ್ನು, ಹಕ್ಕುಗಳನ್ನು, ಅಸೂಯೆ ಇತ್ಯಾದಿಗಳನ್ನು ಹೆಚ್ಚಿಸಬಹುದು; ಮತ್ತೊಂದೆಡೆ, ಆಂತರಿಕ ಮಿಲನಕ್ಕಾಗಿ ಯಾವುದೇ ಗಂಭೀರ ಪ್ರಯತ್ನವನ್ನು ಮಾಡದೆ ಬಾಹ್ಯ ಬಾಂಧವ್ಯದಿಂದ ಅವನು

ತೃಪ್ತಿಯನ್ನು ಹೊಂದಬಹುದು; ಅಥವಾ ಅದು ಅವನಿಗೆ ಯಾಂತ್ರಿಕವೆನಿಸಬಹುದು, ಏಕೆಂದರೆ ಸಾಮಾನ್ಯವಾದ್ದರಿಂದ ಮತ್ತು ಪರಿಚಿತವಾದ್ದರಿಂದ ಮತ್ತು ಯಾವುದೇ ಆಂತರಿಕ ಉದ್ದೇಶಕ್ಕಾಗಿ ಸಾಕಷ್ಟು ನಿಷ್ಪರಿಣಾಮಕಾರಿಯಾದ್ದರಿಂದ – ಈ ವಿಷಯಗಳು ಕೇವಲ ಸಾಧ್ಯವಷ್ಟೆ ಅಲ್ಲ, ಅನೇಕ ಸಂದರ್ಭಗಳಲ್ಲಿ ಸಂಭವಿಸಿವೆ ಕೂಡ. ಶ್ರೀಮಾತೆಯವರಿಗೆ ಅದು ತಿಳಿದಿದೆ, ಮತ್ತು ಈ ವಿಷಯದಲ್ಲಿ ಅವರ ವ್ಯವಸ್ಥೆಗಳು ಅವರಿಗೆ ಸಂಬಂಧಿಸಿದ ಕಾರಣಗಳಿಗಿಂತ ಹೆಚ್ಚು ಬೇರೆ ಬೇರೆ ಕಾರಣಗಳಿಂದ ನಿರ್ದೇಶಿಸಲ್ಪಟ್ಟಿವೆ.

**ಏಕಮಾತ್ರ ಸುರಕ್ಷಿತ ಸಂಗತಿ**

ಅತಿ ಮುಖ್ಯವಾಗಿ ಮತ್ತು ಸಂಪೂರ್ಣವಾಗಿ ಆಂತರಿಕ ಮಿಲನದ ಮೇಲೆ ಕೇಂದ್ರೀಕರಿಸುವುದು ಏಕಮಾತ್ರ ಸುರಕ್ಷಿತ ಸಂಗತಿಯಾಗಿದೆ, ಆ ಒಂದು ಸಂಗತಿಯನ್ನು ಸಾಧಿಸುವಂತೆ ಮಾಡಲು, ಬಾಹ್ಯವಾದುದಕ್ಕೆ ಎಲ್ಲ ಹಕ್ಕುಗಳನ್ನು ಹಾಗೂ ಬೇಡಿಕೆಗಳನ್ನು ಬದಿಗಿರಿಸಬೇಕು, ಶ್ರೀಮಾತೆಯವರು ನೀಡಿದ್ದನ್ನು ತೃಪ್ತಿಯಿಂದ ಸ್ವೀಕರಿಬೇಕು, ಅವರ ಬುದ್ಧಿವಂತಿಕೆಯ ಮತ್ತು ಉತ್ಸುಕತೆಯ ಮೇಲೆ ಸಂಪೂರ್ಣ ಭರವಸೆಯನ್ನಿರಿಸಬೇಕು. ಪ್ರತಿಭಟನೆ, ಅನುಮಾನ, ಖಿನ್ನತೆ, ಹತಾಶೆ, ಹೋರಾಟಗಳನ್ನು ಹುಟ್ಟುಹಾಕುವ ಬಯಕೆಯು ಆಧ್ಯಾತ್ಮಿಕ ಕ್ರಿಯೆಯ ನಿಜವಾದ ಭಾಗವಾಗಲಾರದು ಎಂಬುದು ಸ್ಪಷ್ಟವಾಗಿರಬೇಕು. ಇದು ಸರಿಯಾದ ಸಂಗತಿಯಾಗಿದೆ ಎಂದು ನಿಮ್ಮ ಮನಸ್ಸು ನಿಮಗೆ ಹೇಳಿದರೆ, ಆಗ ನೀವು ಖಂಡಿತವಾಗಿಯೂ ನಿಮ್ಮ ಮನಸ್ಸಿನ ಸಲಹೆಗಳನ್ನು ನಂಬಲೇಬಾರದು. ಅಗತ್ಯವಿರುವ ಒಂದು ವಿಷಯದ ಮೇಲೆ ಸಂಪೂರ್ಣವಾಗಿ ಕೇಂದ್ರೀಕರಿಸಿ, ಈ ಕ್ರಿಯೆಯನ್ನು ಅಡ್ಡಿಪಡಿಸಲು ಅಥವಾ ನಿಮ್ಮನ್ನು ದಾರಿ ತಪ್ಪಿಸಲು ಬರುವ ಎಲ್ಲಾ ಆಲೋಚನೆಗಳನ್ನು ಮತ್ತು ಶಕ್ತಿಗಳನ್ನು ದೂರವಿಡಿ. ಈ ವಿಷಯಗಳಿಗೆ ಅನುಮತಿಸಿದ ಪ್ರಾಣವನ್ನು ಜಯಿಸಬೇಕು, ಅದಕ್ಕಾಗಿ ಮೊದಲು ಮಾಡಬೇಕಾದ ಸಂಗತಿ ಏನೆಂದರೆ ಎಲ್ಲಾ ಮಾನಸಿಕ ಸಮ್ಮತಿಯನ್ನು ನಿರಾಕರಿಸುವುದು, ಏಕೆಂದರೆ ಮಾನಸಿಕ ಬೆಂಬಲವು ಆ ವಿಷಯಗಳು ಹೊಂದಿರುವುದಕ್ಕಿಂತ ಹೆಚ್ಚಿನ ಶಕ್ತಿಯನ್ನು ನೀಡುತ್ತದೆ. ಮನಸ್ಸಿನಲ್ಲಿ ಸರಿಯಾದ ಮನೋಭಾವವನ್ನು ಮತ್ತು ಆಳವಾದ ಭಾವನಾತ್ಮಕ ಪುರುಷನನ್ನು ಸ್ಥಾಯಿಗೊಳಿಸಿ – ವಿರೋಧಿ ಶಕ್ತಿಗಳು

ಉದ್ಭವಿಸಿದಾಗ ಅದಕ್ಕೆ ಅಂಟಿಕೊಳ್ಳಿ ಮತ್ತು ಚೈತ್ಯನ ಮನೋವೃತ್ತಿಯಲ್ಲಿನ ನಿಮ್ಮ ದೃಢತೆಯಿಂದ ಅವುಗಳನ್ನು ಹಿಮ್ಮೆಟ್ಟಿಸಿ.

*

**ಶ್ರೀಮಾತೆಯವರೊಡನೆ ಮತ್ತು ಸಾಧಕರೊಡನೆ ಬಾಂಧವ್ಯಗಳು**

ಶ್ರೀಮಾತೆಯವರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು ಮತ್ತು ಎಲ್ಲ ಸಾಧಕರೊಂದಿಗೆ ಸ್ನೇಹಪರ ಬಾಂಧವ್ಯವನ್ನು ಮಾತ್ರ ಹೊಂದುವುದು ಪರಿಪೂರ್ಣತೆಯ ಸಲಹೆಯಾಗಿದೆ; ಅದರೆ ಕೆಲವರನ್ನು ಹೊರತುಪಡಿಸಿ, ಬಹಳಷ್ಟು ಜನರು ಇದನ್ನು ನಿಭಾಯಿಸಲಾರರು. ಆದರೂ ಅದನ್ನು ಪ್ರವೃತ್ತಿಯಲ್ಲಿ ಹೊಂದುವುದು ಎಂದರೆ ಸಾಧನೆಯ ಏಕಾಗ್ರತೆಯ ಕಡೆಗೆ ನಿಜವಾಗಿ ಹೊರಳುವುದಾಗಿದೆ; ಆದರೆ ಅದನ್ನು ತಲುಪಲು ಜನರು ಸಮಯ ತೆಗೆದುಕೊಳ್ಳುತ್ತಾರೆ.

*

ಹೌದು, ಇದು ಪಡೆದುಕೊಳ್ಳಬೇಕಾದ ವಿಷಯವಾಗಿದೆ – ಮಾನವ ಸ್ವಭಾವವು ಸಾಮಾನ್ಯವಾಗಿ ಮಾಡುವಂತೆ, ದೈವಿಕ ಪ್ರಭಾವಗಳನ್ನು ಬಿಟ್ಟು ಬೇರೆ ಏನನ್ನೂ ಪಡೆಯದಿರುವುದು. ನಂತರ ಶ್ರೀಮಾತೆಯವರ ಬೆಳಕಿನ ಮತ್ತು ಶಕ್ತಿಯ ಏಕಮಾತ್ರ ಪ್ರಭಾವದ ಅಡಿಯಲ್ಲಿ, ಪ್ರಕೃತಿಯಲ್ಲಿ ಬದಲಾಗಬೇಕಾದ ಎಲ್ಲವನ್ನೂ ಶಾಂತವಾಗಿ ಮತ್ತು ಸುಗಮವಾಗಿ ಬದಲಾಯಿಸಬಹುದು, ವಿಕಾಸ ಹೊಂದಬೇಕಾದ ಎಲ್ಲವನ್ನೂ ಗಲಭೆ ಅಥವಾ ತೊಂದರೆಯಿಲ್ಲದೆ ವಿಕಸನಗೊಳಿಸಬಹುದು.

*

ಶ್ರೀಮಾತೆಯವರೊಂದಿಗೆ ನೇರ ಬಾಂಧವ್ಯವು ನಿಮಗೆ ಯಾವಾಗಲೂ ಮುಕ್ತವಾಗಿರುತ್ತದೆ ಮತ್ತು ನೀವು ಅದನ್ನು ಅನುಭವಿಸಿದಾಗಲೆಲ್ಲಾ ಅದು ಇರುತ್ತದೆ; ಯಾಕೆಂದರೆ ಇದು ಅಂತಃ ಪುರುಷನ ವಿಷಯವಾಗಿದೆ. ನೀವು ನಿಮ್ಮೊಳಗೆ ಆಳವಾಗಿ ಹೋದಾಗಲೆಲ್ಲಾ ಅದನ್ನು (ಬಾಂಧವ್ಯ) ನೀವು ಕಂಡುಕೊಳ್ಳುತ್ತೀರಿ; ಅದು ಹೊರಬರಬೇಕು ಮತ್ತು ಬಾಹ್ಯ ಪ್ರಕೃತಿಯನ್ನು ಮತ್ತು ಜೀವನವನ್ನು ನಿಯಂತ್ರಿಸಬೇಕು. ಅದಕ್ಕಾಗಿಯೇ ನೀವು ನಿಮ್ಮೊಳಗೆ ಹೋಗಲು ಮತ್ತು ಸಾಧನೆಯಲ್ಲಿ ಆಂತರಿಕ ಪ್ರಗತಿಗೆ ಸಮಯವನ್ನು ನೀಡಬೇಕೆಂದು ನಾನು ಬಯಸುತ್ತೇನೆ. ಒಬ್ಬ ವ್ಯಕ್ತಿಯೊಂದಿಗೆ (ಅ ಎಂಬ ವ್ಯಕ್ತಿ) ಶ್ರೀಮಾತೆಯು ಸ್ಥಾಪಿಸಲು

ಯೋಚಿಸಿದ ಬಾಂಧವ್ಯವು, ಇಬ್ಬರು ಸ್ನೇಹಿತರದ್ದು ಮತ್ತು ಅವರ ಕಾರ್ಯದಲ್ಲಿನ ಸಹ ಕೆಲಸಗಾರರದ್ದು, ಅವಳು (ಅ) ನಿಮ್ಮ ಮತ್ತು ಮಾತೆಯ ಮಧ್ಯೆ ಇರಬೇಕೆಂದು ಎಂದಿಗೂ ಉದ್ದೇಶಿಸಿರಲಿಲ್ಲ. ಇನ್ನೊಬ್ಬರ ಸಂದರ್ಭದಲ್ಲಿ (ಬ ಎಂಬ ವ್ಯಕ್ತಿ) ನಿಮಗೆ ಸಹಾಯವನ್ನು ನೀಡಬೇಕಾಗಿತ್ತು, ಇದರಿಂದಾಗಿ ನೀವು ಅನುಭವಿಸಿದ ದಾಳಿಯಿಂದ ನೀವು ಭಾವಪರವಶರಾಗಬಾರದು ಮತ್ತು ನಿಮ್ಮಲ್ಲಿ ಹಾಗೂ ನಿಮ್ಮೊಂದಿಗೆ ತಾಯಿಯ ಉಪಸ್ಥಿತಿಯನ್ನು ಕಂಡುಕೊಳ್ಳುವ ಹಂತವನ್ನು ತಲುಪುವವರೆಗೆ ಸಮಯ ಮತ್ತು ಬೆಂಬಲವನ್ನು ಹೊಂದಿರಬಹುದು. ಅದನ್ನೀಗ ನೀವೇ ಮಾಡಬಹುದು ಮತ್ತು ಯಾವುದೇ ರೀತಿಯಲ್ಲಿ ಇನ್ನೊಬ್ಬರನ್ನು ಮಧ್ಯ ಪ್ರವೇಶಿಸಲು ಕೇಳಲು ಯಾವುದೇ ಕಾರಣವಿಲ್ಲ – ನಮ್ಮ ಕಾರ್ಯವು ನೇರವಾಗಿ ನಿಮ್ಮಲ್ಲಿ ಮತ್ತು ನಿಮ್ಮ ಮೇಲೆ ಇರುತ್ತದೆ ಮತ್ತು ಯಾರ ಮೂಲಕವೂ ಅಲ್ಲ.

*

**ಮೂರು ನಿಯಮಗಳು**

ಬಾಂಧವ್ಯವನ್ನು ಬೆಳೆಸಲು, ಮೂರು ನಿಯಮಗಳನ್ನು ಪಾಲಿಸಿರಿ:

(1) ಶ್ರೀಮಾತೆಯ ಆರೈಕೆ ಮತ್ತು ಪ್ರೀತಿಯಲ್ಲಿ ಸದಾ ಭರವಸೆ ಇರಲಿ – ಅವರಲ್ಲಿ ವಿಶ್ವಾಸವಿಡಿ ಮತ್ತು ಪ್ರತಿಯೊಂದು ಸಲಹೆಯನ್ನು, ವಿರೋಧಿಸುವಂತೆ ತೋರುವ ಪ್ರತಿಯೊಂದು ನೋಟವನ್ನು ನಂಬಬೇಡಿ.

(2) ಶ್ರೀಮಾತೆಯೊಂದಿಗಿನ ನಿಮ್ಮ ನೈಜ ಬಾಂಧವ್ಯದಿಂದ, ಆಂತರಿಕ ಸಾಮೀಪ್ಯದಿಂದ, (ಶ್ರೀಮಾತೆಯಲ್ಲಿಯ) ಸರಳ ಮತ್ತು ನೇರವಾದ ವಿಶ್ವಾಸದಿಂದ – ನಿಮ್ಮ ಶ್ರೀಮಾತೆಯವರಿಂದ ಹಿಂದೆ ಸರಿಯುವಂತೆ ಮಾಡುವ ಪ್ರತಿಯೊಂದು ಭಾವನೆಯನ್ನು, ಪ್ರತಿಯೊಂದು ಪ್ರಚೋದನೆಯನ್ನು ತಕ್ಷಣವೇ ತಿರಸ್ಕರಿಸಿ.

(3) ಬಾಹ್ಯ ಸುಳಿವುಗಳ ಮೇಲೆ ಅವಲಂಬಿಸಬೇಡಿ – ಅವುಗಳ ನಿಮ್ಮ ಅವಲೋಕನವು (ನಿಮ್ಮನ್ನು) ಸುಲಭವಾಗಿ ದಾರಿ ತಪ್ಪಿಸಬಹುದು. ನಿಮ್ಮನ್ನು ಶ್ರೀಮಾತೆಯವರಿಗೆ ಮುಕ್ತವಾಗಿರಿಸಿಕೊಳ್ಳಿ ಮತ್ತು ನಿಮ್ಮ ಹೃದಯದಿಂದ (ಆಂತರಿಕ ಹೃದಯ, ನೈಜ ಭಾವನೆಯ ಹೃದಯ,

ಮೇಲ್ಮೈ ಪ್ರಾಣಿಕ ಬಯಕೆಯನ್ನಲ್ಲ) ಅನುಭವಿಸಿ – ನಂತರ ನೀವು ಅವಳನ್ನು ಕಾಣುವ ಸಾಧ್ಯತೆಯಿದೆ ಮತ್ತು ಯಾವಾಗಲೂ ನಿಮ್ಮ ಆತ್ಮದಲ್ಲಿ ಅವಳ ಸಾಮೀಪ್ಯದಲ್ಲಿ ಇರುತ್ತೀರಿ ಮತ್ತು ಅವರು ನಿಮಗೆ ಏನು ಕೊಡಮಾಡಬೇಕೆಂದು ನಿರಂತರವಾಗಿ ಕಾರ್ಯ ಮಾಡುತ್ತಿರುವರು ಅದನ್ನು ಸ್ವೀಕರಿಸಿರಿ.

*

**ಶ್ರೀಮಾತೆಯವರ ಸಾಮಿಪ್ಯ ಮತ್ತು ಸಾಧನೆಯಲ್ಲಿ ಪ್ರಗತಿ**

ನೀವು ಯಾವುದನ್ನು ಸಾಮಿಪ್ಯ ಎಂದು ಕರೆಯುತ್ತೀರೊ, ಅದಕ್ಕೆ “ಬೇಗ” ಅಥವಾ “ವಿಳಂಬ” ಎನ್ನುವುದು ಯಾವುದೇ ಸಂಬಂಧವನ್ನು ಹೊಂದಿಲ್ಲ. ಕೆಲವರು “ಮುಂಚಿತ”ವಾಗಿ ಬಂದವರು ಮತ್ತು ಕೆಲವರು ಅವರಿಗೆ “ಹತ್ತಿರ”ದಲ್ಲಿ ಇರುವವರು “ಪ್ರಣಾಮ” ಸಮಯದಲ್ಲಿ ಮಾತ್ರ ಶ್ರೀಮಾತೆಯವರನ್ನು ಭೌತಿಕವಾಗಿ ಕಾಣುತ್ತಾರೆ; ವಿಳಂಬವಾಗಿ ಬರುವ ಕೆಲವರು ಶ್ರೀಮಾತೆಯವರನ್ನು ಪ್ರತಿದಿನವೂ ಕಾಣುವ ಅವಕಾಶವನ್ನು ಹೊಂದಿರುತ್ತಾರೆ, ಏಕೆಂದರೆ ಅವರ ಕಾಯಕವೇ ಹಾಗಿರುತ್ತದೆ. ಅವರು ಶ್ರೀಮಾತೆಯವರ ಸನಿಹದಲ್ಲಿರಬೇಕೆಂದು ಕೆಲಸವನ್ನು ಅವರಿಗೆ ನೀಡಿಲ್ಲ! ಅವರ ಕಾಯಕದ ಕಾರಣವಾಗಿ ಅವರು ಶ್ರೀಮಾತೆಯವರನ್ನು ನೋಡುತ್ತಾರೆ; ಅವರು ಹತ್ತಿರದಲ್ಲಿರಲು ಕೆಲಸವನ್ನು ಅವರಿಗೆ ನೀಡಲಾಗಿಲ್ಲ! ನೀವು ವಿಷಯವನ್ನು ತಪ್ಪಾಗಿ ಗ್ರಹಿಸಿದ್ದೀರಿ – ಇದು ಮೊದಲ ಬಾರಿಗೆ ಅಲ್ಲ. ಅಂತಹ ದೃಢ ನಿರ್ಧಾರದಿಂದ ಕೇಳಲು ಇರುವವರು ನೀವು ಒಬ್ಬರೇ ಮಾತ್ರ ಎಂದು ತಪ್ಪಾಗಿ ಭಾವಿಸಿದ್ದೀರಿ – ಇತರರೂ ಇದ್ದಾರೆ. ಪ್ರತಿಯೊಬ್ಬರೂ ಅದನ್ನು ಅಗತ್ಯವೆಂದು ಕರೆಯುತ್ತಾರೆ, ಆದರೆ ಅವರ “ಅಗತ್ಯ”ವನ್ನು ಅವರಿಗೆ ಮುಕ್ತವಾಗಿ ನೀಡಿದಾಗ, ಅವರು ಅದನ್ನು ಗೌರವಿಸುವುದನ್ನು ನಿಲ್ಲಿಸುತ್ತಾರೆ – ಸೂಪ್ (ಸಾರು) ಮತ್ತು ಪ್ರಣಾಮದ ಸಂದರ್ಭಗಳಲ್ಲಿ ಸಂಭವಿಸಿದಂತೆ. ಇದು ಅಗತ್ಯತೆಯಲ್ಲ, ಆದರೆ ಬಯಕೆ ಎನ್ನುವುದನ್ನು ತೋರಿಸುತ್ತದೆ. ನಮ್ಮೆಲ್ಲ ಸಾಧನೆಯ ತತ್ವವು, ಬಯಕೆಯನ್ನು ಅಪೇಕ್ಷೆಗಳ ಮೇಲೆ ಸ್ಥಿರಗೊಳಿಸುವುದಲ್ಲ, ಸಾಕ್ಷಾತ್ಕಾರದ ಮೇಲೆ ಮಾತ್ರ ಸ್ಥಿರಗೊಳಿಸುವುದಾಗಿದೆ (ಮನಸ್ಸಿಗೆ ಅವುಗಳನ್ನು ಅಗತ್ಯಗಳೆಂದು ಪ್ರಸ್ತುತಪಡಿಸಿದರೂ ಸಹ). ನಮ್ಮ ಉದ್ದೇಶವು ಅತಿಮಾನಸ ಸಾಕ್ಷಾತ್ಕಾರವಾಗಿದೆ, ಅದಕ್ಕೆ ಅಥವಾ ಅದರಡೆಗೆ (ಅತಿಮಾನಸ ಸಾಕ್ಷಾತ್ಕರ) ಸಾಗಲು ಅಗತ್ಯವಿರುವು–

ದೆಲ್ಲವನ್ನೂ ಪ್ರತಿ ಹಂತದ ಪರಿಸ್ಥಿತಿಗನುಸಾರವಾಗಿ ಮಾಡಬೇಕಾಗಿದೆ. ಪ್ರಸ್ತುತ ಸಮಯದಲ್ಲಿ, ಭೌತಿಕ ಪ್ರಜ್ಞೆಯನ್ನು ಸಿದ್ಧಪಡಿಸುವುದು ಅತ್ಯಗತ್ಯವಾಗಿದೆ; ಅದಕ್ಕಾಗಿ ಭೌತಿಕ ಮತ್ತು ನಿಮ್ಮ ಪ್ರಾಣಿಕದ ಭಾಗಗಳಲ್ಲಿ ವೈಯಕ್ತಿಕ ಬೇಡಿಕೆಯಿಂದ ಅಥವಾ ಬಯಕೆಯಿಂದ ಮುಕ್ತವಾದ ಸಂಪೂರ್ಣ ಸಮಾನತೆ, ಶಾಂತಿ ಮತ್ತು ಪೂರ್ಣ ಸಮರ್ಪಣೆಯನ್ನು ಸ್ಥಾಪಿಸಬೇಕಾಗಿದೆ. ಇತರ ಸಂಗತಿಗಳು ತಮ್ಮ ಸರಿಯಾದ ಸಮಯದಲ್ಲಿ ಬರುತ್ತವೆ. ಈಗ ನಿಜವಾದ ಅವಶ್ಯಕತೆ ಏನೆಂದರೆ, ಬೇರೆಯದೆ ಸಂಗತಿಗಳಲ್ಲಿ ಒಂದಾದ ಭೌತಿಕ ಸಾಮೀಪ್ಯಕ್ಕೆ ಆಗ್ರಹ ಮಾಡದೆ ಇರುವುದು, ಆದರೆ ಭೌತಿಕ ಪ್ರಜ್ಞೆಯಲ್ಲಿ ಅತೀಂದ್ರಿಯ ತೆರೆಯುವಿಕೆಗೆ ಮತ್ತು ಅಲ್ಲಿ ನಿರಂತರ ಉಪಸ್ಥಿತಿ ಮತ್ತು ಮಾರ್ಗದರ್ಶನಕ್ಕಾಗಿ ಆಗ್ರಹಿಸುವುದು. ಎಲ್ಲಾ ವಾಸ್ತವಿಕ ಉದ್ದೇಶಗಳಿಗಾಗಿ ನಾವು ನಿಮ್ಮನ್ನು ಬಳಸುವ ನಮ್ಮ ಬಯಕೆಯನ್ನು ನೀವು ಏನೆಂದು ಅರ್ಥಮಾಡಿಕೊಂಡಿರುವಿರಿ ಎನ್ನುವುದು ನನಗೆ ತಿಳಿದಿಲ್ಲ. ನೀವು ನಮಗಾಗಿ ಯಾವುದೇ ಕೆಲಸವನ್ನು ಮಾಡಬೇಕೆಂದು ನಾವು ಆಗ್ರಹಿಸುವುದಿಲ್ಲ; ಕೆಲಸವನ್ನು ಕೇಳಿದ್ದು ನೀವು, ಮತ್ತು ಇರುವ ಕೆಲಸವನ್ನು ನಿಮಗೆ ನಾವು ನೀಡಿದ್ದೇವೆ. ಆದರೆ ಶ್ರೀಮಾತೆಯವರನ್ನು ಭೌತಿಕವಾಗಿ ಭೇಟಿಯಾಗುವ ಅವಕಾಶವನ್ನು ಸೃಷ್ಟಿಸುವ ಉದ್ದೇಶದಿಂದ ನಾವು ಕೆಲಸವನ್ನು ಆವಿಷ್ಕರಿಸುವುದಿಲ್ಲ, ಅದನ್ನು ಯಾರಿಗಾಗೂ ಮಾಡಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/492**

**ಆಂತರಿಕ ಸಾಮಿಪ್ಯ**

ಅತ್ಯಂತ ಮುಖ್ಯವಾದದ್ದು ಆಂತರಿಕ ಸಾಮೀಪ್ಯವಾಗಿದೆ. ಮನಸ್ಸಿನ ಕಲ್ಪನೆ – ಬಾಹ್ಯ ಸಾಮಿಪ್ಯವು ಬಾಂಧವ್ಯದ ಸಂಕೇತ ಅಥವಾ ವಿಶೇಷ ಅನುಕೂಲದ ಸಂಕೇತ ಅಥವಾ ತ್ವರಿತ ಪ್ರಗತಿಯ ಸಾಧನ ಅನುಭವದಿಂದ ಉತ್ಪನ್ನವಾಗುವುದಿಲ್ಲ, ಅದು ಸಹಜವಾಗಿಯೆ ಮನಸ್ಸಿನ ಕಲ್ಪನೆಯಾಗಿದೆ. ಕೆಲವರು ಶ್ರೀಮಾತೆಯವರನ್ನು ದಿನಾಲೂ ನೋಡುತ್ತಾರೆ ಮತ್ತು ಅವರು ವರ್ಷಗಳ ಹಿಂದೆ ಇದ್ದಕ್ಕಿಂತ ಬಹಳ ಕಡಿಮೆ ಪ್ರಗತಿಯನ್ನು ಹೊಂದಿದ್ದಾರೆ – ಇನ್ನೂ ಕೆಲವರ ಸ್ಥಿತಿ ಹದಗೆಟ್ಟಿದೆ, ಏಕೆಂದರೆ ಅದು ಅವರಲ್ಲಿ ಪ್ರಾಣಿಕ ಬೇಡಿಕೆಯನ್ನು ಪೋಷಿಸಿದೆ – ಮತ್ತೊಂದೆಡೆ ಕೆಲವರು ಶ್ರೀಮಾತೆಯವರಿಗೆ ಸಾಕಷ್ಟು ಹತ್ತಿರವಿದ್ದಾರೆ ಮತ್ತು ಸಾಧನೆಯ

ಪಥದಲ್ಲಿ ಮುಂದುವರೆಯುತ್ತಿದ್ದಾರೆ – ಮತ್ತು ಒಮ್ಮೊಮ್ಮೆ (ಸಮಯಾನುಸಾರ) ಶ್ರೀಮಾತೆಯವರ ಬಳಿಗೆ ಬರುವವರನ್ನು ಅವಳು ಕಾಪಾಡುತ್ತಾಳೆ – ಮತ್ತು ವರ್ಷಕ್ಕೊಮ್ಮೆ ಮಾತ್ರ ಸಂದರ್ಶನವಿರುವ ಒಂದು ಪ್ರಕರಣವನ್ನು ನಾನು ಉದಾಹರಣೆಯಾಗಿ ನೀಡಬಲ್ಲೆ, ಆದಾಗ್ಯೂ ಹೆಚ್ಚು ಕ್ಷಿಪ್ರ ಪ್ರಗತಿಯನ್ನು ಸಾಧಿಸಿದ ಅಥವಾ ಪ್ರೀತಿಯ ಬಾಂಧವ್ಯವು ಹೆಚ್ಚಿನ ತೀವ್ರತೆಗೆ ಮತ್ತು ಅಮಿತೋತ್ಸಾಹಕ್ಕೆ ಬೆಳೆದಿದ್ದನ್ನು ಯಾರಲ್ಲೂ ಕಂಡಿಲ್ಲ. ಈ ಎಲ್ಲಾ ಸಂಗತಿಗಳಲ್ಲಿ ಶ್ರೀಮಾತೆಯವರಲ್ಲಿ ಮತ್ತು ಅವಳನ್ನು ಮಾರ್ಗದರ್ಶಿಸುವ ಬೆಳಕಿನಲ್ಲಿ ಸಂಪೂರ್ಣ ವಿಶ್ವಾಸವನ್ನು ಹೊಂದುವುದು ಉತ್ತಮವಾಗಿದೆ.

*

*ಶ್ರೀಮಾತೆಯವರನ್ನು ನೋಡಲು ಮೇಲಿಂದ ಮೇಲೆ ಕರೆಸಿಕೊಳ್ಳುವವರು ಅದೃಷ್ಟವಂತರು. ಏಕೆಂದರೆ ಆಗ ಅವರು ಅವಳೊಂದಿಗೆ ಮಾತನಾಡಲು ಮತ್ತು ಅವಳ ಉಪಸ್ಥಿತಿಯಲ್ಲಿ ಹೆಚ್ಚಿನ ಬೆಳಕನ್ನು (ಜ್ಞಾನವನ್ನು) ಪಡೆಯುವ ಅವಕಾಶವನ್ನು ಪಡೆಯುತ್ತಾರೆ. ಅಲ್ಲವೇ?*

ಇಲ್ಲ. ಅದು ಸಂಪೂರ್ಣವಾಗಿ ವ್ಯಕ್ತಿಯ ಸ್ಥಿತಿ ಮತ್ತು ಅವನ ಮನೋಭಾವದ ಮೇಲೆ ಅವಲಂಬಿಸಿರುತ್ತದೆ. ವಿಶೇಷವಾಗಿ, ಅವರು ಅವಳನ್ನು ನೋಡಬೇಕೆಂದು ಆಗ್ರಹಿಸುವುದು ಅಥವಾ ಅವರು ಹೋಗಬೇಕೆಂದು ಬಯಸಿದಾಗಲೂ ಅವಳ ಜೊತೆ ಇರಬೇಕೆಂದು ಆಗ್ರಹಿಸುವುದು ಅಥವಾ ಅವರು ಕೆಟ್ಟ ಮನಸ್ಥಿತಿಯಲ್ಲಿದ್ದಾಗ ಅವಳನ್ನು ನೋಡುವುದು ಅವರಿಗೆ ತುಂಬಾ ಹಾನಿಕಾರಕವಾಗಿದೆ. ಪ್ರತಿಯೊಬ್ಬರೂ ಶ್ರೀಮಾತೆಯವರು ಕೊಟ್ಟಿದ್ದನ್ನು ಸ್ವೀಕರಿಸಿ ತೃಪ್ತರಾಗಿರಬೇಕು, ಏಕೆಂದರೆ ಅವರು ಏನನ್ನು ಸ್ವೀಕರಿಸಬಹುದು ಅಥವಾ ಸ್ವೀಕರಿಸಬಾರದು ಎನ್ನುವುದು ಶ್ರೀಮಾತೆಯವರಿಗೆ ಮಾತ್ರ ತಿಳಿದಿದೆ. ಈ ರೀತಿಯ ಮಾನಸಿಕ ಯೋಚನೆಗಳು ಮತ್ತು ಪ್ರಾಣಿಕ ಬೇಡಿಕೆಗಳು ಯಾವಾಗಲೂ ನೈಜವಾಗಿರುವುದಿಲ್ಲ.

*

ಒಬ್ಬ ವ್ಯಕ್ತಿಯು ನಿಕಟವಾದ ಆಂತರಿಕ ಬಾಂಧವ್ಯವನ್ನು ಹೊಂದಿದ್ದರೆ, ಅವನು ಶ್ರೀಮಾತೆಯವರನ್ನು ಯಾವಾಗಲೂ ತನ್ನ ಹತ್ತಿರದಲ್ಲಿ ಮತ್ತು ತನ್ನೊಳಗೆ ಅನುಭವಿಸುತ್ತಿರುತ್ತಾನೆ ಮತ್ತು ತನ್ನದೇ ಆದ ಕಾರಣಕ್ಕಾಗಿ ನಿಕಟವಾದ ಭೌತಿಕ

ಬಾಂಧವ್ಯಕ್ಕೆ ಆಗ್ರಹಿಸುವುದಿಲ್ಲ. ಇದಾವುದೂ ಇಲ್ಲದವರು ಅದಕ್ಕಾಗಿ ಹಾತೊರೆಯಬೇಕು ಮತ್ತು ಇನ್ನೊಂದಕ್ಕಾಗಿ ಹಾತೊರೆಯಬಾರದು. ಒಂದು ವೇಳೆ ಅವರು ಬಾಹ್ಯ ಸಾಮೀಪ್ಯವನ್ನು ಪಡೆದುಕೊಂಡರೆ, ಆಂತರಿಕ ಏಕತೆ ಮತ್ತು ಆಂತರಿಕ ಸಾಮೀಪ್ಯವಿಲ್ಲದೆ ಅದಕ್ಕೆ ಏನೂ ಅರ್ಥವಿಲ್ಲ ಎನ್ನುವುದನ್ನು ಅವರು ಕಂಡುಕೊಳ್ಳುತ್ತಾರೆ. ಅವರು ಭೌತಿಕವಾಗಿ ಶ್ರೀಮಾತೆಯವರ ಹತ್ತಿವಿರಬಹುದು, ಆದಾಗ್ಯೂ ಅವರು ಶ್ರೀಮಾತೆಯವರಿಂದ ಅನತಿ (ಸಹಾರಾ ಮರುಭೂಮಿಯಷ್ಟು) ದೂರವಿರುತ್ತಾರೆ.

*

ಮುಖ್ಯವಾದ ಒಂದು ಸಂಗತಿ ಏನೆಂದರೆ, ಆಂತರಿಕ ಮನೋಭಾವವು ಬದಲಾಗದಂತೆ ನೋಡಿಕೊಳ್ಳುವುದು ಮತ್ತು ಎಲ್ಲಾ ಬಾಹ್ಯ ಸನ್ನಿವೇಶಗಳಿಂದ ಸ್ವತಂತ್ರವಾಗಿ ಶ್ರೀಮಾತೆಯವರೊಂದಿಗೆ ಆಂತರಿಕ ಸಂಪರ್ಕವನ್ನು ಸ್ಥಾಪಿಸುವುದು; ಇದು ಅಗತ್ಯವಿರುವ ಎಲ್ಲವನ್ನೂ ದಯಪಾಲಿಸುತ್ತದೆ. ಯೋಗದಲ್ಲಿ ಹೆಚ್ಚು ತೊಡಗಿಸಿಕೊಂಡವರು ಶ್ರೀಮಾತೆಯವರನ್ನು ಭೌತಿಕವಾಗಿ ಹೆಚ್ಚು ನೋಡುವವರಲ್ಲ. ಪ್ರಣಾಮ್(ವಂದನೆ) ಮತ್ತು ಸಂಜೆಯ ಧ್ಯಾನದ ಹೊರತಾಗಿ ವರ್ಷಕ್ಕೊಮ್ಮೆ ಮಾತ್ರ ಶ್ರೀಮಾತೆಯವರ ಬಳಿಗೆ ಬರುವ ಕೆಲವರು ಅವರೊಂದಿಗೆ ನಿರಂತರ ಸಾಮೀಪ್ಯದಲ್ಲಿರುತ್ತಾರೆ ಅಥವಾ ಆಧ್ಯಾತ್ಮಿಕವಾಗಿ ಒಂದಾಗಿರುತ್ತಾರೆ.

*

*ಮೆಟ್ಟಿಲ ಬಳಿ ಇದ್ದಾಗ ನನಗೆ ಶ್ರೀಮಾತೆಯವರ ಕೋಣೆಗಳನ್ನು ನೋಡುವ ತೀವ್ರ ಆಸೆಯಾಯಿತು. ಕಷ್ಟದಲ್ಲಿದ್ದಾಗ ಶ್ರೀಮಾತೆಯವರ ಬಳಿ ಹೋಗಲು ಕೇಳಿಕೊಳ್ಳಬೇಕೆಂದು ಎಕ್ಸ್ (X) ಎನ್ನುವವರು ಸಲಹೆ ನೀಡಿದರು.*

ಆದರೆ ಶ್ರೀಮಾತೆಯವರ ಸನಿಹಕೆ ಬರುವುದು ಅಂತರಂಗದಲ್ಲಿರಬೇಕು, ಭೌತಿಕವಾಗಿ ಬಾಹ್ಯದಲ್ಲಿ ಅಲ್ಲ. ಏಕೆಂದರೆ ಅಂತರಂಗದಲ್ಲಿ ನೀವು ನಿಮ್ಮಿಚ್ಛೆಯಂತೆ ಪ್ರವೇಶಿಸಬಹುದು ಮತ್ತು ಅಲ್ಲಿ ಶಾಶ್ವತವಾಗಿ ಶ್ರೀಮಾತೆಯವರ ಸಾಮಿಪ್ಯದಲ್ಲಿ ಇರುವ ವ್ಯವಸ್ಥೆ ಮಾಡಿಕೊಳ್ಳಬಹುದು.

*

## ಭೌತಿಕ ಸಾಮಿಪ್ಯ ಮತ್ತು ತೊಂದರೆ

ವಾಸ್ತವಿಕವಾಗಿ, ಅವರು ಶ್ರೀಮಾತೆಯವರ ಬಳಿಗೆ ಬರುವುದರಿಂದ ಅಥವಾ ಅವರು ಒಂದು ಗಂಟೆ ಅಥವಾ ಎರಡು ಗಂಟೆ ಅಥವಾ ಮೂರು ಗಂಟೆಗಳ ಕಾಲ ಅವರ ಜೊತೆಯಲ್ಲಿ ಕುಳಿತುಕೊಳ್ಳುವುದರಿಂದ Xನ ಅಥವಾ ಇನ್ನಾರದೋ ಕಷ್ಟಗಳು ದೂರವಾಗುವುದಿಲ್ಲ. ಸಾಕಷ್ಟು ಜನರು ಹಾಗೆ ಮಾಡಿದ್ದಾರೆ ಮತ್ತು ಅವರು ಬಂದಂತೆ ಖಿನ್ನರಾಗಿ, ಹತಾಶರಾಗಿ ಮತ್ತು ಜಿಗುಪ್ಸೆ ಹೊಂದಿ ಹೋಗಿದ್ದಾರೆ. ಶ್ರೀಮಾತೆಯವರನ್ನು ನೋಡುವ ಜನರಲ್ಲಿ ನಿಮ್ಮಂತೆಯೇ ಕಠಿಣವಾದ ಆಪತ್ತುಗಳನ್ನು ಆಗಾಗ್ಗೆ ಹೊಂದಿರುವ ಕೆಲವರಿದ್ದಾರೆ. ಶ್ರೀಮಾತೆಯವರೊಂದಿಗೆ ಹೆಚ್ಚು ಮಾತನಾಡಿದವರು (ಮನೆ, ರಿಪೇರಿ, ಸೇವಕರು ಇತ್ಯಾದಿಗಳ ಬಗ್ಗೆ) ಅವರನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ ಎಂಬುದಂತೂ ಸುಳ್ಳಲ್ಲ. ಹಿಂದಿನ ದಿನಗಳಲ್ಲಿ, ಕೆಲವರು ಶ್ರೀಮಾತೆಯವರನ್ನು ಬೇರೆ ರೀತಿಯಲ್ಲಿ ನೋಡುತ್ತಿದ್ದರು, ಅಂದರೆ ಅವರೊಂದಿಗೆ ಎಲ್ಲ ರೀತಿಯ ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು – ಆದರೆ ಅವರೂ ಸಹ ನಿಜವಾಗಿಯೂ ಅವರನ್ನು ಅರ್ಥಮಾಡಿಕೊಳ್ಳಲಿಲ್ಲ. ಎಲ್ಲ ಮಾನಸಿಕ ಊಹೆ ಮತ್ತು ಊಹಿಸಿದ ತೀರ್ಮಾನ ಸತ್ಯಗಳೊಂದಿಗೆ ಸರಿಹೊಂದುವುದಿಲ್ಲವೆಂದು ನಾನು ಮತ್ತೆ ಹೇಳುತ್ತೇನೆ. ನಾವು ಶ್ರೀಮಾತೆಯವರೊಂದಿಗೆ ಆಂತರಿಕವಾಗಿ ತೆರೆದುಕೊಂಡಾಗ ಮಾತ್ರ ಅವಳ "ಸಂಪರ್ಕ"ದಿಂದ (ಭೌತಿಕ ಸಂಪರ್ಕದಿಂದಲ್ಲ, ಆಧ್ಯಾತ್ಮಿಕ ಅಥವಾ ಆಂತರಿಕ ಸಂಪರ್ಕದಿಂದ) ಲಾಭವಾಗುತ್ತದೆ, ನಂತರ ಶ್ರೀಮಾತೆಯವರನ್ನು ಕೇವಲ ನೆನೆಯುದರಿಂದ ಅಥವಾ ಅವಳಿಂದ ಬರುವ ಆಲೋಚನೆಯು ಮಾತ್ರ ಯಾವುದೇ ತಪ್ಪನ್ನು ಸರಿಪಡಿಸಬಹುದು; ನಂತರ ಭೌತಿಕ ಸಂಪರ್ಕವೂ ಕೂಡ ಸಹಾಯ ಮಾಡಬಹುದು, ಆದರೆ ಅದು ಅನಿವಾರ್ಯವಲ್ಲ. ಆಧ್ಯಾತ್ಮಿಕ ಪ್ರಜ್ಞೆಗೆ ಪ್ರವೇಶಿಸುವ ಮೂಲಕ ಮಾತ್ರ ಶ್ರೀಮಾತೆಯವರನ್ನು ಅರ್ಥಮಾಡಿಕೊಳ್ಳಬಹುದು, ಅಥವಾ ಮನಸ್ಸಿನಲ್ಲಿ ಅರ್ಥಮಾಡಿಕೊಳ್ಳದಿದ್ದರೂ, ಕನಿಷ್ಠ ಪಕ್ಷ ಅವರೊಂದಿಗೆ ಏಕತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಅವರು ಏನಾಗಿದ್ದಾರೆ ಎನ್ನುವುದನ್ನು ಅನನುಭವಿಸಬಹುದು ಮತ್ತು ಪ್ರತಿಕ್ರಿಯೆ ತೋರಬಹುದು.

*

ತೊಂದರೆಯನ್ನು ತೊಡೆದುಹಾಕಲು ಭೌತಿಕವಾಗಿ ಶ್ರೀಮಾತೆಯವರ ಬಳಿಗೆ ಬರುವುದು ಅನಗತ್ಯ ಮತ್ತು ನಿಷ್ಪ್ರಯೋಜಕವಾಗಿದೆ; ಈ ಸಂದರ್ಭದಲ್ಲಿ ನೀವು ನೋಡಿದಂತೆ ನೀವು ಅವಳಲ್ಲಿ ಆಂತರಿಕ ಆಶ್ರಯವನ್ನು ಪಡೆದುಕೊಳ್ಳಬೇಕು ಮತ್ತು ತಪ್ಪು ಕ್ರಿಯೆಯಿಂದ ದೂರವಿರಬೇಕು. ಭೌತಿಕವಾಗಿ ಬರುವುದು ತಪ್ಪು ಮಾಡುವ ಅಭ್ಯಾಸವನ್ನು ಮಾತ್ರ ಸೃಷ್ಟಿಸುತ್ತದೆ ಮತ್ತು ಸರಿ ಹೊಂದಲು ಅವಳ ಬಳಿಗೆ ಬರುವುದು ಕಷ್ಟವನ್ನು ಆಂತರಿಕವಾಗಿ ಬಿಟ್ಟುಕೊಡುವ ಬದಲು ಅದನ್ನು ಅವಳ ಮೇಲೆ ಹಾಕುವ, ಅದರ ಶರಣಾಗತಿಯನ್ನು ಮಾಡುವ ತಪ್ಪು ಕ್ರಿಯೆಗೆ ಕಾರಣವಾಗುತ್ತದೆ. ಕ್ಷುಲ್ಲಕ ವಿಷಯಗಳು, ಅಹಂಭಾವಗಳು, ತನ್ನ ದೃಷ್ಟಿಕೋನದ ಮೇಲಿನ ಆಗ್ರಹಗಳು, ಕೋಪದ ಮೇಲಿನ ಈ ಅನುಪಯುಕ್ತ ತೊಂದರೆಗಳನ್ನು ತಡೆಯಲು ಸಾಮಾನ್ಯ ಶರಣಾಗತಿಯ ಅಗತ್ಯವಿದೆ, ಏಕೆಂದರೆ ಒಬ್ಬ ವ್ಯಕ್ತಿಗೆ ತನ್ನದೇ ಆದ ಮಾರ್ಗ ಅಥವಾ ಅವರ ಸ್ವಾತಂತ್ರ್ಯ ಅಥವಾ ಪ್ರಾಮುಖ್ಯತೆಯ ಸರಿಯಾದ ಮಾನ್ಯತೆ ಇರುವುದಿಲ್ಲ. ಆಶ್ರಮದ ಕೆಲಸದಲ್ಲಿ ಅರ್ಧಕ್ಕಿಂತ ಹೆಚ್ಚು ತೊಂದರೆಯ ಕೆಳ ಭಾಗದಲ್ಲಿ ತಾರ್ಕಿಕತೆ ಮತ್ತು ಸ್ವಯಂ–ಸಮರ್ಥನೆಯಿಂದ ಮರೆಮಾಚಲ್ಪಟ್ಟ ಈ ಭಾವನೆಗಳಿವೆ.

*

ವಾಸ್ತವವಾಗಿ, ಶ್ರೀಮಾತೆಯವರನ್ನು ಭೌತಿಕವಾಗಿ ಭೇಟಿಯಾದವರು, ಪ್ರಣಾಮ್ ಮತ್ತು ಧ್ಯಾನದ ಸಂದರ್ಭಗಳನ್ನು ಹೊರತುಪಡಿಸಿ ಅವಳನ್ನು ಭೇಟಿಯಾಗದವರಿಗಿಂತ ಪರಿಪೂರ್ಣತೆಯ ಗುರಿಗೆ ಹತ್ತಿರವಾಗಿದ್ದಾರೆ ಎಂದು ಭಾವಿಸುವುದು ತಪ್ಪು. ಎಲ್ಲವೂ ಅಂತಃ ಪುರುಷನ್ನು ಅವಲಂಬಿದೆ ಮತ್ತು ಅದು ಆಂತರಿಕವಾಗಿ ಅವಳನ್ನು ಹೇಗೆ ಭೇಟಿಯಾಗಬಹುದು ಮತ್ತು ಅವಳ ಬಲವನ್ನು ಸ್ವೀಕರಿಸಿ ಅದರ ಲಾಭವನ್ನು ಪಡೆಯುದರ ಮೇಲೆ ಅವಲಂಬಿಸಿದೆ. ಸಹಜವಾಗಿ, ಜನರು ಅವಳನ್ನು ತಮ್ಮ ಬಾಹ್ಯ ಪ್ರಜ್ಞೆಯೊಂದಿಗೆ ಮಾತ್ರವಲ್ಲದೆ ಚೈತ್ಯ ಪ್ರಜ್ಞೆಯೊಂದಿಗೆ ಭೇಟಿಯಾದರೆ, ಅದು ವಿಭಿನ್ನ ಸಂಗತಿಯಾಗಿರಲೇಬೇಕು....

*

**ಸಾಮಿಪ್ಯದ ಒತ್ತಡ**

ಇಲ್ಲೊಂದು ಗೊಂದಲವಿದೆ. ಶ್ರೀಮಾತೆಯವರ ಅನುಗ್ರಹವು ಒಂದು ವಿಷಯವಾದರೆ, ಬದಲಾಯಿಸುವ ಕರೆ ಇನ್ನೊಂದು, ಶ್ರೀಮಾತೆಯವರ

ಸಾಮೀಪ್ಯದ ಒತ್ತಡವು ಇನ್ನೊಂದು. ಭೌತಿಕವಾಗಿ ಅವಳ ಹತ್ತಿರ ಇರುವವರು ಯಾವುದೇ ವಿಶೇಷ ಅನುಗ್ರಹದಿಂದ ಅಥವಾ ಸಹಾಯದಿಂದಲ್ಲ, ಆದರೆ ಅವರ ಕೆಲಸದ ಅವಶ್ಯಕತೆಯಿಂದ, – ಇದು ಇಲ್ಲಿ ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಲು ಅಥವಾ ನಂಬಲು ನಿರಾಕರಿಸುವ ಸಂಗತಿ, ಆದರೆ ಇದು ವಾಸ್ತವ ಸಂಗತಿ: ಅವರ ಪ್ರಜ್ಞೆಯನ್ನು ಶ್ರೀಮಾತೆಯವರ ಪ್ರಜ್ಞೆಗೆ ಹೊಂದಿಸಿಕೊಳ್ಳಲು (ಅಂದರೆ ಬದಲಾವಣೆ ಮಾಡಿಕೊಳ್ಳಲು) ಆ ಸಾಮೀಪ್ಯವು ತಾನಾಗಿಯೇ ಒತ್ತಡವಾಗಿ ಕಾರ್ಯ–ನಿರ್ವಹಿಸುತ್ತದೆ, ಬೇರೇನೂ ಅಲ್ಲ, ಆದರೆ ಇದು ಅವರಿಗೆ ಕಷ್ಟವಾಗುತ್ತದೆ, ಏಕೆಂದರೆ ಆ ಎರಡೂ ಪ್ರಜ್ಞೆಗಳ ನಡುವಿನ ವ್ಯತ್ಯಾಸವು (ವಿಶೇಷವಾಗಿ ಭೌತಿಕ ಸ್ತರದಲ್ಲಿ) ಅಗಾಧವಾಗಿದೆ ಮತ್ತು ಕೆಲಸವಿದ್ದಾಗ ಅವರು ಅವಳನ್ನು ಭೌತಿಕ ಮಟ್ಟದಲ್ಲಿ ಭೇಟಿಯಾಗುತ್ತಿದ್ದಾರೆ.

*

*ನನಗೆ ಶ್ರೀಮಾತೆಯವರನ್ನು ನೋಡಬೇಕೆಂದು ತುಂಬಾ ಆಸೆ. ಆದರೆ ಅವಳು ಹಾಗೆ ಮಾಡಲು ನನಗೆ ಏಕೆ ಬಿಡುತ್ತಿಲ್ಲ? ದಯವಿಟ್ಟು ಹೇಳಿ, ನನ್ನ ಆಸೆಗೆ ಬೆಲೆ ಇಲ್ಲವೆ?*

ಪ್ರಸ್ತುತ ಹಂತದಲ್ಲಿ ಭೌತಿಕವಾಗಿ ಶ್ರೀಮಾತೆಯವರ ಬಳಿಗೆ ಬರುವುದಕ್ಕಿಂತ ಹೆಚ್ಚಾಗಿ ನಮ್ಮನ್ನು ನಾವು ಶ್ರೀಮಾತೆಯವರಿಗೆ ಅರ್ಪಿಸಿಕೊಳ್ಳುವುದರಲ್ಲಿ ಹೆಚ್ಚು ಲಾಭವಿದೆ. ಶ್ರೀಮಾತೆಯವರೇ ನಮ್ಮನ್ನು ಕರೆಯುತ್ತಾರೆ ಎಂದು ಹೇಳುವ ಕೆಲವರು ಪ್ರಗತಿ ಹೊಂದುವ ಬದಲು ಹಿನ್ನಡೆಯನ್ನು ಅನುಭವಿಸುತ್ತಾರೆ – ಏಕೆಂದರೆ ಅವರು ಅದನ್ನು ಒಂದು ವಿಷಯವನ್ನಾಗಿ ಮಾಡಿಕೊಳ್ಳುತ್ತಾರೆ, ಹಾಗಾಗಿ ಅವರು ಶ್ರೀಮಾತೆಯವರೊಂದಿಗಿನ ಸಂಬಂಧಗಳಿಗೆ ಅಲುಗಾಡುವ ಅಡಿಪಾಯವನ್ನು ಹಾಕುವಂಥ ಪ್ರಾಣಿಕ ಬೇಡಿಕೆಯ ಮೂಲವನ್ನು ಪರಿಚಯಿಸುತ್ತ ಹೋಗುತ್ತಾರೆ.

*

**ಭಗವಂತನಿಗೆ ಆಯ್ಕೆಗಳಿಲ್ಲ**

ಭಗವಂತನಿಗೆ ಯಾವುದೇ ಆಯ್ಕೆಗಳು (ಆದ್ಯತೆ) ಅಥವಾ ಇಷ್ಟಪಡದಿರುವಿಕೆಗಳು ಇಲ್ಲ ಮತ್ತು ಎಲ್ಲರಿಗೂ ಒಂದೇ ತೆರನಾಗಿದ್ದಾನೆ ಎಂಬುದು ನಿಸ್ಸಂಶಯವಾಗಿ ಸತ್ಯವಾದ ಸಂಗತಿ, ಆದರೆ ಪ್ರತಿಯೊಬ್ಬರೊಂದಿಗೂ

ಇರುವಂಥ ವಿಶೇಷ ಸಂಬಂಧವನ್ನು ಅದು ತಡೆಯುವುದಿಲ್ಲ. ಆದಾಗ್ಯೂ, ಈ ಸಂಬಂಧವು ಹೆಚ್ಚು ಅಥವಾ ಕಡಿಮೆ ಗುರುತಿಸುವಿಕೆಯ ಮೇಲೆ ಅಥವಾ ಮಿಲನದ ಮೇಲೆ ಅವಲಂಬಿಸಿರುವುದಿಲ್ಲ. ಶುದ್ಧಾತ್ಮವು ದೈವಿಕತೆಗೆ ಒಂದು ಸುಲಭವಾದ ಪ್ರವೇಶವಾಗಿದೆ. ಹೆಚ್ಚು ಪ್ರಗತಿ ಹೊಂದಿದ ಸ್ವಭಾವವು ಅವನನ್ನು ಭೇಟಿಯಾಗಲು ಹೆಚ್ಚಿನ ಅವಕಾಶಗಳನ್ನು ಹೊಂದಿದೆ. ಗುರುತಿಸುವಿಕೆಯು ಆಧ್ಯಾತ್ಮಿಕ ಏಕತೆಯನ್ನು ಸೃಷ್ಟಿಸುತ್ತದೆ. ಆದರೆ ಇತರೇ ಕಾರಣಗಳಿಂದ ಸೃಷ್ಟಿಯಾದ ಇತರೇ ವೈಯಕ್ತಿಕ ಸಂಬಂಧಗಳಿವೆ. ಎಲ್ಲಾ ಸಂಬಂಧಗಳನ್ನು ಒಂದು ಕಾರಣದಿಂದ ನಿರ್ಧರಿಸುವುದು ತುಂಬಾ ಸಂಕೀರ್ಣವಾದ ಕಾರ್ಯವಾಗಿದೆ.

ಹೌದು, ಯೋಗಿಗಳು ಶ್ರೀಮಾತೆಯವರೊಂದಿಗೆ ಯಾವುದೇ ವೈಯಕ್ತಿಕ ಸಂಬಂಧವನ್ನು ಹೊಂದಿರಬೇಕಾಗಿಲ್ಲ. ಏಕೆಂದರೆ ಅವರ ಪ್ರಗತಿಯು ಶ್ರೀಮಾತೆಯವರ ವೈಯಕ್ತಿಕ ಹಸ್ತಕ್ಷೇಪದ ಮೇಲೆ ಅವಲಂಬಿತವಾಗಿಲ್ಲ – ಅಂತರಂಗದಲ್ಲಿರುವ ಆಧ್ಯಾತ್ಮಿಕ ಸಂಪರ್ಕದ ಮೇಲೆ ಮಾತ್ರ ಅವಲಂಬಿತವಾಗಿದೆ. ಕೆಲವರು ವಿಶೇಷ ಬಾಂಧವ್ಯವನ್ನು ಹೊಂದಿರಬಹುದು, ಆದರೆ ಅದು ಅವರ ಸಾಧನೆಯ ವಿಶೇಷ ಅಂಶಗಳಿಂದಾಗಿರುತ್ತದೆ. ಮತ್ತೊಂದೆಡೆ, ಸಾಧನೆದಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದಿದ್ದರೂ ಸಹ ಕೆಲವರು ಶ್ರೀಮಾತೆಯವರೊಂದಿಗೆ ವೈಯಕ್ತಿಕ ಸಂಬಂಧವನ್ನು ಹೊಂದಿರಬಹುದು. ಈ ವಿಷಯದಲ್ಲಿ ಎಲ್ಲಾ ರೀತಿಯ ಸಾಧ್ಯತೆಗಳಿವೆ. ಬಾಂಧವ್ಯನ್ನು ಅಂಗೀಕರಿಸಲು, ಸಾಕಷ್ಟು ಪ್ರಗತಿ ಹೊಂದಿದ ಅತೀಂದ್ರಿಯದೊಂದಿಗೆ ಇಲ್ಲಿಗೆ ಬಂದಿರುವ ಎಲ್ಲರೊಂದಿಗೆ ಅಂತಹ ಒಂದು ಬಾಂಧವ್ಯವಿದೆ. ಇತರೇ ಸಂದರ್ಭಗಳಲ್ಲಿ ಇದು ಸಾಕ್ಷಾತ್ಕರಿಕೊಂಡ ವಿಷಯಕ್ಕಿಂತ ಹೆಚ್ಚಿನ ಒಂದು ಸಾಧ್ಯತೆಯಾಗಿದೆ.

ಸ್ಥೂಲವಾಗಿ ಹೇಳುವುದಾದರೆ, ಅಭಿವ್ಯಕ್ತಿಯಲ್ಲಿ ಅಸ್ತಿತ್ವದ ಮೂರು ಭಾಗಗಳು ಇಲ್ಲಿ ಕಾರ್ಯರೂಪಕ್ಕೆ ಬರುತ್ತವೆ –

1. ಹಿಂದಿನ ಜನ್ಮದ ಹಳೇಯ ಅನುಭವಗಳನ್ನು ಮತ್ತು ಕೆಲ ಹಳೆಯ ವ್ಯಕ್ತಿತ್ವಗಳನ್ನು ತನ್ನೊಡನೆ ತರುವಂಥ ವಿಕಸನದಲ್ಲಿರುವ ಚೈತ್ಯ ಪುರುಷನು ವರ್ತಮಾನ ಜೀವನಕ್ಕೆ ಸಾಕಷ್ಟು ಸಹಾಯಕವಾಗಬಲ್ಲನು;

2. ಸದ್ಯದ ರಚನೆಯು ಈಗಿನ ಜೀವನದ ಕಾರಣದಿಂದ ಮತ್ತು ಅನೇಕ ಸಂಕೀರ್ಣ ಅಂಶಗಳಿಂದ ಮಾಡಲ್ಪಟ್ಟಿದೆ; ಭವಿಷ್ಯದ ಜೀವಿ/ಪುರುಷ, ಅಂದರೆ

ನಮ್ಮ ಸಂದರ್ಭದಲ್ಲಿ ಪ್ರಸ್ತುತ ಅಭಿವ್ಯಕ್ತಿಯ ಮೇಲಿರುವ ಉನ್ನತ ಪ್ರಜ್ಞೆಯ ಮೇರೆಗಳನ್ನು ಸೇರುವ ಮೂಲಕ ರೂಪಾಂತರಣವು ಹೆಚ್ಚು ಸಾಧ್ಯವಾಗುಂತೆ ಮಾಡುತ್ತದೆ ಮತ್ತು ಹಿಡಿದ ಕಾರ್ಯವನ್ನು ಸಾಧಿಸಬಹುದು.

ಹಿಂದಿನ ಜನ್ಮಗಳ ಅಥವಾ ವ್ಯಕ್ತಿತ್ವಗಳ ಮೂಲಕ ಸಂಪರ್ಕವನ್ನು ತರುವವನು ಚೈತ್ಯ ಪುರುಷನು, ಅಂದರೆ ಅದು ತನ್ನಲ್ಲಿ ಇಟ್ಟುಕೊಂಡಿರುವ ಅಗತ್ಯವಾದ ಮತ್ತು ಇನ್ನೂ ಕಾರ್ಯನಿರ್ವಹಿಸುತ್ತಿರುವ ಯಾವುದಾದರ ಮೂಲಕ ಸಂಪರ್ಕವು ಸಾಧಿಸುತ್ತದೆ.

3. ಇದರ ಜೊತೆಗೆ, ಮೇಲಿರುವ ಉನ್ನತ ಪ್ರಜ್ಞೆಯ ಮೇರೆಗಳೊಂದಿಗೆ ಸೇರಲು ಸಿದ್ಧರಾಗಿರುವ (ಉನ್ನತ ಸ್ಥರಗಳ ಜೀವಿಗಳಿಂದ ಪ್ರತಿನಿಧಿಸಲ್ಪಟ್ಟ) ಕೆಲವು ಚೈತ್ಯ ಪುರುಷರು ಇಲ್ಲಿಗೆ ಬಂದಿದ್ದಾರೆ, ಆದ್ದರಿಂದ ಮಾಡಬೇಕಾದ ಮಹಾನ್ ಕಾರ್ಯದಲ್ಲಿ ಶ್ರೀಮಾತೆಯವರೊಂದಿಗೆ ನಿಕಟವಾಗಿ ಸೇರಲು ವಿಶೇಷವಾಗಿ ಯೋಗ್ಯರಾಗಿದ್ದಾರೆ. ಹಿಂದಿನ ಜನ್ಮಕ್ಕೆ ಸೇರಿದ ಇವರೆಲ್ಲರೂ ಶ್ರೀಮಾತೆಯವರೊಂದಿಗೆ ವಿಶೇಷ ಬಾಂಧವ್ಯವನ್ನು ಹೊಂದಿದ್ದಾರೆ.

ಪ್ರಸ್ತುತ ರಚನೆಗೆ ಸಂಬಂಧಿಸಿದಂತೆ, ಇದು ನಿಸ್ಸಂಶಯವಾಗಿ ಶ್ರೀಮಾತೆಯವರೊಡನೆ ಬೆರೆಯದ ಅಥವಾ ಅವರನ್ನು ಭೇಟಿಯಾಗದ ಅಂಶಗಳಿವೆ, ಅವರುಗಳು ಶ್ರೀಮಾತೆಯವರಿಗೆ ಅಪರಿಚಿತರಾಗಿ ಕಾಣಬಹುದು. ಇದು, ಹಲವಾರು ಮಾರ್ಗದಲ್ಲಿ ನಿಂತು ಅನುಭವಿಸುವ ಅಂಶವಾಗಿದೆ; ಆದರೆ ಇದು ಬಾಹ್ಯ ರಚನೆಯಾಗಿದೆ ಮತ್ತು ಅದರ ಪ್ರಸ್ತುತ ರೂಪದಲ್ಲಿ ಯಾವುದೇ ಪ್ರಮಾಣದಲ್ಲಿ ಭೂತಕಾಲ ಅಥವಾ ಭವಿಷ್ಯದ ವಿಕಾಸಕ್ಕೆ ಸೇರಿಲ್ಲ. ಅದು ಕಣ್ಮರೆಯಾಗಬೇಕು ಅಥವಾ ಬದಲಾಗಬೇಕು.

*

## ವಿಶ್ವಾತ್ಮಕ ದೈವೀ ಪ್ರೀತಿ

ಎಲ್ಲರಿಗೂ ಸಮಾನವಾಗಿರುವ ವಿಶ್ವಾತ್ಮಕ ದೈವೀ ಪ್ರೀತಿಯೊಂದಿದೆ. ವ್ಯಕ್ತಿಗತವಾದಂಥ ಚೈತ್ಯ ಸಂಬಂಧವೂ ಸಹ ಒಂದಿದೆ; ಈ ಅಗತ್ಯತೆಯು ಎಲ್ಲರಿಗೂ ಒಂದೇಯಾಗಿದೆ, ಅದು ಎಲ್ಲರಿಗೂ ಒಂದೇ ಅಲ್ಲದ ಆದರೆ ಪ್ರತಿಯೊಂದು ಸಂದರ್ಭದಲ್ಲೂ ವಿಭಿನ್ನವಾಗಿರುವ ಒಂದು ವಿಶೇಷ

ಬಾಂಧವ್ಯವನ್ನು ಒಪ್ಪಿಕೊಳ್ಳುತ್ತದೆ. ಈ ವಿಶೇಷ ಬಾಂಧವ್ಯವು ಪ್ರತಿಯೊಂದು ಸಂದರ್ಭದಲ್ಲೂ ಪ್ರತ್ಯೇಕವಾಗಿ ನಿಲ್ಲುತ್ತದೆ ಮತ್ತು ತನ್ನದೇ ಆದ ಸ್ವಭಾವವನ್ನು ಹೊಂದಿದೆ, ಅದನ್ನು ವಿಶಿಷ್ಟವೆಂದು ಹೇಳುತ್ತಾರೆ, ಅದು ಅಸಾಧಾರಣವಾದದ್ದು ಮತ್ತು ಹೋಲಿಸಲಾಗದು, ಬೇರೆ ಬಾಂಧವ್ಯಗಳಿಂದ ಸರಿದೂಗಿಸಲಾಗದು ಅಥವಾ ಅಳೆಯಲಾಗದು, ಆದ್ದರಿಂದ ಅದು ವಿಶಿಷ್ಟ. ಆದ್ದರಿಂದ ಕಡಿಮೆ ಅಥವಾ ಹೆಚ್ಚು ಎಂಬ ಪ್ರಶ್ನೆ ಇಲ್ಲಿ ಸಂಪೂರ್ಣವಾಗಿ ಅಪ್ರಸ್ತುತವಾಗುತ್ತದೆ.

ಭೌತಿಕವಾಗಿ ತನ್ನ ಹತ್ತಿರವಿರುವವರನ್ನು ಶ್ರೀಮಾತೆಯವರು ಹೆಚ್ಚು ಪ್ರೀತಿಸುತ್ತಾರೆ ಎಂದು ಹೇಳುವುದು ತುಂಬಾ ತಪ್ಪು. ನಾನು ಇದನ್ನು ಬಹಳ ಸಲ ಹೇಳಿದ್ದೇನೆ, ಆದರೆ ಜನರು ಅದನ್ನು ನಂಬಲಿಚ್ಛಿಸುತ್ತಿಲ್ಲ, ಏಕೆಂದರೆ ಶ್ರೀಮಾತೆಯವರು ಸಾಮಾನ್ಯ ಜನರಂತೆ ಪ್ರಾಣಿಕ ಭಾವನೆಗಳ ದಾಸರೆಂದು ಮತ್ತು ಪ್ರಾಣಿಕ ಹಿತ ಮತ್ತು ಅಹಿತಗಳಿಂದ ನಿಯಂತ್ರಿಸಲ್ಪಡುತ್ತಾರೆ ಎಂದು ಅವರು ಕಲ್ಪಿಸಿಕೊಳ್ಳುತ್ತಾರೆ. "ಶ್ರೀಮಾತೆಯವರು ಇಷ್ಟಪಡುವವರನ್ನು ತನ್ನ ಹತ್ತಿರದಲ್ಲಿ ಇಟ್ಟುಕೊಳ್ಳುತ್ತಾಳೆ, ಕಡಿಮೆ ಇಷ್ಟಪಡುವವರನ್ನು ಕಡಿಮೆ ಹತ್ತಿರದಲ್ಲಿ ಇಟ್ಟುಕೊಳ್ಳುತ್ತಾಳೆ, ಮತ್ತು ಇಷ್ಟಪಡದವರನ್ನು ಅಥವಾ ನಿರ್ಲಕ್ಷಿಸುವವರನ್ನು ದೂರದಲ್ಲಿರಿಸುತ್ತಾಳೆ", ಇದು ಅವರ ಬಾಲಿಶ ತರ್ಕ. ಶ್ರೀಮಾತೆಯವರ ಉಪಸ್ಥಿತಿಯನ್ನು ಮತ್ತು ಪ್ರೀತಿಯನ್ನು ಯಾವಾಗಲೂ ತಮ್ಮಲ್ಲಿ ಅನುಭವಿಸುವ ಅನೇಕರು ಆರು ತಿಂಗಳಿಗೊಮ್ಮೆ ಅಥವಾ ವರ್ಷಕ್ಕೊಮ್ಮೆ ಅವರನ್ನು ನೋಡುವುದು ತುಂಬಾ ವಿರಳ – ಪ್ರಣಾಮ್ ಮತ್ತು ಧ್ಯಾನದ ಸಂದರ್ಭಗಳನ್ನು ಹೊರತುಪಡಿಸಿ. ಮತ್ತೊಂದೆಡೆ, ಭೌತಿಕವಾಗಿ ಅವಳ ಹತ್ತಿರ ಇರುವವರು ಅಥವಾ ಅವಳನ್ನು ಮೇಲಿಂದ ಮೇಲೆ ಕಾಣುವವರು ಅಂತಹ ಭಾವನೆಯನ್ನು ಹೊಂದಿಲ್ಲದಿರಬಹುದು; ಶ್ರೀಮಾತೆಯವರ ಒಟ್ಟಾರೆ ಸಹಾಯ ಮತ್ತು ಪ್ರೀತಿಯ ಅನುಪಸ್ಥಿತಿಯ ಬಗ್ಗೆ ಅಥವಾ ಅವಳು ಇತರರಿಗೆ ಏನನ್ನು ನೀಡುತ್ತಾಳೊ, ಅದಕ್ಕೆ ಹೋಲಿಸಿದರೆ ಅವನು ಗೊಣಗಬಹುದು. ಮೇಲೆ ನೀಡಲಾದ ಮೂರು ಬಾಲಿಶವಾದ ಸರಳ ನಿಯಮಗಳು ನಿಜವಾಗಿದ್ದರೆ, ಅಂತಹ ವ್ಯತಿರಿಕ್ತಗಳು ಸಾಧ್ಯವಾಗುವುದಿಲ್ಲ.

ನಾವು ಶ್ರೀಮಾತೆಯವರ ಪ್ರೀತಿಯನ್ನು ಅನುಭವಿಸುತ್ತೇವೆಯೋ ಅಥವಾ ಇಲ್ಲವೋ ಎಂಬುದು ನಾವು ಅದಕ್ಕೆ ಮುಕ್ತವಾಗಿದ್ದೇವೋ ಅಥವಾ ಇಲ್ಲವೋ

ಎಂಬುದರ ಮೇಲೆ ಅವಲಂಬಿತವಾಗಿದೆ, ಅದು ಭೌತಿಕ ಸಾಮೀಪ್ಯವನ್ನು ಅವಲಂಬಿಸಿಲ್ಲ. ನಮ್ಮನ್ನು ಆಂತರಿಕ ಬಾಂಧವ್ಯದ ಪ್ರಜ್ಞೆಯನ್ನು ಕಳೆದುಕೊಳ್ಳುವಂತೆ ಮಾಡುವ ಎಲ್ಲವನ್ನೂ ತೆಗೆದುಹಾಕುವ ಕ್ರಮಕ್ಕೆ ಮುಕ್ತತೆ ಎಂದು ಕರೆಯುತ್ತಾರೆ – ಜೀವನು ಆಂತರಿಕವಾಗಿ ಅನುಭವಿಸುವ ಬದಲು ಬಾಹ್ಯ ಅಭಿವ್ಯಕ್ತಿಯಿಂದ ಮಾತ್ರ ಅದನ್ನು ಅಳೆಯಬೇಕೆಂಬ ಕಲ್ಪನೆಗಿಂತ ನಮ್ಮನ್ನು ಹೆಚ್ಚು ಅರಿವಿಲ್ಲದಂತೆ ಮಾಡಲಾರದು; ಅದು ನಮ್ಮನ್ನು ಕುರುಡರನ್ನಾಗಿ ಅಥವಾ ಅಲ್ಲಿರುವ ಬಾಹ್ಯ ಅಭಿವ್ಯಕ್ತಿಗಳಿಗೆ ಸಂವೇದನಾರಹಿತರನ್ನಾಗಿ ಮಾಡುತ್ತದೆ. ನಾವು ಭೌತಿಕವಾಗಿ ದೂರವಿರಲಿ ಅಥವಾ ಹತ್ತಿರದಲ್ಲಿರಲಿ, ಅದು ಯಾವುದೇ ವ್ಯತ್ಯಾಸ ಮಾಡುವುದಿಲ್ಲ; ಭೌತಿಕವಾಗಿ ದೂರವಿದ್ದು ಅಥವಾ ಅವಳನ್ನು (ಶ್ರೀಮಾತೆಯವರನ್ನು) ಸ್ವಲ್ಪವೇ ನೋಡುವುದರಿಂದ, ನಾವು ಅದನ್ನು ಅನುಭವಿಸಬಹುದು; ನಾವು ಭೌತಿಕವಾಗಿ ಹತ್ತಿರದಲ್ಲಿದ್ದರೂ ಅಥವಾ ಆಗಾಗ್ಗೆ ಅವರ ಭೌತಿಕ ಉಪಸ್ಥಿತಿಯಲ್ಲಿದ್ದರೂ ಸಹ, ಅದನ್ನು (ಅವರ ಬಾಂಧವ್ಯವನ್ನು) ಅನುಭವಿಸಲು ವಿಫಲವಾಗಬಹುದು.

*

**ಮೂರ್ತರೂಪದ ಉದ್ದೇಶ**

*ನೀವು ಒಮ್ಮೆ ಬರೆದಿದ್ದೀರಿ: "ಶ್ರೀಮಾತೆಯವರಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡವರು, ಅವರ ಅಂತರಂಗದಲ್ಲಿ ಅವಳಿಗೆ ಹತ್ತಿರವಿರುವವರು, ಅವಳ ಇಚ್ಛೆಯೊಂದಿಗೆ ಒಂದಾಗಿರುವವರು ಅವಳ ಮಕ್ಕಳು, ಅವಳಿಗೆ ಅತ್ಯಂತ ಹತ್ತಿರವಿರುವವರು – ದೈಹಿಕವಾಗಿ ಅವಳ ಹತ್ತಿರ ಬರುವವರಲ್ಲ." ಇದರ ಸತ್ಯವನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಶ್ರೀಮಾತೆಯವರು ಏಕೆ ದೇಹರೂಪದಲ್ಲಿರುವರು ಮತ್ತು ನಾವು ಏಕೆ ಪಾಂಡಿಚೇರಿಯಲ್ಲಿದ್ದೇವೆ? ನಾವು ಎಲ್ಲೇ ಇದ್ದರೂ ಆಂತರಿಕ ಬಾಂಧವ್ಯವನ್ನು ಹೊಂದಬಹುದು; ಇಲ್ಲಿಗೆ ಬರುವ ಅಗತ್ಯವಿಲ್ಲ.*

ಭೌತಿಕ ಲಕ್ಷಣದ ಕಾರ್ಯವನ್ನು (ಭೌತಿಕ ಜಗತ್ತಿನಲ್ಲಿ ಬದಲಾವಣೆ ಸೇರಿದಂತೆ) ಮಾಡಬೇಕಾಗಿದ್ದರಿಂದ ಶ್ರೀಮಾತೆಯವರು ದೇಹವನ್ನು ಧರಿಸಿದ್ದಾರೆ. ಅವಳು ಜನರೊಂದಿಗೆ "ಭೌತಿಕ ಬಾಂಧವ್ಯವನ್ನು" ಸ್ಥಾಪಿಸಲು ಬಂದಿಲ್ಲ. ಕೆಲವರು ಕಾರ್ಯದಲ್ಲಿ ಪಾಲ್ಗೊಳ್ಳಲು ಅವಳೊಂದಿಗೆ ಬಂದಿದ್ದಾರೆ, ಇತರರನ್ನು

ಅವಳು ಕರೆದಿದ್ದಾಳೆ, ಇತರರು ಬೆಳಕನ್ನು ಅರಸಿ ಬಂದಿದ್ದಾರೆ. ಪ್ರತಿಯೊಬ್ಬರೊಂದಿಗೂ ಶ್ರೀಮಾತೆಯವರು ವೈಯಕ್ತಿಕ ಬಾಂಧವ್ಯವಿದೆ ಅಥವಾ ವೈಯಕ್ತಿಕ ಬಾಂಧವ್ಯದ ಸಾಧ್ಯತೆಯಿದೆ; ಆದರೆ ಪ್ರತಿಯೊಂದು ಬಾಂಧವ್ಯವು ಅಪರೂಪದ್ದಾಗಿದೆ ಮತ್ತು ಅವಳು ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ಒಂದೇ ರೀತಿಯ ಬಾಂಧವ್ಯವನ್ನು ಹೊಂದಬೇಕೆಂದು ಯಾರೂ ಹೇಳಲಾರರು. ಅವಳು ಭೌತಿಕವಾಗಿ ಇತರರಿಗೆ ಹತ್ತಿರವಾಗಿರುವುದರಿಂದ ಅವಳು ಅವನಿಗೆ ಭೌತಿಕವಾಗಿ ಹತ್ತಿರ ಇರಲೇಬೇಕೆಂದು ಯಾರೂ ಹಕ್ಕಿನಿಂದ ಹೇಳಲು ಸಾಧ್ಯವಿಲ್ಲ. ಕೆಲವರು ಅವಳೊಂದಿಗೆ ನಿಕಟ ವೈಯಕ್ತಿಕ ಬಾಂಧವ್ಯವನ್ನು ಹೊಂದಿದ್ದರೂ, ಅವರಲ್ಲಿ ಕೆಲವರನ್ನೇ ಅವಳು ಸ್ವಲ್ಪಮಟ್ಟಿಗೆ ಕಾಣುತ್ತಾಳೆ – ಕೆಲವರು ಕಡಿಮೆ ವೈಯಕ್ತಿಕ ಬಾಂಧವ್ಯವನ್ನು ಹೊಂದಿದ್ದರೂ, ಒಂದು ಕಾರಣಕ್ಕಾಗಿ ಅಥವಾ ಇನ್ನೊಂದು ಕಾರಣಕ್ಕಾಗಿ ಅವಳನ್ನು ಪದೆ–ಪದೆ ಅಥವಾ ಹೆಚ್ಚು ಸಮಯ ಕಾಣುತ್ತಾರೆ. ಇಲ್ಲಿ, ಭೌತಿಕ ಮನಸ್ಸಿನ ಮೂರ್ಖ ಗಣಿತದ ನಿಯಮಗಳನ್ನು ಅನ್ವಯಿಸುವುದು ಅಸಂಬದ್ಧ ಸಂಗತಿಯಾಗಿದೆ – ಶ್ರೀಮಾತೆಯವರು ಏನನ್ನು ಮಾಡುತ್ತಾರೆ ಎನ್ನುವುದನ್ನು ನಿಮ್ಮ ಭೌತಿಕ ಮನಸ್ಸು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ; ಅದರ ಮೌಲ್ಯಗಳು, ಮಾನದಂಡಗಳು ಮತ್ತು ಆಲೋಚನೆಗಳು ಶ್ರೀಮಾತೆಯವರದಲ್ಲ. ನಿಮ್ಮ ವೈಯಕ್ತಿಕ ಪ್ರಾಣಿಕ ಬೇಡಿಕೆ ಅಥವಾ ಬಯಕೆಯನ್ನು, ಶ್ರೀಮಾತೆಯವರು ಏನು ಮಾಡಬೇಕೆಂದರೆ ಮಾನದಂಡವನ್ನಾಗಿ ಮಾಡುವುದು ಇನ್ನೂ ಕೆಟ್ಟದಾದ ಸಂಗತಿಯಾಗಿದೆ. ಆ ರೀತಿಯಲ್ಲಿ ಆಧ್ಯಾತ್ಮಿಕ ನಾಶವಡಗಿದೆ. ಅವಳು ಪ್ರತಿ ಪ್ರಕರಣದಲ್ಲೂ, ವಿಭಿನ್ನ ಕಾರಣಗಳಿಗಾಗಿ, ಆ ಪ್ರಕರಣಕ್ಕೆ ಸೂಕ್ತವಾದ ರೀತಿಯಲ್ಲಿ ವರ್ತಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/483–509 – ಶ್ರೀ ಅರವಿಂದರು**

ದೇಹದ ಶುದ್ಧತೆಯ ಬಗ್ಗೆ ಚಿಂತಿಸಬೇಡಿ. ಶ್ರೀಮಾತೆಯವರ ಪ್ರೀತಿಯು ಹೃದಯ ಮತ್ತು ದೇಹ ಎರಡನ್ನೂ ಶುದ್ಧಗೊಳಿಸುತ್ತದೆ – ಆತ್ಮದ ಹಂಬಲವಿದ್ದರೆ, ದೇಹವೂ ಶುದ್ಧವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/482 – ಶ್ರೀ ಅರವಿಂದರು**

# ನಾನು ನಿನ್ನೊಂದಿಗೇ ಇದ್ದೇನೆ..

**– ಅನು: ಪುಟ್ಟು ಕುಲಕರ್ಣಿ**

“ನಾನು ಸದಾ ನಿನ್ನೊಂದಿಗೇ ಇದ್ದೇನೆ”

ಶ್ರೀಮಾತೆಯು ಪ್ರತಿಯೊಬ್ಬರಿಗೂ ಅವರಿಗೆ ಅವಶ್ಯಕವಿರುವ ಪ್ರೇಮವನ್ನೇ ಯಾವಾಗಲೂ ಕೊಡುತ್ತಾಳೆ.

*

ನಾನು ಸದಾ ನಿಮ್ಮ ಹೃದಯದಲ್ಲಿಯೇ ಪ್ರತಿಷ್ಠಾಪನೆಗೊಂಡಿದ್ದೇನೆ, ಅಲ್ಲಿಯೇ ಸ್ಥಿತಳಿದ್ದೇನೆ. ಪ್ರಜ್ಞಾಪೂರ್ವಕವಾಗಿಯೇ ನಾನು ಇಲ್ಲಿ ಸ್ಥಿತಗೊಂಡಿರುವದು.

*

ನಿಮ್ಮ ನಿಮ್ಮ ಹೃದಯವನ್ನು ಸದಾ ತೆರೆದಿಟ್ಟುಕೊಂಡಿರಿ, ಆ ಕ್ಷಣವೇ ನೀವು ಸದಾ ನನ್ನನ್ನು ಅಲ್ಲಿ ಕಾಣುತ್ತೀರಿ.

ನೀವೆಂದೂ ಉದ್ವಿಗ್ನರಾಗಬೇಡಿ. ನಿಮ್ಮ ಹೃದಯವನ್ನು ಸದಾ ಶಾಂತವಾಗಿರಿಸಿಕೊಂಡು ಅಲ್ಲಿಯೇ ಪ್ರಶಾಂತತೆಯಲ್ಲಿ ಸ್ಥಿರವಾಗಿರಿ, ಆಗಲೂ ಅಲ್ಲಿ ನನ್ನನ್ನು ಕಾಣುತ್ತೀರಿ.

*

ದೇವಾಲಯದೊಳಗೆ ಪ್ರವೇಶಿಸುವದಿದ್ದಲ್ಲಿ ತಲ್ಲೀನರಾಗಿ ಪ್ರವೇಶಿಸಿ, ಅಲ್ಲಿ ನನ್ನನ್ನು ಕಾಣುತ್ತೀರಿ.

*

ಅಭೀಪ್ಸೆಯಲ್ಲಿ ಇರುವ ಆತ್ಮಗಳೇಲ್ಲವೂ ನನ್ನ ಕೃಪೆಯಲ್ಲಿಯೇ ಇರುತ್ತವೆ.

*

ಪ್ರಾಮಾಣಿಕವಾಗಿರುವ ಆಕಾಂಕ್ಷೆ ಇರುವ ಸರ್ವರಲ್ಲಿಯೂ ಶ್ರೀಮಾತೆ ಇರುತ್ತಾಳೆ, ಮತ್ತು ದೈವಿಕ ಸ್ವರೂಪದ ಜೀವನದ ಕಡೆಗೆ ಕರೆದೊಯ್ಯುತ್ತಾಳೆ.

*

ನಾನು ಸದಾ ಸರ್ವದಾ ನಿಮ್ಮ ಹತ್ತಿರ, ನಿಮ್ಮ ಸಮೀಪ, ನಿಮ್ಮಲ್ಲಿಯೇ ಇರುತ್ತೇನೆ. ನನ್ನ ಆಶೀರ್ವಾದಗಳು ನನ್ನ ಸಂಗಡವೇ ಆಗಮಿಸುತ್ತವೆ.

*

ನಿಮ್ಮ ಕಾರ್ಯಗಳಲ್ಲಿ, ನಿಮ್ಮ ಸಾಧನೆಯ ಪಥದಲ್ಲಿ ನಿಮಗೆ ಮಾರ್ಗದರ್ಶನ ಮಾಡಲು ಮತ್ತು ಸಹಾಯ ಮಾಡಲು ನಾನು ಸದಾ ನಿಮ್ಮ ಮಧ್ಯದಲ್ಲಿಯೇ ಇರುತ್ತೇನೆ, ಈ ವಿಷಯವನ್ನು ನೀವು ಮನದಟ್ಟು ಮಾಡಿಕೊಳ್ಳಿರಿ.

*

ಈ ವ್ಯಾಪ್ತತ್ವವನ್ನು ಪ್ರಗತಿಗೊಳಿಸಿಕೊಳ್ಳುವದು ಮತ್ತು ಪ್ರಜ್ಞೆಯನ್ನು ಗಾಢಗೊಳಿಸಿ–ಕೊಳ್ಳುವದು ಮತ್ತು ಅದನ್ನು ನೀವು ಅನುಭವಿಸುವ–ಅನುಭಾವಿಸುವದು ಈಗ ಅವಶ್ಯವಿರುವ ಸಂಗತಿಯಾಗಿದೆ. ಇದು ಅತ್ಯಂತ ಸುಭದ್ರವಾದ, ನೈಜವಾಗಿರುವ ಮತ್ತು ಶಾಶ್ವತದ ಶಾಂತಿಯನ್ನು ಒದಗಿಸುತ್ತದೆ.

*

ನನ್ನ ಈ ಶಾಶ್ವತದ ಪ್ರೇಮದ ಅಸ್ತಿತ್ವವನ್ನು ನೀವು ಸದಾ ಹೊಂದಿರಬೇಕು, ಇದು ಸರ್ವ ರೀತಿಯಿಂದಲೂ ಸೂಕ್ತವಾಗಿರುತ್ತದೆ.

*

**ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಪ್ರೇಮ**

ನೀವು ಯಾವ ಸ್ಥಿತಿಯಲ್ಲಿ ಇರುವಿರಿ ಎನ್ನುವದು ನಿಮಗಿಂತ ಚೆನ್ನಾಗಿ ಅರಿವಿದೆ; ನಿಮ್ಮನ್ನು ನೀವೇ ಅಲ್ಪ ಪ್ರಾಮುಖ್ಯತೆ ಹೊಂದಿದವರು ಎಂದು ಭಾವಿಸಿಕೊಂಡಿರುವ ಅಮೂಲ್ಯ ನಿಧಿಗಳು ಎನ್ನುವದು ನನಗೆ ತಿಳಿದಿದೆ.

ಪ್ರೀತಿ, ಪ್ರೇಮ ಮತ್ತು ನಿಸ್ವಾರ್ಥತೆ ಇವೆಲ್ಲವೂ ಯಾವಾಗಲೂ ಯಾವುದೇ ಕರಾರು ಹೊಂದಿಕೊಂಡು ರೂಪಿತಗೊಳ್ಳುವ ವಿಷಯವಲ್ಲ ಎಂದು ನೀವು ಹೇಳುತ್ತಿರುವದು ನಿಜವಾಗಿದೆ.

ಶ್ರೀ ಅರವಿಂದರ ಕುರಿತು ಮತ್ತು ನನ್ನ ನಿಮ್ಮ ಬಗೆಗೆ ಹೊದಿರುವ ಪ್ರೀತಿಯೇ ಈ ರೀಯಲ್ಲಿರುತ್ತದೆ. ಅದಕ್ಕಾಗಿಯೇ ಇತರ ಎಲ್ಲಾ ಅಸಂಬದ್ಧತೆಗಳನ್ನು ಮತ್ತು ಬಯಕೆಗಳನ್ನು ನಾವು ಯಾವಾಗಲೂ ಆಲಿಸುವದಿಲ್ಲ.

ಆದರೆ ಒಂದು ಸಂಗತಿ ಮಾತ್ರ ನಿಜ, ನಾನು ನಿಜವಾಗಿಯೂ ನಿನ್ನನ್ನು ಪ್ರೀತಿಸುತ್ತೇನೆ, ನಾನು ನಿನ್ನನ್ನು ಹೆದರಿಸುವದಿಲ್ಲ, ಕೋಪದ ಕಣ್ಣುಗಳಿಂದ ನೋಡುವದಿಲ್ಲ. ಯಾವುದೇ ಅಂಜಿಕೆ ಇಲ್ಲದೇ ಇಲ್ಲಿಗೆ ಬಾ.

*

ಶ್ರೀ ಅರವಿಂದರು ಅಭಿವ್ಯಕ್ತಗೊಳಿಸಿರುವದನ್ನು ನೀವು ಜ್ಞಾಪಿಸಿಕೊಳ್ಳಿ. ಇವೆಲ್ಲವೂ ನಿಮಗೆ ಯಾವಾಗ ಮನದಾಳದಲ್ಲಿ ಇಳಿಯುತ್ತವೆ? ನೀವೇಕೆ ಶ್ರೀಮಾತೆಯಿಂದ ದೂರವಿರಲು ಓಡಿ ಹೋಗುತ್ತೀರಿ? ಬನ್ನಿ, ಅವಳ ಸಮೀಪವೇ ಬನ್ನಿ. ಅವಳು ಅತ್ಯಂತ ಪ್ರೀತಿಯಿಂದಲೇ ಗುಣಪಡಿಸುತ್ತಾಳೆ. ಇದುವೇ ನಿಜವಾದ ಸಂಗತಿಯಾಗಿದೆ.

*

ನನ್ನ ಎಲ್ಲಾ ಮಕ್ಕಳನ್ನೂ ನಾನು ಸದಾ ಸಮಾನವಾಗಿಯೇ ಜ್ಞಾಪಿಸಿಕೊಳ್ಳುತ್ತಿರುತ್ತೇನೆ, ಜೊತೆಜೊತೆಗೆ ಪ್ರೀತಿಸುತ್ತಾ ಇರುತ್ತೇನೆ.

ನೀವು ನನಗೇ ನೇರವಾಗಿ ಬರೆಯಿರಿ, ನಿಮ್ಮ ಎಲ್ಲಾ ಪ್ರಾಮಾಣಿಕ ಪ್ರಾರ್ಥನೆಗಳಿಗೆ ಉತ್ತರಿಸುತ್ತೇನೆ. ನಾನೇ ಲಿಖಿಸುತ್ತೇನೆ. ಯಾವ ಯಾತನೆಯನ್ನೂ ಅನುಭವಿಸದೇ ಸದಾ ಹರ್ಷಚಿತ್ತರಾಗಿರಿ.

*

*ನಾನು ಪ್ರತಿಯೊಂದು ಕ್ಷಣದಲ್ಲೂ ಸಹಿತ, ಯಾರಾದರೂ ನಿಮ್ಮನ್ನು ಕರೆಯುತ್ತಿದ್ದಾರೆ ಮತ್ತು ನೀವು ಅದಕ್ಕೆ ಉತ್ತರಿಸುತ್ತಾ ಇರುತ್ತೀರಿ ಎಂದು ಭಾವಿಸುತ್ತಾ ಇರುತ್ತೇನೆ. ಇದು ನಿಮ್ಮ ನಿದ್ರೆಗೆ ಮತ್ತು ವಿಶ್ರಾಂತಿಗೆ ಅಡೆತಡೆ ಉಂಟು ಮಾಡುವದಿಲ್ಲವೇ?*

ಹಗಲಿರುಲೂ ಸತತವಾಗಿ ಕರೆಗಳು ಬರುತ್ತಲೇ ಇರುತ್ತವೆ. ಆದರೆ ನನ್ನ ಪ್ರಜ್ಞೆ ಸದಾ ಅವುಗಳನ್ನು ಗಮನಿಸುತ್ತಲೇ ಇರುತ್ತದೆ ಮತ್ತು ಅವುಗಳಿಗೆ ಉತ್ತರವನ್ನೂ ಒದಗಿಸುತ್ತಿದೆ.

ವ್ಯಕ್ತಿ ಎನ್ನುವದು ಕಾಲ ಮತ್ತು ಅವಕಾಶದಲ್ಲಿ ಮಾತ್ರ ಸೀಮಿತವಾಗಿರುತ್ತಾನೆ.

*

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

**15**

### ಅಧ್ಯಾಯ – 14
### ದಿವ್ಯ ಕರ್ಮಗಳ ಹಿಂದಿನ ತತ್ತ್ವ

ಯಜ್ಞದ ವಿಷಯವಾಗಿ ಗೀತೆಯು ಏನನ್ನು ಹೇಳುತ್ತದೆ ಎಂಬುದನ್ನು ಸಾರರೂಪವಾಗಿ ನಾವು ನೋಡಿದ್ದೇವೆ. ಆದರೆ ಪುರುಷೋತ್ತಮನ ಪರಿಕಲ್ಪನೆಯ ಮೇಲೆಯೇ ಯಜ್ಞತತ್ವವು ಅವಲಂಬಿತವಾಗಿದ್ದು, ಆದರ ವಿವೇಚನೆಯನ್ನು ವಿಶದವಾಗಿ ಮಾಡದೇ ವಿಷಯ ಸ್ಪಷ್ಟವಾಗುವುದಿಲ್ಲ. ಆದರೆ ಪುರುಷೋತ್ತಮ ತತ್ವದ ಸಂಪೂರ್ಣ ವಿಷದೀಕರಣವನ್ನು ಮುಂದೆ (15 ನೆಯ ಅಧ್ಯಾಯದಲ್ಲಿ) ಮಾಡಲಾಗಿದೆ. ಇಲ್ಲಿ ಪುರುಷೋತ್ತಮ ತತ್ವವನ್ನು ಸೂಚ್ಯರೂಪವಾಗಿ ಹೇಳಿದ್ದು. ಗೀತೆಯ ಪ್ರಗತಿಪರ ಹಾಗೂ ಸಮಗ್ರ ಚಿಂತನೆಯ ಕ್ರಮದಲ್ಲಿ ಇದು ಸ್ವಲ್ಪ ಅಡಚಣೆ ಅನಿಸಿದರೂ ಸಹ, ನಮಗೆ ಸಹನೆ ಬೇಕೇಬೇಕು – ಇಲ್ಲಿ ಗೀತಾಚಾರ್ಯನು ಕೇವಲ ಸುಳಿವು ನೀಡುತ್ತಾನೆ. ಪರಮ ಪುರುಷೋತ್ತಮನ ತತ್ವದ ಬಗ್ಗೆ ಸೂಚನೆ ನೀಡುತ್ತಾನೆ. ಅವನಿಗೂ ನಿಶ್ಚಲ ಪುರುಷನಿಗೂ ಏನು ಸಂಬಂಧ ಎಂಬುದನ್ನು ಹೇಳುತ್ತಾನೆ. ಬ್ರಾಹ್ಮೀ ಸ್ಥಿತಿಯನ್ನು ಪಡೆಯಬೇಕಾದರೆ ನಾವು ಮೊಟ್ಟ ಮೊದಲು ಈ ನಿಶ್ಚಲ ಪುರುಷನ ಪರಿಪೂರ್ಣ ಸಮತ್ವವನ್ನು ಸಂಪಾದಿಸಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಾನೆ. ಈ ಸಂಪೂರ್ಣ ನಿರ್ವ್ಯಕ್ತಿಕ ಪುರುಷನೆಂದರೆ ವಸ್ತುತಃ ಪುರುಷೋತ್ತಮನೇ; ಆದರೆ ಪ್ರಸ್ತುತ ಸಂದರ್ಭದಲ್ಲಿ ಮಾತ್ರ ಕೃಷ್ಣನು ಪುರುಷೋತ್ತಮ ಎಂಬ ಶಬ್ದವನ್ನು ಬಳಸುತ್ತಿಲ್ಲ; ಬದಲಾಗಿ “ನಾನು, ಕೃಷ್ಣ, ನಾರಾಯಣ, ಅವತಾರ” ಎಂದು ಹೇಳುತ್ತಿದ್ದಾನೆ. ಅವನು ವಿಶ್ವದಲ್ಲಿ ವಿಶ್ವೇಶ್ವರನು, ಕುರುಕ್ಷೇತ್ರದಲ್ಲಿ ಪಾರ್ಥನ ದಿವ್ಯ ಸಾರಥ್ಯ ವಹಿಸಿದ ಕೃಷ್ಣರೂಪೀ ಪುರುಷೋತ್ತಮನೇ ಆಗಿದ್ದಾನೆ. ಅವನು ನೀಡುವ ಸೂತ್ರ ತುಂಬ ಸೊಗಸಾಗಿದೆ “ಆತ್ಮನಿ ಅಥೋ ಮಯಿ” ಇದರ ಸ್ಪಷ್ಟ ಅರ್ಥವೇನೆಂದರೆ ಮೊದಲು ಎಲ್ಲರಲ್ಲಿ, ಸಕಲ ಭೂತಾತ್ಮರಲ್ಲಿ ಹಾಗೂ ನಂತರ ನನ್ನಲ್ಲಿ ಪುರುಷೋತ್ತಮನನ್ನು ಕಾಣಬೇಕು. ಮೊದಲು ತಮ್ಮಲ್ಲಿ ಅನಂತರ ಕೃಷ್ಣನಲ್ಲಿ ಅವನನ್ನು ಕಾಣಬೇಕು. ಪ್ರತಿ ಜೀವವೂ ಸಹ ಸಂಭೂತಿ

ಅಥವಾ Becoming ಆಗಿದ್ದು ನಿರ್ವೈಕ್ತಿಕ ಸ್ವಯಂಭೂ ಆಗಿರುವ ಸತ್ತೆಯೇ ಆಗಿರುವುದು; ಈ ಸತ್ತನ್ನು ಸಂಭೂತಿ ಅಥವಾ ಬದಲಾಗುತ್ತ ಹೋಗುತ್ತಿರುವ ಶಾಶ್ವತತೆಯ ಅಸ್ತಿತ್ವವೆಂಬುದನ್ನು ಕಂಡುಕೊಂಡರೆ ಪ್ರತಿ ಜೀವವೂ ಉದ್ಧಾರವಾಗುವುದು, ಉಧೃತಗೊಳ್ಳುವುದು. ಪ್ರತಿ ಜೀವವೂ ನಿರ್ಗುಣ ಹಾಗೂ ನಿರಾಕಾರವೇ ಆಗುವುದು, ಪ್ರಕೃತಿಯ ವಶದಲ್ಲಿರುವಾಗ ಸಕ್ರಿಯವಾಗಿದ್ದರೂ, ಮುಂದೆ ತನ್ನದೆಲ್ಲವನ್ನೂ ಕಳೆದುಕೊಂಡು, ಇಲ್ಲವಾಗಿ ನೋಡಿಕೊಂಡು ಪರಮ ಪುರುಷನೊಂದಿಗೆ ಸೇರಿ ಒಂದಾಗಲೆತ್ನಿಸುವುದು ಹಾಗೆ ಸೇರುವಾಗ ಅದು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು ಬಿಡುವುದು. ಹಾಗೆ ಪರಮ ಪುರುಷೋತ್ತಮನ ಜೊತೆ ಪ್ರತಿ ಜೀವವೂ ತನ್ನ ಪ್ರತ್ಯೇಕತೆಯನ್ನು ಕಳೆದುಕೊಳ್ಳುವುದು. ಅಲ್ಲಿ ಯಾವ ಮೂರ್ತ ರೂಪವೂ ಉಪಾಧಿಯೂ ಇರುವುದಿಲ್ಲ. ಆದರೂ ಸಹ ಅನಿರ್ವಚನೀಯವಾದ ರೀತಿಯಲ್ಲಿ ಅದು ತನ್ನ ಪ್ರತ್ಯೇಕತೆಯನ್ನು ಪ್ರತ್ಯೇಕತೆಯ ಕ್ರಿಯಾ ವಿಶೇಷಗಳನ್ನು ಉಳಿಸಿಕೊಂಡು, ಸಕ್ರೀಯವಾಗಿಯೇ ಇರುವುದು. ಇದೇ ವಿಶೇಷ ಅವಸ್ಥೆ. ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡ ಮೇಲೂ ತನ್ನ ತನವನ್ನು, ತನ್ನ ಕ್ರಿಯಾ ವಿಶೇಷಗಳನ್ನುಳಿಸಿಕೊಂಡು ಹೋಗುವುದೇ ವಿಶ್ವಾತ್ಮಕ ಅಸ್ತಿತ್ವದ ವೈಶಿಷ್ಟವಾಗಿದೆ. ಮೊದಲು ನಾವು ತ್ರಿಗುಣಾತ್ಮಕ ಪ್ರಕೃತಿಯ ಅಥವಾ ನಿಮ್ನ ಪ್ರಕೃತಿಯ ಎಲ್ಲ ಗುಣ ಧರ್ಮಗಳನ್ನು ಕಳೆದುಕೊಳ್ಳುತ್ತೇವೆ; ನಮ್ಮ ಜೀವ ಅಥವಾ ಅಂತರಾತ್ಮನನ್ನು ತ್ರಿಗುಣಾತೀತನಾದ ನಿಶ್ಚಲ ಪುರುಷನಲ್ಲಿ ನೆಲೆ ನಿಲ್ಲಿಸುತ್ತೇವೆ; ಅಲ್ಲಿಂದಾಚೆಗೆ ಪರಾ ಪ್ರಕೃತಿಯನ್ನು ಅಂದರೆ ಶ್ರೇಷ್ಠ ದಿವ್ಯ ಪ್ರಕೃತಿಯನ್ನು ಕೂಡ ದಾಟಿ ಪರಮಾತ್ಮನಲ್ಲಿ ಒಂದಾಗುತ್ತವೆ. ಆದರೆ ಈ ಪರಮಾತ್ಮನಾದರೂ ಸಹ ತ್ರಿಗುಣಾತೀತನಾಗಿದ್ದರೂ ಸಹ ಪ್ರಕೃತಿಯ ಮೂಲಕವೇ ವಿಶ್ವದಲ್ಲಿ ಕಾರ್ಯ ಮಾಡುತ್ತಾನೆ. ಇದು ಅನಿರ್ವಚನೀಯವೂ ಹೌದು, ಸತ್ಯವೂ ಹೌದು. ತ್ರಿಗುಣಾತೀತನಾಗಿ, ತ್ರಿಗುಣಗಳ ಮೂಲಕವೇ ಕೆಲಸ ಮಾಡುವ ಅನಿರ್ವಚನೀಯ ಸ್ಥಿತಿ ಇದು. ನಿಶ್ಚಲ ಪುರುಷನ ಆಂತರಿಕ "ನೈಷ್ಕರ್ಮ"ವನ್ನು ಸಾಧಿಸಿಕೊಂಡು, ಪ್ರಕೃತಿಗೆ ತನ್ನ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಲು ಅನುವು ಮಾಡಿಕೊಳ್ಳಲು, ನಾವು ಕೂಡ ಇಂಥ ಪರಮ ರಹಸ್ಯಮಯವಾದ ಶ್ರೇಷ್ಠ, ಉಚ್ಚ ಸ್ಥಿತಿಯನ್ನು ತಲುಪಿದಾಗ (ಪ್ರಕೃತಿಯ) ಎಲ್ಲ ಕಾರ್ಯಗಳನ್ನು ಮಾಡುತ್ತಲೇ ಪ್ರಕೃತಿಯ ಗುಣಗಳಿಂದ ಮುಕ್ತನಾಗಿ ಯಾವುದರಿಂದಲೂ ಬದ್ಧರಾಗದೇ ಇರಲು ಸಾಧ್ಯವಾಗುವುದು. ಆದ್ದರಿಂದ ಇಲ್ಲಿ ಹೇಳಲಾಗಿರುವ ಶ್ರೀಮನ್ನಾರಾಯಣನ

ಅವತಾರವಾದ ಕೃಷ್ಣನೇ ಈ ಪರಮ ರಹಸ್ಯದ ಬೀಗದ ಕೈ ಎಂಬುದನ್ನೂ ಅರ್ಥಮಾಡಿಕೊಳ್ಳಬೇಕು. ಈ ದೃಢ ಭಾವ ಇಲ್ಲದೇ ಹೋದರೆ, ನಿಮ್ಮ ಪ್ರಕೃತಿಯಿಂದ ಮುಕ್ತನಾದ ತಕ್ಷಣ ಅಂಥ ಮೋಕ್ಷ ಸಾಧಿಸಿದ ವ್ಯಕ್ತಿಯು ನೈಷ್ಕರ್ಮ ಸ್ಥಿತಿ ತಲುಪಿಬಿಡುತ್ತಾನೆ. ಪ್ರಾಪಂಚಿಕ ವ್ಯವಹಾರದಿಂದ ನಿವೃತ್ತನಾಗಿ ಬಿಡುತ್ತಾನೆ. ಆದರೆ ಕೃಷ್ಣನೆಂಬ ಬೀಗದ ಕೈ ಹಿಡಿದುಕೊಂಡೇ ಈ ಸ್ಥಿತಿಗೆ ಮುಟ್ಟಿದರೆ ತ್ಯಾಗವೆನ್ನುವುದೂ ಸಹ ಒಂದು ಮೆಟ್ಟಲಾಗಿ, ವಿಶ್ವದ ಎಲ್ಲ ವ್ಯಾಪಾರಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದು; ಆಗ ಅವನು ದೈವೀ ಮುಕ್ತಿಯನ್ನು ಪಡೆದೂ ಪ್ರಕೃತಿಯ ಎಲ್ಲ ಕಾರ್ಯಗಳಲ್ಲಿ ಮುಕ್ತನಾಗಿಯೇ ಭಾಗವಹಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಕೆಳಗಿನ ಸೂತ್ರವನ್ನು ಮರೆಯದೇ ಸಾಧನೆ ಮಾಡಬೇಕು; ನಿಶ್ಚಲ ಬ್ರಹ್ಮನೇ ಪರಮ ಗುರಿ ಎಂದು ಸಾಧನೆ ಮಾಡಿದರೆ ಪ್ರಪಂಚದ ಎಲ್ಲಾ ಕಾರ್ಯಗಳಿಂದ ನಿವೃತ್ತಿ ಸಿಕ್ಕುವುದು, ಆಗ ಯಾವ ಕರ್ಮಗಳೂ ಇಲ್ಲ; ಪರಮಾತ್ಮ ಪುರುಷೋತ್ತಮನೇ ನಮ್ಮ ಸಾಧನೆಯ ಗುರಿ ಎಂದು ತಿಳಿದು ಸಾಧನೆ ಮಾಡಿದರೆ, ಪುರುಷೋತ್ತಮನು ಎಲ್ಲ ಕರ್ಮಗಳಿಂದ ಅತೀತನಾಗಿದ್ದುಕೊಂಡು ಆಧ್ಯಾತ್ಮಿಕ ಕಾರಣ ಹಾಗೂ ಗುರಿ ಹಾಗೂ ಮೂಲ ಸಂಕಲ್ಪವಾಗಿರುವುದರಿಂದ, ಸಾಧಕನು ವಿಶ್ವದ ಎಲ್ಲ ಕಾರ್ಯಗಳ ಮೇಲೆ ವಿಜಯ ಸಾಧಿಸಿ, ವಿಶ್ವಾತೀತ ದಿವ್ಯ ಸ್ಥಿತಿಯಲ್ಲಿ ನಿಂತು ವಿಶ್ವದ ಎಲ್ಲ ಅವಶ್ಯಕ ಕಾರ್ಯಗಳನ್ನು ಮಾಡುವುದು ಸಾಧ್ಯವಾಗುವುದು. ಆಗ ಈ ಪ್ರಪಂಚವು ಒಂದು ಕಾರಾಗೃಹವಾಗದೇ "ರಾಜ್ಯಂ ಸಮೃದ್ಧಂ" ಆಗಿ ಬದಲಾಗುವುದು. ನಾವಾಗ ಈ ಪ್ರಪಂಚವನ್ನು ದೈವೀ ಕಾರಣಕ್ಕಾಗಿ, ದಿವ್ಯ ಜೀವನಕ್ಕಾಗಿ, ನಮ್ಮ ಕ್ಷುದ್ರ (ನಿಮ್ನ) ಅಹಂನ್ನು ಕೊಂದು, ನಮ್ಮ ಕ್ಷುಲ್ಲಕ ಆಶೆಗಳನ್ನು ಹಿಮ್ಮೆಟ್ಟಿ, ನಮ್ಮ ವೈಯಕ್ತಿಕತೆಯ ಬಂಧನದಿಂದ ಪಾರಾಗಿ, ಪಡೆದುಕೊಂಡಿರುವುದರಿಂದ ಎಲ್ಲವೂ ಆಧ್ಯಾತ್ಮಿಕ ಆನಂದವಾಗಿ ಬದಲಾಗುವುದು. ಆಗ ಮುಕ್ತನಾದ ಜೀವಿಯು "ಸ್ವರಾಟ್ ಸಾಮ್ರಾಟ್" ತನ್ನ ಸ್ವಂತ ರಾಜ್ಯದ ಸ್ವತಂತ್ರ ರಾಜನಾಗಿ ಮೆರೆಯವುನು.

ಈ ರೀತಿ ಯಜ್ಞ ಭಾವದಿಂದ ಮಾಡುವ ಕರ್ಮಗಳನ್ನು (ಅಥವಾ ಕರ್ಮ ಯೋಗವನ್ನು) ಮೋಕ್ಷದ ಹಾಗೂ ಸಂಪೂರ್ಣ ಆಧ್ಯಾತ್ಮಿಕ ಸಂಸಿದ್ಧಿಯ ಸಾಧನಗಳು, ಮಾರ್ಗ ಎಂದು ಗೀತೆ ಹೇಳುತ್ತದೆ. ಆದ್ದರಿಂದಲೇ "ಕರ್ಮಣೈವ ಹಿ ಸಂಸಿದ್ಧಿಂ ಆಸ್ಥಿತೌಃ ಜನಕಾದಯೆ" ಅಂದರೆ ಜನಕನಾದಿ ಮಹಾನ್ ಕರ್ಮ

ಯೋಗಿಗಳು ಈ ಪ್ರಾಚೀನ ಯೋಗ ಮಾರ್ಗವನ್ನುಸರಿಸುತ್ತ ಯಜ್ಞ ಬುದ್ಧಿಯಿಂದ, ಸಮತ್ವದಿಂದ ಕರ್ಮಗಳನ್ನು ಮಾಡುತ್ತ, ಎಲ್ಲ ಸ್ವಹಿತಾಸಕ್ತಿ, ಆಸಕ್ತಿ ಎಲ್ಲವನ್ನು ತ್ಯಾಗ ಮಾಡಿ "ಪೂರ್ಣತ್ವವನ್ನು" ಪಡೆದುಕೊಂಡರು. ಅದೇ ರೀತಿ, ಅದೇ ರೀತಿಯ ಅನಾಸ್ಥೆ ಹಾಗೂ ಆಸಕ್ತಿರಾಹಿತ್ಯದ ಮೂಲಕ, ಮುಕ್ತರಾದ ನಂತರವೂ, ವಿಶ್ವದಲ್ಲಿ ಕರ್ಮ ಮಾಡಲು ಸಾಧ್ಯ ಹಾಗೂ ಕರ್ಮ ಮಾಡುತ್ತಲೇ ಇರಬೇಕು. ವಿಶಾಲವಾದ ಆತ್ಮದ ದೃಷ್ಟಿಯಿಂದ ದೈವೀ ಭಾವದಿಂದ, ಶಾಂತಿಯಿಂದ, ಆಧ್ಯಾತ್ಮಿಕ ರೀತಿಯ ಉನ್ನತ ಸ್ವಭಾವದ ಮೂಲಕ, ಜಗತ್ತಿನಲ್ಲಿ ಎಲ್ಲ ಅವಶ್ಯಕ ಕರ್ಮಗಳನ್ನು ಮಾಡುತ್ತ ಜೀವಿಸುವುದು ಅವಶ್ಯವಿದೆ. ಇದನ್ನೇ "ಲೋಕ ಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ"" ಎಂದು ಹೇಳುತ್ತಾನೆ. ಯಾರು ಆದರ್ಶಪ್ರಾಯರೋ, ಉನ್ನತ ವ್ಯಕ್ತಿತ್ವ ಹೊಂದಿರುವವರೋ ಅವರೇನು ಮಾಡುತ್ತಾರೋ ಅದನ್ನೇ ಕೆಳ ಹಂತದ ಜನರು ಅನುಸರಿಸುತ್ತಾರೆ. ಅವರು ಮಾಡಿದ ಮಾದರಿಯನ್ನೇ ಇತರರೂ ಪಾಲಿಸುತ್ತಾರೆ. ನೋಡು ಅರ್ಜುನ ಮೂರು ಲೋಕಗಳಲ್ಲಿ ನಿಜವಾಗಿ ನಾನು ಮಾಡಲೇಬೇಕು ಅನ್ನುವಂಥ ಯಾವ ಕರ್ಮವೂ ಇಲ್ಲ; ನಾನು ಏನನ್ನೂ ಮಾಡಬೇಕಿಲ್ಲ. ನನಗೆ ಯಾವ ಲಾಭವೂ ಇಲ್ಲ. ನಾನು ಏನನ್ನಾದರೂ ಅರ್ಜಿಸಬೇಕು, ಗಳಿಸಬೇಕು ಅಂತೇನೊ ಕರ್ಮ ಮಾಡುವುದಿಲ್ಲ. ನನಗೆ ಅಪ್ರಾಪ್ಯವಾದುದು ಬ್ರಹ್ಮಾಂಡದಲ್ಲಿಯೇ ಏನೂ ಇಲ್ಲ. ಆದರೂ ನಾನು ಕರ್ಮ ಮಾಡುತ್ತೇನಲ್ಲವೇ? ನೀನೇ ನೋಡಿದ್ದೀಯಲ್ಲ ಅರ್ಜುನ! ಏಕೆಂದರೆ ನಾನು ಕರ್ಮ ಮಾರ್ಗದಲ್ಲಿ ನಿತ್ಯ ಜಾಗೃತನಾಗಿರದೇ ಹೋದರೆ, ಯಾವ ಮಾನವರೂ ಕರ್ಮ ಮಾರ್ಗದಲ್ಲಿ ನಡೆಯುವುದಿಲ್ಲ. ಸನ್ಯಾಸಿಯ ಹಾಗೆ ಕರ್ಮ ತ್ಯಾಗ ಮಾಡುವುದೇ ವಿಹಿತವೆಂದು ಭಾವಿಸುತ್ತಾರೆ. ಆಗ ಇಡೀ ವಿಶ್ವದಲ್ಲಿ ಎಲ್ಲೆಡೆಗೊಂದಲ ಸೃಷ್ಟಿಯಾಗಿ ಬಿಡುವುದು. ಆಗ ನಾನೇ ಸೃಷ್ಟಿಮಾಡಿದ ವಿಶ್ವವನ್ನು ನಾನೇ ನಾಶಮಾಡಬೇಕಾಗಿ ಬರುತ್ತದೆ. ಅನೇಕರಿಗೆ (ಅಜ್ಞಾನಿಗಳಿಗೆ) ಇದು ಗೊತ್ತಿಲ್ಲ. ಎಲ್ಲರೂ ಕರ್ಮಗಳಿಗೆ ಅಂಟಿಕೊಂಡೇ ಕೆಲಸ ಮಾಡುತ್ತಾರೆ. ಮೋಹಿತರಾಗಿಯೇ ಕೆಲಸ ಮಾಡುತ್ತಾರೆ; ಯಾರಿಗೆ ಈ ಯಜ್ಞ ತತ್ವ ತಿಳಿದಿದೆಯೋ ಅವರು (ಜ್ಞಾನಿಗಳು) ಮೋಹವಿಲ್ಲದೇ ಕರ್ಮ ಮಾಡುತ್ತಾರೆ. ಏಕೆಂದರೆ ಅವರಿಗೆ ಲೋಕ ಸಂಗ್ರಹ (ಜಗದಲ್ಲಿ ಕರ್ಮ ಮಾಡುವುದು ಅತ್ಯಂತ ಅವಶ್ಯಕವಿರುವುದರಿಂದ, ಜನರನ್ನು ಕರ್ಮದಲ್ಲಿ ತೊಡಗಿಸಲು ಜ್ಞಾನಿಗಳೂ ಸಹ ಕರ್ಮದಲ್ಲಿ ಅನಾಸಕ್ತಿಯಿಂದ ತೊಡಗಿಕೊಂಡಿರುತ್ತಾರೆ) ಮಾಡಲೇಬೇಕಾಗಿದೆ.

ಆದ್ದರಿಂದ ತಾವೂ ಕರ್ಮದಲ್ಲಿ (ಜ್ಞಾನದಿಂದ) ತೊಡಗುತ್ತಾರೆ. ಇತರರಿಗೂ ಆ ಪಂಕ್ತಿ ಹಾಕಿ ಕೊಟ್ಟು ಅವರೂ ಕರ್ಮದಲ್ಲಿ ತೊಡಗುವಂತೆ ಮಾಡುತ್ತಾರೆ. ಇದೇ ಕರ್ಮ ಯೋಗದ ವೈಶಿಷ್ಟ್ಯ. ಗೀತೆಯ ಮೂರನೆಯ ಅಧ್ಯಾಯದಲ್ಲಿ ಬರುವ ಈ ಏಳು ಶ್ಲೋಕಗಳಿಗಿಂತ (20–26) ಇನ್ನೂ ಹೆಚ್ಚು ಅರ್ಥಗರ್ಭಿತವಾದ ಅತಿ ಮಹತ್ವದ ಶ್ಲೋಕಗಳಿವೆ. ಅವೆಲ್ಲವೂ ಕರ್ಮ ಮಾರ್ಗದ ಅನಿವಾರ್ಯತೆಯನ್ನು, ಮಹತ್ವವನ್ನು ಸಾರುತ್ತವೆ.

ಆದರೆ ಒಂದು ಸಂಗತಿಯನ್ನು ನಾವು ಮರೆಯದೇ ನೆನಪಿನಲ್ಲಿಟ್ಟು–ಕೊಳ್ಳಬೇಕು. ಅದೇನೆಂದರೆ ಈ ಶ್ಲೋಕಗಳನ್ನು ಸದ್ಯದ ಆಧುನಿಕ ವ್ಯವಹಾರಿಕ ದೃಷ್ಟಿಕೋನದ ಮೂಲಕ ಅರ್ಥೈಸಲು ಹೋಗಬಾರದು. ಪ್ರಸ್ತುತ ಆಗುಹೋಗುಗಳು ಇವುಗಳ ಸುತ್ತಲೇ ತಿರುಗುತ್ತ ಆಧ್ಯಾತ್ಮಿಕ ಸಾಧ್ಯತೆ, ಆಧ್ಯಾತ್ಮಿಕ ಅರ್ಥಾಪತ್ತಿಗಳನ್ನು ಕಡೆಗಣಿಸುತ್ತದೆ. ಸಮಾಜ ಸೇವೆ, ದೇಶ ಭಕ್ತಿ, ವಿಶ್ವಾತ್ಮಕ, ಅಂತರಾಷ್ಟ್ರೀಯ ಮಾನವ ಕುಲ ಹಿತದ ಕಾರ್ಯ ಯೋಜನೆ, ಹಾಗೂ ನೂರಾರು ಇಂಥವೇ ಅತ್ಯುತ್ಸಾಹಪೂರ್ಣ ಸಾಮಾಜಿಕ ಕನಸು ಹಾಗೂ ಅವುಗಳನ್ನು ನನಸಾಗಿಸುವ ಪ್ರಯತ್ನ ಇವುಗಳನ್ನೇ ತಾತ್ವಿಕವಾಗಿ, ತತ್ವ ಜ್ಞಾನದ ತಳಹದಿಯ ಮೇಲೆ ಧಾರ್ಮಿಕ ತಳಹದಿಯ ಮೇಲೆ ಸಮರ್ಥನೆ ಮಾಡುತ್ತ ಜನರೆಲ್ಲರೂ ಅತ್ತಲೇ ಧಾವಿಸುವಂತೆ ಮಾಡುವ ಪ್ರಯತ್ನ ಆಧುನಿಕ ಮನೋಭಾವದಲ್ಲಿ ಬೇರೂರಿದೆ. ಇಲ್ಲಿರುವ ನಿಯಮ ಅಥವಾ ಕಾನೂನು ವಿಶಾಲವಾದ ನೈತಿಕ ಮತ್ತು ಬೌದ್ಧಿಕ ಪರೋಪಕಾರ ಇವುಗಳ ಮೇಲೆ ಒತ್ತು ನೀಡುವುದೆಂಬುದು ತಪ್ಪು. ಮುಖ್ಯವಾಗಿ ನಾವು ಗ್ರಹಿಸಬೇಕಾದ ಹಾಗೂ ಅಳವಡಿಸಿಕೊಳ್ಳಬೇಕಾದ ತತ್ವವೇನೆಂದರೆ, ಈಶ್ವರನೊಂದಿಗೆ ಸೇರಿ ಹೋಗುವುದು, ಅವನ ಜೊತೆ ತಾದಾತ್ಮ್ಯ ಹೊಂದುವುದು. ಈಶ್ವರನು ತನ್ನಲ್ಲೂ ಇದ್ದಾನೆ, ಎಲ್ಲ ಜೀವಗಳಲ್ಲೂ ಇದ್ದಾನೆ. ಇಡೀ ವಿಶ್ವವೆಲ್ಲವೂ ಈಶ್ವರನ ಉದರದೊಳಗೇ ಇದೆ. ಈ ಭಾವವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಸ್ವಲ್ಪ ಅಪಾರ್ಥವಾದರೂ ಆಧ್ಯಾತ್ಮಿಕ ಸಾಧನೆಯ ತಳಹದಿಯೇ ತಪ್ಪಿಹೋಗುತ್ತದೆ.

ಈಗ ಸದ್ಯದ ವ್ಯವಹಾರದಲ್ಲಿ ವೈಯಕ್ತಿಕತೆಯು ಸ್ವತಂತ್ರವಾಗಿದ್ದರೂ ಸಹ ಅದು ಸಮಾಜಕ್ಕೆ, ಮಾನವೀಯತೆಗೆ ಕಟ್ಟುಬಿದ್ದಿರಬೇಕು. ಅದನ್ನು ಮೀರಿ ಹೋಗಬಾರದೆಂದೂ, ವಿಶ್ವಾತ್ಮಕತೆಗೆ ಶರಣಾಗಬೇಕೆಂದೂ ಅರ್ಥಮಾಡ–ಲಾಗುವುದುಂಟು. ಆದರೆ ವೈಯಕ್ತಿಕತೆಯ ನಿಜವಾದ ಸಾರ್ಥಕತೆಯು ಇರುವುದು

ಅದು ಸರ್ವೇಶ್ವರನಲ್ಲಿ ಕರಗಿ ಹೋಗುವುದರಲ್ಲಿ. ಎಲ್ಲವನ್ನೂ ತನ್ನೊಳಗೆ ಸಮಾಹಿಸಿಕೊಂಡಿರುವ ಈಶ್ವರನಲ್ಲಿ ತನ್ನ ವೈಯಕ್ತಿಕ ಅಹಂನ್ನು ವಿಲಯನಗೊಳಿಸುವುದರಲ್ಲಿ ವೈಯಕ್ತಿಕ ಅಹಂ (ಪ್ರತ್ಯೇಕತೆಯು) ಕೂಡ ಈಶ್ವರೀ ಭಾವವನ್ನು ಪಡೆಯಬೇಕೆಂಬುದೇ ಆಧ್ಯಾತ್ಮದ ಗುರಿ, ಅದೇ ಸಾರ್ಥಕತೆ, ಕೃತಾರ್ಥತೆ, ಪರಿಪೂರ್ಣತೆ. ಗೀತೆಯು ಇಂಥ ಎಲ್ಲ ವ್ಯವಹಾರಿಕ ಪರಿಕಲ್ಪನೆಗಳನ್ನು ಮೀರಿ ಹೋಗುತ್ತದೆ. ಆಧುನಿಕ ಮನವು ಸದ್ಯಕ್ಕೆ ಹೋರಾಟದ ಅವಸ್ಥೆಯಲ್ಲಿದೆ. ಅಹಂನ ಬಂಧನದಿಂದ ಕಳಚಿಕೊಂಡು ಬಿಡಬೇಕು ಎಂಬ ಯತ್ನದಲ್ಲಿದೆ. ಆದರೆ ಅದಿನ್ನೂ ಸಾಮಾನ್ಯ ವ್ಯಾವಹಾರಿಕ ಸ್ತರದಲ್ಲೇ ಇದೆ, ಬೌದ್ಧಿಕ ಆಲೋಚನೆಯ ಮಟ್ಟದಲ್ಲೇ ಇದೆ, ನೈತಿಕ ತಾರತಮ್ಯದ ಹಂತದಲ್ಲೇ ಇದೆ. ಆದರೆ ಅದಿನ್ನೂ ಆಧ್ಯಾತ್ಮದ ಸ್ತರವನ್ನು ಮುಟ್ಟಿಲ್ಲ. ರಾಷ್ಟ್ರ ಪ್ರೇಮ, ರಾಷ್ಟ್ರ ಭಕ್ತಿ, ವಿಶ್ವೈಕ್ಯತೆಯ ಭಾವ, ಸಮಾಜ ಸೇವೆ, ಸಾಮೂಹಿಕ ಹಾಗೂ ಮಾನವೀಯ ಧರ್ಮ ಆದರ್ಶಪ್ರಾಯ ಇವೆಲ್ಲವೂಗಳೂ ಕನಿಷ್ಠವೆಂದಲ್ಲ. ಅವು ಆಯಾ ಸ್ಥಾನದಲ್ಲಿ ಮೌಲಿಕವಾಗಿವೆ, ಶ್ರೇಷ್ಠವಾಗಿವೆ ಹಾಗೂ ಶ್ಲಾಘನೀಯವಾಗಿವೆ. ಇವುಗಳ ಮೂಲಕ ಮಾನವನು ತನ್ನ ಪ್ರಾಥಮಿಕ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ರಾಷ್ಟ್ರೀಯ ಅಹಂಗಳಿಂದ ನಿಧಾನವಾಗಿ ಮುಕ್ತನಾಗುತ್ತಾನೆ. ಇಲ್ಲವೆಂದಲ್ಲ, ಆಗೇ ಆಗುತ್ತಾನೆ. ಆದರೆ ಇವೇ ಪ್ರಮುಖ ಹಾಗೂ ಪ್ರಥಮ ಎಂದಲ್ಲ. ಇವು ಮಧ್ಯಮ ಹಂತದ ಆದರ್ಶಗಳು, ಇಲ್ಲಿ ವ್ಯಕ್ತಿಯು ವೈಯಕ್ತಿಕವಾಗಿ ತನ್ನ ಬುದ್ಧಿಬಲ, ನೈತಿಕಬಲ ಹಾಗೂ ಭಾವನಾತ್ಮಕ ಬಲಗಳ ಮೇಲಿಂದ ಇವನ್ನೆಲ್ಲ ಸಾಧಿಸುವ ಪ್ರಯತ್ನ ಮಾಡುತ್ತಾನೆ. ತಕ್ಕ ಮಟ್ಟಿಗೆ ಸರಿಯಾಗಿಯೇ ಮಾಡುತ್ತಾನೆ ಎಂಬುದೂ ಸಹ ನಿಜವೇ. ತನ್ನ ವೈಯಕ್ತಿಕ ಅಂತಃಸ್ವತ, ಸತ್ತೆಯ ಸ್ತರದಲ್ಲಿ ಇವುಗಳನ್ನು ಸಿದ್ಧಿಸಿಕೊಳ್ಳುತ್ತಾನೆ ಎಂಬುದೂ ಸುಳ್ಳಲ್ಲ. ತನ್ನ ವೈಯಕ್ತಿಕ ಸತ್ತೆಯನ್ನು ಜಗತ್ತಿನ ಇತರ ವೈಯಕ್ತಿಕ ಹಾಗೂ ಸಾಮೂಹಿಕ ಸತ್ತೆಯಲ್ಲಿ ಇದನ್ನು ಸಾಧಿಸಿಕೊಳ್ಳುತ್ತಾನೆ ಎಂದೇನೂ ಇದರಿಂದ ಅರ್ಥವಾಗುವುದಿಲ್ಲ. ಆದರೆ ಗೀತೆಯು ಇನ್ನೂ ಬಹಳ ಮುಂದಕ್ಕೆ ಹೋಗುತ್ತದೆ. ಎಲ್ಲವನ್ನು ಮೀರಿ ಮೂರನೆಯ ಅವಸ್ಥೆಯನ್ನು ಕೂಡ ದಾಟಿ ಸಾಧಕನು ವೈಯಕ್ತಿಕ ಪ್ರಜ್ಞೆಯನ್ನು ಅಪೂರ್ವ ಅವಸ್ಥೆಗೆ ಮುಟ್ಟುವ ಪ್ರಯತ್ನ ಮಾಡುತ್ತಾನೆ. ಈ ದೃಷ್ಟಿಯಿಂದ ನೋಡಿದರೆ ವಿಶ್ವಾತ್ಮಕತೆ, ರಾಷ್ಟ್ರೀಯತೆ ಮುಂತಾದವೆಲ್ಲವೂ ನಂತರದ ಪ್ರಾಮುಖ್ಯತೆ ಪಡೆಯುತ್ತದೆ.

ಭಾರತೀಯ ಸಾಮಾಜಿಕ ಪ್ರವೃತ್ತಿಯು ವ್ಯಕ್ತಿಯನ್ನು ಸಮಾಜದ ಬೇಡಿಕೆಗಳಿಗೆ ಸ್ಪಂದಿಸುವಂತೆ, ಓಗೊಡುವಂತೆ, ಅದರ ತೃಪ್ತಿಗಾಗಿ ದುಡಿಯಬೇಕೆಂದು ಬಯಸುತ್ತದೆ. ಆದರೆ ಭಾರತದ ಧಾರ್ಮಿಕ ಆಲೋಚನೆಯು ಹಾಗೂ ಆಧ್ಯಾತ್ಮಿಕ ಅನ್ವೇಷಣೆಯು ಯಾವಾಗಲೂ ವೈಯಕ್ತಿಕತೆಯ ನೆಲೆಯಲ್ಲಿಯೇ, ಹೆಚ್ಚು ಔದಾರ್ಯದಿಂದ ಅಲ್ಲಿಯೇ ಸುತ್ತುತ್ತದೆ. ಭಾರತೀಯ ದಾರ್ಶನಿಕ ಹಾಗೂ ತಾತ್ವಿಕ ಚಿಂತನೆಯು, ಗೀತೆಯಂತೆಯೇ, ಸಾಮಾನ್ಯವಾಗಿ ಮೊದಲು ವೈಯಕ್ತಿಕತೆಯ ಸಾಧನೆ, ಅಭಿವೃದ್ಧಿಯತ್ತಲೇ ಕೇಂದ್ರೀಕರಿಸುತ್ತದೆ. ವ್ಯಕ್ತಿಯ ವೈಯಕ್ತಿಕ ಅತ್ಯುಚ್ಚ ಬೇಡಿಕೆ ಏನು? ತಾನು ಪಡೆದ ಆಧ್ಯಾತ್ಮಿಕ ಸ್ವಾತಂತ್ರ್ಯ, ಮಹತಿ, ಜ್ಞಾನ, ಸಂಪತ್ತುಗಳನ್ನು ಅನುಸಂಧಾನ ಮಾಡುವುದರ ಬಗೆಗೇನೇ ಇದೆ. ತಾನು ದಾರ್ಶನಿಕನಾಗಬೇಕು, ದೃಷ್ಟಾರನಾಗಬೇಕು. ಆಧ್ಯಾತ್ಮಿಕ ಸಾಮ್ರಾಜ್ಯದ ಸಾಮ್ರಾಟನಾಗಬೇಕು ಎಂಬುದೇ ಅವನ ಆತ್ಯಂತಿಕ ಬಯಕೆ. ವೈದಿಕ ಋಷಿಗಳು ಆರಂಭದಿಂದಲೂ ಇಂಥ ಜನಾಂಗದ ಆದರ್ಶವನ್ನೇ ಕಂಡವರು. ಅಂಥ ಜನಾಂಗವನ್ನು ನಿರ್ಮಾಣ ಮಾಡಲು ಶ್ರಮಿಸಿದವರು. ವ್ಯಕ್ತಿಯು ತನ್ನನ್ನು ಮೀರಿ ಬೆಳೆಯಬೇಕು ಎಂಬುದೇ ಅವರ ಗುರಿಯಾಗಿತ್ತು. ತನ್ನೆಲ್ಲ ಗುರಿಗಳನ್ನು, ವ್ಯಕ್ತಿಗತ ಧ್ಯೇಯಗಳನ್ನು ಸುವ್ಯವಸ್ಥಿತ ಸಮಾಜದ ಗುರಿಯಲ್ಲಿ ಸೇರಿಸಿ ಬಿಡಬೇಕು, ವ್ಯಕ್ತಿಗತವಾದುದೇನನ್ನೂ ಉಳಿಸಿಕೊಳ್ಳಬಾರದೆಂದು ಅವರೆಂದಿಗೂ ಹೇಳಲಿಲ್ಲ. ಬದಲಾಗಿ ಅವರು ಹೇಳಿದ್ದು, ವ್ಯಕ್ತಿಯು ಬೆಳೆಯಬೇಕು. ವಿಶಾಲವಾಗಿ ಬೆಳೆಯಬೇಕು, ಎತ್ತರಕ್ಕೆ ಬೆಳೆಯಬೇಕು. ಪರಮ ದೈವೀ ಪ್ರಜ್ಞೆಯಲ್ಲಿ ಬೆಳೆದು ಒಂದಾಗಬೇಕು ಎಂದೇ ಆದೇಶಿಸಿದರು. ಗೀತೆಯು ಹೇಳುವ ನಿಯಮವು ತನ್ನ ವ್ಯಕ್ತಿತ್ವದ ಒಡೆಯನಾದ ಮಾನವನಿಗೆ, ಅಲೆ ಮಾನವನಿಗೆ, ದಿವ್ಯ ಮಾನವನಿಗೆ, ಅತ್ಯುತ್ತಮನಾದವನಿಗೆ ಅನ್ವಯಿಸುತ್ತದೆ. ಹಾಗೆಂದು ನೀಟ್ಸೆ ಹೇಳುವ ನಿರ್ಗುಣ ಅತಿಮಾನವನಲ್ಲ; ದಾನವ ಅಥವಾ ದೇವದೂತನಂತೆ ಏಕಾಂಗಿ ಅಲೆಮಾನವನೂ ಅಲ್ಲ; ಅಪೋಲೋ ಮಾನ್ಯ ಓಲಿಪಂಸ್ ಮಾನ್ಯ ಅಥವಾ ಡಾಯೋನಿಸ್ಸ ಮಾನ್ಯ ಏಕದೇಶೀಯ ಪ್ರಾವಿಣ್ಯ ಪಡೆದ ಅಲೆಮಾನವನೂ ಅಲ್ಲ; ಸಮತೋಲ ವಿಕಾಸ ಹೊಂದದ ಅತಿಮಾನವನೂ ಅಲ್ಲ ಎಂಬುದನ್ನು ಬೇರೆ ಹೇಳಬೇಕಾದ ಅವಶ್ಯಕತೆ ಇಲ್ಲ. ಗೀತೆಯು ಹೇಳುವ ಮಾನವನು ತನ್ನ ಸಂಪೂರ್ಣ ಅಸ್ತಿತ್ವವನ್ನು, ಪರಮಾತ್ಮ ತತ್ವಕ್ಕೆ ಅರ್ಪಿಸಿದ್ದಾನೆ, ಅವನ ಸ್ವಭಾವ, ಪ್ರಕೃತಿ, ಪ್ರಜ್ಞೆ ಎಲ್ಲವೂ ವಿಶ್ವಾತೀತ ಹಾಗೂ ವಿಶ್ವಾತ್ಮಕ ಈಶ್ವರನಿಗೆ ಶರಣಾಗಿ ಹೋಗಿದೆ. ತನ್ನ

ಕುಬ್ಜ (ಸಣ್ಣ) ಆತ್ಮವನ್ನು ಕಳೆದುಕೊಂಡು ಹಿರಿದಾದ ಆತ್ಮನಾಗಿ ಬೆಳೆದು, ದಿವ್ಯ ಆತ್ಮನಾಗಿ ನಿಂತಿದ್ದಾನೆ. ಇಂಥ ವ್ಯಕ್ತಿಯನ್ನು ಗೀತೆಯು ದೇವ ಮಾನವನ ಎಂದು ಕರೆಯುತ್ತದೆ.

ಮಾನವನು ತನ್ನನ್ನು ಮೀರಿ ತಾನು ಬೆಳೆಯಬೇಕು. ಅಪರಿಪೂರ್ಣ ಪ್ರಕೃತಿಯಿಂದ, ತ್ರೈಗುಣ್ಯಮಯಿ ಮಾಯೆಯಿಂದ ಬಹು ಎತ್ತರಕ್ಕೆ ಬೆಳೆದು, ದಿವ್ಯಸತ್, ದಿವ್ಯಚಿತ್ (ಪ್ರಜ್ಞೆ) ಹಾಗೂ ದೈತ್ಯ ಪ್ರಕೃತಿಯುಳ್ಳವನಾಗಬೇಕು. "ಮದ್‌ಭಾವಂ ಆಗತಂ" ಎಂಬುದೇ ಯೋಗದ ಮುಖ್ಯ ಗುರಿ. ಈ ಗುರಿಯು ಸಫಲವಾದರೆ, ವ್ಯಕ್ತಿಯು ಬ್ರಾಹ್ಮೀ ಸ್ಥಿತಿಯಲ್ಲಿದ್ದರೂ ಸಹ ಅವನ ಅಹಂ ಪ್ರಜ್ಞೆ ಇಲ್ಲವಾಗಿರುತ್ತದೆ. ತಾನೂ ಹಾಗೂ ಜಗತ್ತು ಯಾವುದನ್ನೂ ಅವನು ತನ್ನ ವ್ಯಕ್ತಿಗತ ಅಹಂ ಪ್ರಜ್ಞೆಯ ಮೂಲಕ ಅಳೆಯಲೆತ್ನಿಸುವುದಿಲ್ಲ. ಅವನು ಸಮಸ್ತ ಬ್ರಹ್ಮಾಂಡವನ್ನೇ ಈಶ್ವರನಲ್ಲಿ ಕಾಣುತ್ತಾನೆ ಹಾಗೂ ಪ್ರತಿ ವ್ಯಕ್ತಿಯಲ್ಲೂ ಪುರುಷೋತ್ತಮನಿರುವುದರ ಅರಿವು ಅವರಿಗಾಗುತ್ತದೆ. ಹಾಗಾದರೆ ಅವನ ನಡೆ, ನುಡಿ, ಭಾವ ಎಲ್ಲವೂ ಹೇಗಿರುತ್ತವೆ? ಅವನು ಹೇಗಿರುತ್ತಾನೆ? ಏನು ಮಾಡುತ್ತಾನೆ? ಅವನ ದೃಷ್ಟಿಕೋನದ ಪರಿಣಾಮ ಏನು? ಅವನ ವೈಯಕ್ತಿಕ ಹಾಗೂ ವಿಶ್ವಾತ್ಮಾಕ ಕಾರ್ಯಗಳ ಹಿಂದಿರುವ ಪ್ರೇರಣೆ ಏನು ಹಾಗಾದರೆ? ಇದು ಅರ್ಜುನನ ಪ್ರಶ್ನೆ. ಆದರೆ ಕೃಷ್ಣ ಉತ್ತರಿಸುವುದು ಬೇರೆ ವಿಧವಾಗಿ, ಯಾವ ನೆಲೆಯಿಂದ ಅರ್ಜುನನು ಪ್ರಶ್ನೆ ಮಾಡುತ್ತಾನೋ ಅದರಿಂದ ಭಿನ್ನವಾಗಿ ಬೇರೆ ದೃಷ್ಟಿಕೋನದಿಂದ ಉತ್ತರಿಸುತ್ತಾನೆ. ಇಲ್ಲಿ ಪ್ರೇರಣೆಯು ವೈಯಕ್ತಿಕವಾಗಿರುವುದಿಲ್ಲ. ಯಾವ ವೈಯಕ್ತಿಕ ಆಶೆಯೂ ಇಲ್ಲ; ಬೌದ್ಧಿಕ, ನೈತಿಕ, ಭಾವನಾತ್ಮಕ ಸ್ತರದಲ್ಲಿ ಯಾವ ಬಯಕೆ, ಇಚ್ಛೆ ಇಲ್ಲವೇ ಇಲ್ಲ, ಏಕೆಂದರೆ ಅವುಗಳನ್ನೆಲ್ಲ ಅವನು ತ್ಯಜಿಸಿದ್ದಾನೆ: ನೈತಿಕ ಪ್ರೇರಣೆಯೂ ಸಹ ಇಲ್ಲ, ಏಕೆಂದರೆ ಮುಕ್ತನಾದವನು ಕೆಳ ಸ್ತರದ ಪಾಪ ಪುಣ್ಯಗಳನ್ನು ಮೀರಿದ್ದಾನೆ. ಅವನು ಶುಭಾಶುಭಗಳನ್ನು ಮೀರಿದ ವೈಭವ ಪೂರ್ಣವಾದ ಪರಿಶುದ್ಧತೆಯ ಸ್ತರದಲ್ಲಿ ನೆಲೆನಿಂತಿದ್ದಾನೆ. ಅವನಲ್ಲೀಗ ಆತ್ಮ. ಪರಿಪೂರ್ಣತೆಗಾಗಿ ಮಾಡಬೇಕಾದ ಯಾವ ಕರ್ತವ್ಯ ಕರ್ಮಗಳೂ ಉಳಿದಿಲ್ಲ. ಅವೆಲ್ಲವನ್ನು ಅವನೀಗಾಗಲೇ ಪೂರೈಸಿದ್ದಾನೆ. ಹೀಗಾಗಿ ಆ ದೃಷ್ಟಿಯಿಂದ ಅವನಿಗೆ ಯಾವ ಆಧ್ಯಾತ್ಮಿಕ ಕರೆ, ಪ್ರೇರಣೆ ಇರುವುದಿಲ್ಲ. ಈಗ ಅವನಿಗಿರುವುದೊಂದೇ ಒಂದು, ಅದು ಲೋಕ ಸಂಗ್ರಹ, ಇಲ್ಲವೇ ಲೋಕದ ಸಂಗ್ರಹಂ. ಜನರನ್ನು ಲೋಕದ ಸಮಸ್ತ ಜನರನ್ನು

ಸಾಮಾನ್ಯ ಮಾನವ ಸ್ತರದಿಂದ ವಿಮುಖರನ್ನಾಗಿಸಿ ಉನ್ನತವಾದ ದಿವ್ಯ ಜೀವನದ ಎತ್ತರಕ್ಕೆ ಎತ್ತರಿಸುವುದೇ ಅವನ ಹಿಂದಿರುವ ಕಾರ್ಯಗಳ ಉದ್ದೇಶ. ಅದೇ ಪ್ರೇರಣೆ.

ಸಾಯುಜ್ಯ, ಸಾಲೋಕ್ಯ, ಸಾದೃಶ್ಯ ಇವು ಬೆಳೆಯಬೇಕಾಗಿರುವ ಜೀವನ ಅಥವಾ ಅಂತರಾತ್ಮನ ಸ್ಥಿತಿಗಳು. ಸಾಧರ್ಮ್ಯವೆಂದರೆ ಎಲ್ಲ ರೀತಿಯ ಕೆಲಸಗಳನ್ನು ತ್ಯಜಿಸಿ ಸುಮ್ಮನಿರುವುದಲ್ಲ. ಅದು ಪರಮಾತ್ಮನ ಏಕೈಕ ನಿಯಮ, ನಾವು ಮಾಡುವ ಕರ್ಮಗಳು ಪರಮಾತ್ಮ ಹಾಗೂ ಅವನ ಜೊತೆಗಿನ ಸಂಬಂಧದ ಏಕಮಾತ್ರ ಸೂತ್ರವಾಗುತ್ತ ಹೊರಟಿದೆ. “ಕಿಂ ಪ್ರಭಾಷಿತ, ಕಿಮಾನೇತ ವ್ರಜೇತ ಕಿಮ್” ಯಾವ ಜೀವರಾಶಿಯೂ ಅಧ್ಯಾಯದಲ್ಲಿ, ಗೊಂದಲದಲ್ಲಿ, ಅನುಮಾನದಲ್ಲಿ ಬೀಳದಂತೆ ತಡೆ ಹಿಡಿಯಬೇಕಾಗಿದೆ. ವ್ಯವಹಾರಿಕವೇ ಆಗಲಿ, ಪಾರಮಾರ್ಥಿಕವೇ ಆಗಲಿ ಮಿಥ್ಯಾ ಗ್ರಹಿಕೆಯಾಗಬಾರದು. ಅಂಥ ಮಿಥ್ಯಾ ಗ್ರಹಿಕೆಯಿಂದ ವಿನಾಶವಾಗಬಾರದೆಂದು ಅವನು ಕಾಯಬೇಕಾಗಿದೆ. ಜಗತ್ತೇನೋ ಅಜ್ಞಾನದ ಕತ್ತಲಲ್ಲೇ ಬದುಕುತ್ತ, ಅದರಲ್ಲೇ ತಡಕಾಡುತ್ತ ಮುಂದುವರಿಯುತ್ತಲಿದೆ; ಇದನ್ನು ತಡೆದು, ಅಜ್ಞಾನವನ್ನು ಅಡ್ಡಗಟ್ಟದೇ ಹಾಗೆಯೇ ಬಿಟ್ಟರೆ ಜಗತ್ತು ಹಾಗೆಯೇ ಅನಂತ ಕಾಲದವರೆಗೆ ಮುಂದುವರಿಯಬಹುದು. ಅಂತೆಯೇ ಅದರ ಅಜ್ಞಾನದ ದಾರಿಯ ಮೇಲೆ ಬೆಳಕು ಚೆಲ್ಲಬೇಕಾಗಿದೆ. ತನ್ನ ಶಕ್ತಿಯಿಂದ, ಆಡಳಿತದಿಂದ, ತನ್ನ ನಡತೆಯ ಉದಾಹರಣೆಯ ಮೂಲಕ, ಕಣ್ಣಿಗೆ ಕಾಣುವಂಥ ಆದರ್ಶ ಜೀವನ ನಡೆಸುತ್ತ, ಕಣ್ಣಿಗೆ ಕಾಣದ ಅದೃಶ್ಯ ಮೌಲ್ಯಗಳನ್ನು ಪ್ರಭಾವಿತಗೊಳಿಸುತ್ತ ಅವನು ಬದುಕಬೇಕಾಗಿದೆ. ಯಾರು, ಸಾಮಾನ್ಯ ಸ್ತರಕ್ಕಿಂತ ಎತ್ತರವಾದ ಸ್ಥಿಯಲ್ಲಿದ್ದಾರೋ, ಸಾಮಾನ್ಯ ಸಾಮೂಹಿಕ ಸ್ತರಕ್ಕಿಂತ ಬಹು ಎತ್ತರದಲ್ಲಿದ್ದಾರೋ ಅವರೇ ನಿಜವಾಗಿ ಮನುಕುಲದ ನಾಯಕರು. ಏಕೆಂದರೆ ಹೇಗೆ ಬದುಕ ಬೇಕೆಂಬುದನ್ನು ತೋರಿಸಿಕೊಡಬಲ್ಲ ನಿಜವಾದ ಮಾರ್ಗದರ್ಶಕರು ಅವರೇ, ಸಾಮಾನ್ಯ ಜನರೆಲ್ಲರಿಗೆ ಒಂದು ಮಾದರಿಯನ್ನು ರೂಪಿಸಿ ಅದನ್ನು ಪಡೆಯುವಂತೆ ಪ್ರೇರೇಪಿಸಬಲ್ಲವರು ಅವರೇ – ಆದರೆ ದಿವ್ಯನಾಗಿ ಮಾರ್ಪಟ್ಟ ವ್ಯಕ್ತಿಯು ಮಾತ್ರ ಸಾಮಾನ್ಯನಲ್ಲ. ಅವನು ಭೀರುವ ಪ್ರಭಾವವನ್ನು, ಶಬ್ದಗಳಲ್ಲಿ ಅಳೆಯಲಿಕ್ಕಾಗುವುದಿಲ್ಲ. ಯಾವ ಸಾಮಾನ್ಯ ಶ್ರೇಷ್ಠಾತಿಶ್ರೇಷ್ಠ ಮಾನವ ಬೀರಬಹುದೋ ಅದಕ್ಕಿಂತ ಎಷ್ಟೋಪಟ್ಟು ಅಧಿಕ ಪ್ರಭಾವ ಬೀರಬಲ್ಲನು ಮತ್ತು ಒಂದು ಜೀವಂತ ನಿದರ್ಶನವನ್ನು ಕಡೆದು

ನಿಲ್ಲಿಸಬಲ್ಲವನು. ಅಸಾಮಾನ್ಯವಾದ ಈ ಮಾನವೋತ್ತಮನು ಮಾನವ ಶ್ರೇಷ್ಠನು ಯಾವ ಉದಾಹರಣೆಯನ್ನೂ ಲೋಕದಿದಿರು ನಿಲ್ಲಿಸುತ್ತಾನೆ? ಆದರ್ಶ ವರ್ತನೆಯ ನಿಯಮವೆಂದು ಯಾವ ಆಚರಣ ನಿಯಮವನ್ನು ಅವನು ಜನರ ಮುಂದಿರಿಸುತ್ತಾನೆ?

ಈ ವಿಚಾರವನ್ನು ಇನ್ನಷ್ಟು ಸ್ಪಷ್ಟಪಡಿಸಲು, ಅದನ್ನು ಪರಿಪೂರ್ಣವಾಗಿ ಅರ್ಥೈಸಿಕೊಡಲು, ಅವತಾರ ಪುರುಷನಾದ ಗುರುವೂ ಗೀತಾಚಾರ್ಯನೂ ಆದ ಕೃಷ್ಣನು ತನ್ನ ಉದಾಹಾರಣೆಯನ್ನೇ ಕೊಡುತ್ತಾನೆ. “ಅರ್ಜುನ ನನ್ನನ್ನು ನೋಡು, ನಾನು ಕರ್ಮ ಮಾರ್ಗದಲ್ಲಿಯೇ ಸದಾ ನಿರತನಾಗಿರುತ್ತೇನೆ. “ಈ ದಾರಿಯನ್ನೇ ಎಲ್ಲರೂ ಅನುಸರಿಸಲಿ, ನೀನೂ ಕೂಡ ಕರ್ಮ ಯೋಗದಲ್ಲಿ ನಿಷ್ಠನಾಗಿರು. ನಾನು ಹೇಗೆ ಮಾಡುತ್ತೇನೋ ನೀನು ಕೂಡ ಹಾಗೆಯೇ ಆಚರಣೆ ಮಾಡು. ನಿಜವಾಗಿ, ನಾನು ಈ ಮೂಜಗದೊಳಗೆ ಏನನ್ನೂ ಮಾಡಬೇಕಾಗಿಲ್ಲ. ನನಗೆ ಅವುಗಳಿಂದ ಆಗಬೇಕಾದ್ದೇನೂ ಇಲ್ಲ. ಅದರಿಂದ ಯಾವ ಲಾಭವೂ ನನಗಿಲ್ಲ. ಬ್ರಹ್ಮಾಂಡದಲ್ಲಿರುವ ಸಮಸ್ತ ವಸ್ತು, ಪಶು, ಪಕ್ಷಿ ಪ್ರಾಣಿ, ವನ, ಗಿಡ, ಮನುಷ್ಯರು ಎಲ್ಲರೂ ನನ್ನ ಅಧೀನರೇ. ನಾನು ಈ ಬ್ರಹ್ಮಾಂಡಕ್ಕಿಂತ ಬಹಳ ಉನ್ನತನಾಗಿದ್ದೇನೆ. ನಾನು ಯಾವುದರ ಮೇಲೂ, ಯಾರ ಮೇಲೂ ಅವಲಂಬಿಸಿಲ್ಲ. ಈ ಮೂಜಗದೊಳಗೆ ನನಗಿದು ಬೇಕು ಅನ್ನುವಂಥದೇನೂ ಇಲ್ಲವೇ ಇಲ್ಲ. ಆದರೂ ನಾನು ನನ್ನ ಕಾರ್ಯ ಮಾಡುತ್ತೇನೆ. ನಿನ್ನ ಆದರ್ಶವಾದರೂ ಸಹ ಇದೇ ಆಗಿರಬೇಕು. ನೀನು ಮಾಡುವ ಕಾರ್ಯದ ಹಿಂದೆ ಇದೇ ತತ್ವ ಇರಬೇಕು. ನಾನು ಭಗವಂತ, ನಾನು ಈಶ್ವರ, ನಾನು ನಿಯಮವೂ ಹೌದು, ನಾನು ಮಾದರಿಯೂ ಹೌದು. ನಾನು ಜನರು ನಡೆಯುವ ಸಲುವಾಗಿ ದಾರಿ ಮಾಡಿಕೊಡುತ್ತೇನೆ. ಜನರಿಗಾಗಿ, ಅವರ ಆಚರಣೆಗಾಗಿ ದಾರಿ ಮಾಡಿಕೊಡುವುದೇ ನನ್ನ ಗುರಿ. ಅದೇ ನನ್ನ ಕೆಲಸ. ನಾನೇ ಗುರಿಯೂ ಹೌದು, ನಾನೇ ದಾರಿಯೂ ಹೌದು, ಪ್ರಕ್ರಿಯೆಯೂ ಹೌದು, ಸಾಧನೆಯೂ ಹೌದು, ಸಿದ್ಧಿಯೂ ಹೌದು. ನಾನು ಇದೆಲ್ಲವನ್ನು ಮಾಡುವುದು ವಿಶ್ವಾತ್ಮಕವಾದ ರೀತಿಯಲ್ಲಿ, ವಿಶಾಲವಾದ ರೀತಿಯಲ್ಲಿ, ಎಲ್ಲರ ಕಣ್ಣಿಗೆ ಕಾಣುವ ರೀತಿಯಲ್ಲಿ; ಆದರೆ ಅದೃಶ್ಯವಾಗಿದ್ದುಕೊಂಡೇ ನಾನು ಬಹಳ ಕಾರ್ಯ ಮಾಡುತ್ತೇನೆ. ನಾನೇನು ಮಾಡುತ್ತೇನೆಂಬುದು ಜನರಿಗೆ ಪೂರ್ಣ ರೂಪದಿಂದ ತಿಳಿಯುವುದೇ ಇಲ್ಲ, ನೀನು ನಿನಗೆ ಎಲ್ಲಾ ತಿಳಿದಿದೆ

"ವಿಮೃಶ್ಯ ಹಿತ ಮಹಿತಂ" ತಿಳಿದು ಮಾಡುವ ಶಕ್ತಿ ಇದೆ, ನೀನು ದೈವೀ ಮಾನವನಂತನಾಗಿರುವಿ ನೀನೀಗ ಭಗವಂತನ ವೈಯಕ್ತಿಕ ಅಥವಾ ವ್ಯಕ್ತೀಕೃತ ಶಕ್ತಿಯಾಗಿ ಬೆಳೆಯಬೇಕು. ನೀನು ಮಾನವನೂ ಹೌದು, ದೈವೀ ಪುರುಷನೂ ಹೌದು, ನೀನು ದೈವೀ ನಿದರ್ಶನವಾಗಿ ನಿಲ್ಲಬೇಕು. ನಾನು ನನ್ನ ಅವತಾರಗಳಲ್ಲಿ ಹೇಗಿರುವೆನೋ ನೀನೂ ಕೂಡ ಹಾಗೆಯೇ ಆಗಬೇಕು. ಬಹಳಷ್ಟು ಜನ ಅವಿದ್ಯೆಯಲ್ಲಿಯೇ ಜನಿಸುತ್ತಾರೆ. ಅದರಲ್ಲೇ ಬದುಕುತ್ತಾರೆ. ದಾರ್ಶನಿಕರಾದವರು ಜ್ಞಾನದಲ್ಲಿ ಬದುಕುತ್ತಾರೆ, ಅದರಲ್ಲೇ ನೆಲೆಸಿರುತ್ತಾರೆ. ಆದರೆ ಅಂಥವರು ಭಯಾನಕ ಅಥವಾ ಆತಂಕಕಾರಕ ಉದಾಹರಣೆಗಳನ್ನು ನೀಡಿ ಜನರನ್ನೂ ಗೊಂದಲದಲ್ಲಿ ಕೆಡವಬಾರದು. ತನ್ನ ಜ್ಞಾನ ಮಾರ್ಗವೇ ಶ್ರೇಷ್ಠವೆಂದು ಹೇಳುತ್ತ, ಜಗತ್ತಿನಲ್ಲಿ ಮಾಡಲೇಬೇಕಾದ ಕರ್ಮಗಳನ್ನು ನಿರಾಕರಿಸಿಬಿಡಬಾರದು. ತನ್ನ ಉದಾಹರಣೆ ನೀಡಿದಂತೆ ಮಾಡಿ ಕರ್ಮದ ದಾರವನ್ನು ಮಧ್ಯದಲ್ಲಿಯೇ ಕತ್ತರಿಸಲು ಪ್ರಯತ್ನಿಸಬಾರದು. ನಾನು ಯಾವ ಮಾರ್ಗವನ್ನೂ ಹೆಣೆದಿದ್ದೇನೆಯೋ, ನಿರ್ಮಾಣ ಮಾಡಿದ್ದೇನೆಯೋ ಅದರಲ್ಲಿ ಕೆಲ ಸಿಕ್ಕುಗಳಿವೆ, ಗಂಟುಗಳಿವೆ, ಅಡಚಣೆಗಳಿವೆ, ಅನೇಕ ಏಳು ಬೀಳುಗಳಿವೆ. ಆ ವ್ಯವಸ್ಥಿತ ಶ್ರೇಣೀಬದ್ಧ ಮೆಟ್ಟಲುಗಳ ಮೇಲೆ ಹೊರಟಿರುವ ಮನಗಳಲ್ಲಿ ಗೊಂದಲ ಹುಟ್ಟಿಸಬಾರದು. ಏನೊಂದು ತಪ್ಪು ಕಲ್ಪನೆ ಮಾಡಿಕೊಂಡು ಯಾರೂ ಮಾರ್ಗವಿಮುಖರಾಗ–ಕೂಡದೆಂಬ ಕಾಳಜಿಯನ್ನು ಜ್ಞಾನಿಯಾದವನು ಮಾಡಬೇಕು. ಅಪರಾ ಪ್ರಕೃತಿಯಿಂದ ಪರಾಪ್ರಕೃತಿಯ ಕಡೆಗೆ ಮಾನವದಾರಿ ಸವೆಸಬೇಕು. ಮಾರ್ಗಕ್ರಮಣ ಮಾಡಬೇಕೆಂಬ ಅಪೂರ್ವ ಕಾಳಜಿಯಿಂದಲೇ ಈ ಮಾನವನ ಜೀವನದ ಎಲ್ಲ ಕ್ಷೇತ್ರಗಳನ್ನು ನಾನು ಸಂಯೋಜನೆ ಮಾಡಿದ್ದೇನೆ. ಅವುಗಳಲ್ಲಾತ ಗೊಂದಲವನ್ನುಂಟು ಮಾಡಿ, ದಾರಿ ತಪ್ಪಬಾರದು. ತಪ್ಪಿಸಬಾರದು. ಮಾನವನ ಕರ್ಮಗಳನ್ನು, ಚಟುವಟಿಕೆಗಳನ್ನು ನಾನೊಂದು ರೀತಿಯಲ್ಲಿ ಅವನು ಕೆಳಗಿನ ಹಂತದಿಂದ ಮೇಲಿನ ಹಂತಕ್ಕೆ ಏರುತ್ತ ಹೋಗುವ ಪ್ರಗತಿಯ ದಾರಿಯನ್ನು ನಿರ್ಧಾರ ಮಾಡಿದ್ದೇನೆ; ಅನಾತ್ಮದಿಂದ ಆತ್ಮ, ಅದೈವೀ ಸಂಗತಿಗಳಿಂದ ದೈವೀ ಸಂಗತಿಗಳೆಡೆ ಹೋಗುವ ಮಾರ್ಗವನ್ನು ನಿರ್ಧಾರ ಮಾಡಿದ್ದೇನೆ. ಕಟ್ಟಿದ್ದೇನೆ. ಮಾನವನ ಎಲ್ಲ ಕರ್ಮಗಳು ನಿಜವಾಗಿ ದೈವ ಸಾಕ್ಷಾತ್ಕಾರ ಮಾಡಿಕೊಂಡವನ ದಾರಿಯಲ್ಲೇ ಸಾಗಬೇಕು. ಎಲ್ಲ ವೈಯಕ್ತಿಕತೆ, ಸಾಮಾಜಿಕ ಕಾರ್ಯ, ಬುದ್ಧಿಯ ಎಲ್ಲ ಕಾರ್ಯಗಳು ಹೃದಯ ಹಾಗೂ ಶಾರೀರಿಕ ಕರ್ಮಗಳು ಈಗಲೂ ಸಹ

ಅವನವೇ, ಅವನೇ ಮಾಡುತ್ತಾನೆ. ಆದರೆ ಅವಾವೂ ಅವನ ವೈಯಕ್ತಿಕ ಸ್ವಾರ್ಥಕ್ಕಾಗಿ ಅಲ್ಲ. ಎಲ್ಲವೂ ಈಶ್ವರನಿಗಾಗಿ, ಪರಮಾತ್ಮನಿಗಾಗಿ, ವಿಶ್ವದಲ್ಲಿ, ವಿಶ್ವದ ಸಕಲ ಜೀವರಾಶಿಗಳಲ್ಲಿ ವಾಸಿಸುವ ಭಗವಂತನಿಗಾಗಿ ವಿಶ್ವದ ಸಕಲ ಜೀವರಾಶಿಗಳೂ ಸಹ ಭಗವಂತನು ಮುನ್ನಡೆದಂತೆ ಅವನ ಜೊತೆ ಮುಂದುವರಿಯಲೇ ಬೇಕು. ಕರ್ಮ ಯೋಗದ ಮೂಲಕ ಎಲ್ಲರೂ ತಮ್ಮಂತರಂಗದಲ್ಲಿರುವ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವತ್ತ ಪ್ರವೃತ್ತರಾಗಬೇಕು. ಮೇಲ್ನೋಟಕ್ಕೇನೊ ಅವನ ಕರ್ಮಗಳಲ್ಲಿ ಮತ್ತು ಇತರೆ ಸಾಮಾನ್ಯ ಜನರ ಕೆಲಸ ಕಾರ್ಯಗಳಲ್ಲಿ ವಿಶೇಷ ಭೇದ ಕಂಡುಬರಲಿಕ್ಕಿಲ್ಲ; ಯುದ್ಧ, ರಾಜ್ಯ, ಆಡಳಿತ, ನಿಯಮನ, ಬೋಧನೆ, ವಿಚಾರ ಪ್ರವೃತ್ತಿ, ಮಾನವನ ಉಳಿದೆಲ್ಲ ಸಾಮಾನ್ಯ ವ್ಯವಹಾರಿಕ ಕಾರ್ಯಗಳು ಎಲ್ಲವೂ ಭಿನ್ನ ಅನಿಸಲಿಕ್ಕಿಲ್ಲ ಸಾಮಾನ್ಯವೇ ಅನಿಸಬಹುದು. ಆದರೆ ಯಾವ ಪ್ರೇರಣೆಯಿಂದ, ಯಾವ ಸತ್ಯದ ಮೂಲಕ ಅವನು ಹಾಗೆ ಪ್ರವರ್ತಿಸುತ್ತಿದ್ದಾನೆ ಎಂಬುದು ಮುಖ್ಯವಾಗುತ್ತದೆ ಮತ್ತು ತೀರಾ ಭಿನ್ನವಾಗಿರುತ್ತದೆ. ನಿಜವಾಗಿ ಆಂತರಿಕ ಸತ್ವವೇ ಅಸಂಖ್ಯಾತ ಜನರ ಮೇಲೆ ಪ್ರಭಾವ ಬೀರಿ ಅವನೆಡೆಗೆ ಆಕರ್ಷಿತರನ್ನಾಗಿಸುತ್ತದೆ, ಅವನ ದಾರಿಯಲ್ಲಿ ನಡೆಯಲು ಸ್ಫೂರ್ತಿ ತುಂಬುತ್ತದೆ. ಅದೊಂದು ಅದ್ಭುತ ಸನ್ನೆಗೋಲು ಇದ್ದ ಹಾಗೆ; ಅಗಣಿತ ಜನ ಸಮೂಹವನ್ನೇ ಹಿರಿದಾದ ಎತ್ತರಕ್ಕೆ ಸುಲಭವಾಗಿ ಎತ್ತರಿಸಬಲ್ಲ ಸಾಮರ್ಥ್ಯ ಅದರಲ್ಲಿದೆ.

ಭಗವಂತನು ಇಲ್ಲಿ ತನ್ನದೇ ಜೀವಂತ ಉದಾಹರಣೆ ಕೊಡುವ ರೀತಿ ತುಂಬ ವಿಶಿಷ್ಟವಾಗಿದೆ. ಮುಕ್ತನಾದ ಮಾನವನು ಹೇಗಿರುತ್ತಾನೆ ಎಂಬುದನ್ನು ತನ್ನ ಮೂಲಕ ಕೃಷ್ಣ ತೋರಿಸುವ ರೀತಿ ಅನನ್ಯವಾಗಿದೆ ಮತ್ತು ಅದು ನಿಜವಾಗಿ ಇಡೀ ಗೀತೆಯು ಹೇಳುವ ದಿವ್ಯ ಕರ್ಮಗಳ ಆಧಾರ ತತ್ವನ್ನು ಸ್ಪಷ್ಟವಾಗಿ ತೋರಿಸಿಕೊಡುವಂತಿದೆ. ಮುಕ್ತನಾದ ಮಾನವನು ಭಗವಂತನಲ್ಲಿಯೇ ಸಂಪೂರ್ಣವಾಗಿ ಮುಳುಗಿ ಹೋಗಿದ್ದಾನೆ. ದೈವೀ ಸ್ವಭಾವವೇ ಅವನಲ್ಲಿ ಇಳಿದು ಬಂದಿದೆ. ಅಂತೆಯೇ ಅವನ ಕಾರ್ಯಗಳೂ ಸಹ ದೈವೀ ಸ್ವಭಾವಕ್ಕೆ ಅನುಗುಣವಾಗಿಯೇ ಇರಬೇಕು ಮತ್ತು ಇರುತ್ತವೆ. ದೈವೀ ಪ್ರಕೃತಿ ಅಥವಾ ದೈವೀ ಸ್ವಭಾವ ಅಂದರೇನು? ಅದನ್ನು ಸಂಪೂರ್ಣವಾಗಿ ಅಕ್ಷರ ಪುರುಷನ, ನಿಷ್ಕ್ರಿಯ, ನಿಶ್ಚಲ, ನಿರ್ವೈಯಕ್ತಿಕ ಪುರುಷನ ಪ್ರಕೃತಿ ಎಂದು ಅರ್ಥೈಸಬಾರದು. ಏಕೆಂದರೆ ಅದು ಮುಕ್ತಾತ್ಮನನ್ನು ನಿಷ್ಕ್ರಿಯತೆಗೆ, ಅಕರ್ಮ ಸ್ಥಿತಿಗೆ ಒಯ್ಯುತ್ತದೆ. ಹಾಗೆಂದು

ಅದು ಪೂರ್ಣಾಕ್ಷರ ಪುರುಷನ ಅಂದರೆ ವ್ಯಕ್ತಿಗತ ಅಥವಾ ಪ್ರಕೃತಿಗಧೀನನಾದ ಪುರುಷನ ಪ್ರಕೃತಿಯೂ ಅಲ್ಲ. ಏಕೆಂದರೆ ಅದು ಅವನನ್ನು ಪುನಃ ಅವನ ವ್ಯಕ್ತಿತ್ವಕ್ಕೆ, ವೈಯಕ್ತಿಕತೆಗೆ, ನಿಮ್ನ ಪ್ರಕೃತಿಯ ಅಧೀನಕ್ಕೆ ಒಯ್ಯುತ್ತದೆ. ಪುರುಷೋತ್ತಮನಲ್ಲಿ ಮಾತ್ರ ಇವರೆಡನ್ನೂ ಸರಿಯಾಗಿ ಸಮತೂಗಿಸಬಲ್ಲ ಕ್ಷಮತೆ ಇದೆ. ಅವನು ಪರಾದೈವತ್ವವು ಎಲ್ಲವನ್ನೂ ಸಮನ್ವಯಗೊಳಿಸಿ ಪುರುಷನ ಅಸ್ಮಿತೆಯ ಪರಮ ರಹಸ್ಯವನ್ನು ಅನಾವರಣಗೊಳಿಸುವ ಕ್ಷಮತೆ ಇದೆ. ರಹಸ್ಯಂ ಹ್ಯೇತದನುತ್ತಮಮ್. ಅವನನ್ನು ಕರ್ತೃ ಎಂದು, ಕೆಲಸಗಳನ್ನು ಮಾಡುವ ಕರ್ತಾರ ಎಂದು ತಿಳಿಯಲಾಗದು. ಅವನು ಪ್ರಕೃತಿಗಧೀನನಾಗಿ ಯಾವ ಕರ್ಮಗಳನ್ನು ಮಾಡುವುದಿಲ್ಲ ಭಗವಂತನೇ ಅವನೊಳಗೆ ನಿಂತು ಎಲ್ಲಾ ಕರ್ಮ್ಮಗಳನ್ನು ನೆರವೇರಿಸುತ್ತಿರುತ್ತಾನೆ. ಅವನ ಶಕ್ತಿ, ಪ್ರಜ್ಞೆ, ಚೈತನ್ಯ ಎಲ್ಲದರ ಮೂಲಕ ಪರಮಾತ್ಮನೇ ಕಾರ್ಯ ಮಾಡುತ್ತಿರುತ್ತಾನೆ. ಆದರೆ ಅವನು ಎಲ್ಲ ಕರ್ಮಗಳಿಂದ ಮೇಲೆ ನಿಂತಿರುತ್ತಾನೆ. ಅವನು ಯಾವ ಕರ್ಮಗಳಿಗೂ ಬದ್ಧನಾಗಿರುವುದಿಲ್ಲ; ಹಾಗೆಂದು ಪ್ರಕೃತಿಯ ಕರ್ಮಗಳಿಗೆ ಅಭ್ಯಸ್ಥನಾಗಿದ್ದಾನೆ. ಅಭ್ಯಾಸ ಬಲದಿಂದ ಹಾಗೆ ಮಾಡುತ್ತಾನೆ ಅಂತಲೂ ಅರ್ಥವಲ್ಲ. ಅವನು ಈ ಎಲ್ಲ ವಿಕಲ್ಪಗಳಿಂದ ದೂರಾಗಿದ್ದಾನೆ. ಅವನು ಕೆಲಸ ಮಾಡುತ್ತನಾದರೂ, ಮಾಡಿಯೂ ಮಾಡದವನ ಹಾಗೆಯೇ ಇದ್ದಾನೆ. ಕರ್ತಾರಂ ಅಕರ್ತಾರಮ್. ಕೃಷ್ಣ ಸ್ಪಷ್ಟವಾಗಿ ಹೇಳುತ್ತಾನೆ; ಈ ಚತುರ್ವರ್ಣಗಳನ್ನು ನಿರ್ಮಾಣ ಮಾಡಿದವನು ನಾನೇ, ಅವುಗಳ ಮೂಲಕ ಕರ್ಮ ಮಾಡುವವನು ಕೂಡ ನಾನೇ. ಆದರೆ ನಾನು ಅವಿನಾಶಿ, ನಾನು ಯಾವ ಕರ್ಮಗಳನ್ನೂ ಸ್ವತಃ ಮಾಡುವುದಿಲ್ಲ. ಯಾವ ಕರ್ಮಗಳೂ ನನಗೆ ಅಂಟಿಕೊಳ್ಳುವುದಿಲ್ಲ. 'ನ ಲಿಂಪತಿ', ನಾನು ಕರ್ಮ ಮಾಡುವುದಿಲ್ಲ. ಕರ್ಮ ಫಲದ ಬಯಕೆ ಕೂಡ ನನ್ನಲ್ಲಿಲ್ಲ? ಆದರೆ ಹಾಗೆಂದು, ಅವನು ನಿಷ್ಕ್ರಿಯ, ತಟಸ್ಥ, ಉದಾಸೀನ, ಸಾಕ್ಷಿಯೂ ಅಲ್ಲ, ಅವನೇ ಎಲ್ಲ ಕರ್ಮಗಳನ್ನು ಎಲ್ಲಾ ಹಂತಗಳಲ್ಲೂ ಮಾಡುತ್ತಾನೆ. ತನ್ನ ಶಕ್ತಿಯ ಮೂಲಕವೇ ಮಾಡುತ್ತಾನೆ. ಪ್ರತಿಯೊಂದು ಚಲನೆ, ಜಗದ ಪ್ರತಿಯೊಂದು ಕಣದಲ್ಲೂ ಆ ಪರಮಾತ್ಮನ ಸಾನಿಧ್ಯ ಇದೆ. ಅವನಿದ್ದಾನೆ, ಅವನ ಸಂಪೂರ್ಣ ಪ್ರಜ್ಞೆ ಕಣ ಕಣದಲ್ಲೂ ಅವಿಭಾಜ್ಯವಾಗಿ ಇದೆ. ಅದೆಲ್ಲವೂ ಅವನ ಸಂಕಲ್ಪದಂತೆ ವರ್ತಿಸುತ್ತದೆ, ಅವನ ಜ್ಞಾನದ ಮೂಲಕ ಸಂರಚಿತವಾಗಿದೆ, ರೂಪಗೊಂಡಿದೆ.

ಅವನು ಪರಮ ಪುರುಷೋತ್ತಮನು, ಅವನಿಗೆ ಯಾವ ಗುಣಗಳೂ ಇಲ್ಲ. ಅವನು ನಿರ್ಗುಣನು, ಆದರೆ ಎಲ್ಲ ಗುಣಗಳು ಇರುವುದೂ ಅವನಲ್ಲಿಯೇ. ಅವನು ಗುಣಗಳ ಬೀಜ ಸ್ವರೂಪ – ನಿರ್ಗುಣೋಗುಣೀ, ಅವನು ಪ್ರಕೃತಿ ಬದ್ಧನಲ್ಲ. ಕರ್ಮ ಬದ್ಧನಲ್ಲ. ನಮ್ಮ ವ್ಯಕ್ತಿತ್ವದಂತೆ ಅವನು ಮಾತ್ರ ಯಾವ ಗುಣಗಳನ್ನು ಹೊಂದಿಲ್ಲ. ಗುಣಗಳ ಮೊತ್ತವೂ ಅವನೇ ಎಂದೂ ಹೇಳಲು ಬರುವುದಿಲ್ಲ. ಮಾನಸಿಕ ನೈತಿಕ ಭಾವನಾತ್ಮಕ, ಪ್ರಾಣಿಕ, ಭೌತಿಕ ಹೀಗೆ ಯಾವ ವಿಶಿಷ್ಟ ಪ್ರವೃತ್ತಿಗಳೂ ಅವನಲ್ಲಿ ಇಲ್ಲ. ತನ್ನ ಸ್ವ–ಇಚ್ಛೆಯಿಂದ ಏನನ್ನು ಬೇಕಾದರೂ ಆತ ಪಡೆಯಬಹುದು, ಸಾಧಿಸಬಹುದು. ಅವನ ಸಂಕಲ್ಪನೇ ಸಿದ್ಧಿ. ಅವನು ಅನಂತ ಸತ್ತೆ. ಉಳಿದೆಲ್ಲ ಗುಣಗಳು, ವ್ಯಕ್ತಿತ್ವ, ಪ್ರವೃತ್ತಿ, ಅಭಿವ್ಯಕ್ತಿ ಎಲ್ಲವೂ ಅವನ ಸಂಭೂತಿಗಳು. ಅವನು ಅಪಾರತೆಯನ್ನು ನಿಸ್ಸೀಮತೆಯನ್ನು ಯಾವ ಮಾನಕಗಳೂ, ಅಳತೆಗಳೂ ಶ್ರುತಪಡಿಸಲಾರವು. ಆಕಾರಗಳು, ಸಂಖ್ಯೆಗಳು ಇವೆಲ್ಲವೂ ನಮ್ಮ ಪ್ರಕಟ ವಿಶ್ವದ ಗಣಿತೀಯ ಮಾನದಂಡಗಳು. ಅವನಿಗೆ ಇವು ಯಾವುವೂ ಅನ್ವಯಿಸುವುದಿಲ್ಲ. ಹಾಗೆಂದು ಅವನು ನಿರ್ಗುಣ, ನಿರಾಕಾರ, ನಿರ್ವ್ಯಕ್ತಿಕ ಅವ್ಯಾಕೃತ ತತ್ವವೇ? ಅಂದರೆ, ಅಲ್ಲ, ಅವನು ಕೇವಲ ಪ್ರಜ್ಞಾಯುಕ್ತ ಅಸ್ತಿತ್ವವಾಗಿದ್ದು ಎಲ್ಲ ಉಪಾಧಿಗಳು, ಆಕಾರಗಳು, ವ್ಯಕ್ತಿತ್ವಗಳು, ನಿರ್ಧಾರಿತಗಳು ಎಲ್ಲವೂ ಅವನ ಮೂಲಕವೇ ಅಸ್ತಿತ್ವಕ್ಕೆ ಬರುತ್ತವೆ. ಅವನು ಸರ್ವಮೂಲ, ಪ್ರಜ್ಞಾಯುಕ್ತ, ಸ್ವಯಂಭೂ, ಅಸ್ತಿತ್ವ ಅಥವಾ ಸತ್ತೆ, ಪರಿಪೂರ್ಣ ವ್ಯಕ್ತಿತ್ವವುಳ್ಳ ಪುರುಷ, ಎಲ್ಲ ರೀತಿಯ ಸಂಬಂಧಗಳು, ಮಾನವೀಯ ಸಂಬಂಧಗಳೂ ಸಹ ಅವನಲ್ಲಿ ಸ್ಥಾಪಿತವಾಗಿರುತ್ತವೆ. ಏಕೆಂದರೆ ಅವನು ಪ್ರಿಯ ಮಿತ್ರನು, ಸಂಗಾತಿಯು, ಪ್ರೇಮಿಯು, ಪ್ರಿಯಕರನು, ಸಹ ಕ್ರೀಡಾಪಟು, ಮಾರ್ಗದರ್ಶಕ, ಶಿಕ್ಷಕ, ಬೋಧಕ, ಒಡೆಯ, ಯಜಮಾನ, ಜ್ಞಾನ ಪ್ರದಾತೃ, ಆನಂದ ಪ್ರದಾಯಕನೂ ಹೌದು; ಅವನಿಗೆ ಎಲ್ಲ ಸಂಬಂಧಗಳೂ, ತೀರ ಆಪ್ತ, ಮಾನವೀಯ ಸಂಬಂಧಗಳೂ ಸಹ ಅನ್ವಯಿಸುತ್ತವೆ. ದಿವ್ಯತ್ವವನ್ನು ಪಡೆದ ಮಾನವನೂ ಸಹ ಇವೆಲ್ಲ ಗುಣ ಧರ್ಮಗಳನ್ನು ಪಡೆಯುತ್ತಾನೆ. ಅವನು ಓರ್ವ ವ್ಯಕ್ತಿಯಾಗಿ ಕಂಡರೂ ನಿರ್ವ್ಯಕ್ತಿಕನಾಗಿರುತ್ತಾನೆ. ಅವನಿಗೆ ಯಾವ ಗುಣಗಳೂ, ಧರ್ಮಗಳೂ, ಸಂಬಂಧಗಳೂ ಇಲ್ಲವಾದರೂ ಅವನು ಇವೆಲ್ಲವನ್ನೂ ಸಂಭಾಳಿಸುತ್ತಾನೆ. ಅವನು ವಾಸ್ತವವಾಗಿ ಯಾವ ಧರ್ಮ(ಮತ)ಕ್ಕೂ ಸಂಬಂಧಪಟ್ಟವನಲ್ಲವಾದರೂ ಎಲ್ಲ ಧರ್ಮಗಳನ್ನು ಪಾಲಿಸುತ್ತಿರುವವನಂತೆ ಕಾಣುತ್ತಾನೆ. ಕ್ರಿಯಾಶೀಲನಾದ ವ್ಯಕ್ತಿಯ

ಶಕ್ತಿಯುತ ಕಾರ್ಯಗಳೇ ಆಗಲಿ, ಸನ್ಯಾಸಿಯ ನಿಷ್ಕ್ರಿಯ (ಜ್ಞಾನದ) ಬಳಕೇ ಆಗಲಿ ಅಥವಾ ಕರ್ಮ ಯೋಗಿಯ ಪ್ರಬಲ ಹಾಗೂ ಉತ್ಸಾಹಪೂರಿತ ವ್ಯಕ್ತಿತ್ವವೇ ಆಗಲಿ, ಅಷ್ಟೇ ಏಕೆ, ತತ್ವಜ್ಞಾನಿಯ ನಿರಾಸಕ್ತ ಅಥವಾ ತಟಸ್ಥ ನಿರ್ವಿಕಾರ ವ್ಯಕ್ತಿತ್ವವೇ ಆಗಲಿ ಯಾವುದೂ ಪರಿಪೂರ್ಣ ದೈವೀ ಆದರ್ಶವಲ್ಲ. ಈ ಪ್ರಪಂಚದಲ್ಲಿ ಎರಡು ರೀತಿಯ ಅಥವಾ ಮಾದರಿಯ ವ್ಯಕ್ತಿತ್ವಗಳು ನಮ್ಮ ಕಣ್ಮುಂದೆ ಇವೆ – ಮೌನ, ಶಾಂತ, ನಿರ್ಮೋಹಿ ತತ್ವ ಚಿಂತಕ ಅಥವಾ ಸನ್ಯಾಸಿ ಇನ್ನೊಂದು ಕರ್ಮರತನಾಗಿರುವ ಮಾನವ ಮೊದಲಿನವನು ಅಕ್ಷರ ಪುರುಷನ ಶಾಂತಿಯಲ್ಲಿ ನೆಲೆಸಲು ಬಯಸುತ್ತಿದ್ದರೆ ಎರಡನೆಯವನು ಶರಪುರುಷನ ನೆಲೆಯಲ್ಲಿ ವಿವಿಧ ಕರ್ಮಗಳಲ್ಲಿ ನಿರತನಾಗಿದ್ದಾನೆ. ಆದರೆ ಪರಿಪೂರ್ಣವಾದ ದೈವೀ ಆದರ್ಶವು ಪರುಷೋತ್ತಮನಾಗಿದ್ದು, ಎಲ್ಲ ಹೋರಾಟ, ದ್ವಂದ್ವಗಳನ್ನು ಮೀರಿ ನಿಲ್ಲುತ್ತದೆ ಹಾಗೂ ಎಲ್ಲ ತರಹದ ದ್ವೈವೀ ಗುಣಗಳನ್ನು ಹೊಂದಿರುತ್ತದೆ.

ಕ್ರಿಯಾಶೀಲನಾದ ವ್ಯಕ್ತಿಯು ತನ್ನ ವಿಶ್ವಾತ್ಮಕವಾದ, ವಿಶ್ವತೋಮುಖವಾದ ಸ್ವಭಾವದ ಸಾರ್ಥಕತೆ ಕಾಣದ ವಿನಃ ಯಾವ ಅನ್ಯ ಆದರ್ಶಗಳಿಂದಲೂ ತೃಪ್ತನಾಗುವುದಿಲ್ಲ. ವಿಶ್ವ ಪ್ರಕೃತಿಯು ಮೂರು ಗುಣಗಳಿಂದ ನಿರ್ಮಿತವಾದ ಆಡುಂಬೋಲವಾಗಿದೆ. ಇಲ್ಲಿ ತ್ರಿಗುಣಗಳ ಜೊತೆಗೆ ಮಾನವನ ಮನಃ ಹೃದಯ ಹಾಗೂ ಶರೀರಗಳೂ ಭಾಗಿಯಾಗಿವೆ. ಈ ಚಟುವಟಿಕೆ ಅಥವಾ ಕ್ರಿಯೆಯ ಪರಿಪೂರ್ಣ ಸಾರ್ಥಕತೆ ಅಂದರೆ, ಆ ಕ್ರಿಯಾಶೀಲ ವ್ಯಕ್ತಿಯ ಪ್ರಕಾರ, ಮಾನವನ ಸಮಗ್ರ ಪರಿಪೂರ್ಣತೆ, ಮಾನವನಲ್ಲಿ ದೈವೀ ಸಾಧ್ಯತೆಯ ಪ್ರಕಟನೆ ಆಗಿದೆ. ಕೆಲ ವಿಚಾರ ಅಥವಾ ಸಂಗತಿಗಳು ಬುದ್ಧಿಯನ್ನು ತೃಪ್ತಿಪಡಿಸಬಹುದು. ಕೆಲವು ಹೃದಯವನ್ನು, ಕೆಲವು ನೈತಿಕ ವ್ಯಕ್ತಿತ್ವವನ್ನು, ಕೆಲವೊಂದು ಮಾನವನ ಪ್ರಕೃತಿಯನ್ನು ತೃಪ್ತಿಪಡಿಸಲೂ ಬಹುದು. ತನ್ನ ಮನ ಪ್ರಾಣ ಶರೀರಗಳಲ್ಲಿ ಅಂಥ ಯಾವುದಾದರೊಂದು ಅಂಶವಿದ್ದಿರಲೇ ಬೇಕೆಂಬುದನ್ನು ಅವನು ಕಂಡುಕೊಳ್ಳುತ್ತಾನೆ. ಏಕೆಂದರೆ ಅದೇ ಅವನ ಧರ್ಮವಾಗಿರುವುದು; ತನ್ನ ನಿಜ ಧರ್ಮವನ್ನು ಬಿಟ್ಟು ಇನ್ನೇತರಿಂದ ಆತ ಕೃತಕೃತ್ಯತೆಯನ್ನು ಅನುಭವಿಸಲು ಸಾಧ್ಯ? ಅವನ ಪ್ರಕೃತಿಯಂತೆ, ಪ್ರತಿಯೊಂದು ಜೀವಿಗೂ ದೇಶ ಕಾಲ ಬದ್ಧವೇ. ಮತ್ತು ಮಾನವನು ಅದರ ಪರಿಧಿಯ ಮಿತಿಯೊಳಗೇ ಪರಿಪೂರ್ಣತೆ ಪಡೆಯಲು ಶ್ರಮಿಸಬೇಕು. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಧರ್ಮದ

ಮೂಲಕವೇ ಯಶಸ್ಸು ಪಡೆಯಲು ಪ್ರಯತ್ನಿಸಬೇಕು. ನಮ್ಮ ಮಾನವನ ಸ್ವಭಾವ (ಅಥವಾ ಪ್ರಕೃತಿ) ಹೇಗಿದೆಯೋ ಅದಕ್ಕನುಗುಣವಾಗಿಯೇ ನಮ್ಮ ಪರಿಪೂರ್ಣತೆ ಇರಬೇಕು. ಆದ್ದರಿಂದ ಪ್ರತಿಯೊಬ್ಬನು ತನ್ನ ತನ್ನ ವ್ಯಕ್ತಿತ್ವಕ್ಕೆ ತಕ್ಕಂತೆಯೇ ಬೆಳೆಯಲು ಪ್ರಯತ್ನ ಪಡಬೇಕು. ಸ್ವಧರ್ಮವೇ ಶ್ರೇಯಸ್ಕರವಾದುದು. ಜೀವನ, ಬದುಕು, ಕರ್ಮ ಎಲ್ಲದರಲ್ಲೂ ಅವನು ಸ್ವಧರ್ಮವನ್ನು ಪಾಲಿಸಬೇಕು. ಆ ಮೂಲಕ ಬೆಳೆಯಬೇಕು. ಗೀತೆ ಹೇಳುವಂತೆ, ಈ ಮಾತಲ್ಲಿ ಸತ್ಯವಿದೆ. ಮಾನವನಲ್ಲಿ ದೈವತ್ವದ ಅಭಿವ್ಯಕ್ತಿ ಅಥವಾ ಸಾಕಾರಗೊಳ್ಳುವಿಕೆ, ಭಗವಂತನ ಲೀಲೆ ಇವೇ ವ್ಯಕ್ತಿಯ ನಿಜವಾದ ಪರಿಪೂರ್ಣತೆ, ಆದರೆ ನೀವದನ್ನು ಬಾಹ್ಯದಲ್ಲಿ ಹುಡುಕಿದರೆ, ಬದುಕಿನಲ್ಲಿ ಕರ್ಮಗಳ ತತ್ವದಲ್ಲಿ ಮಾತ್ರ ಹುಡುಕಿದರೆ ಅದು ಎಂದಿಗೂ ಸಿಕ್ಕುವುದಿಲ್ಲ. ಏಕೆಂದರೆ ನೀವಾಗ ನಿಮ್ಮ ಸ್ವಭಾವ ಧರ್ಮಕ್ಕನುಗುಣ ಕಾರ್ಯ ಮಾಡುತ್ತಿರುವುದಿಲ್ಲ. ಬದಲಾಗಿ ನೀವದರ ಬೇರೆ ಅವಸ್ಥೆಗಳಲ್ಲಿ, ದ್ವಂದ್ವಗಳಲ್ಲಿ, ಇಷ್ಟಾ ನಿಷ್ಟಗಳಲ್ಲಿ, ಸುಖ ದುಃಖಗಳಲ್ಲಿ, ವಿಶೇಷವಾಗಿ ನಿಮ್ಮ ಜೀವನದ ರಾಜಸಿಕ ಅಂಶದಲ್ಲಿ – ಅದರ ಪ್ರಮುಖ ಗುಣವಾದ ಬಯಕೆ, ಕ್ರೋಧ, ದುಃಖ, ಹಂಬಲ ಇವುಗಳ ಬಲೆಯಲ್ಲಿ ಸಿಲುಕಿಕೊಂಡಿ ಕರ್ಮ ಮಾಡುವಿರಿ. ನೀವು ತಳಮಳದಲ್ಲಿ ಸಿಲುಕುವಿರಿ, ಎಲ್ಲವನ್ನು ನಾಶಮಾಡುವ ಬಯಕೆ, ಕಾಮನೆಗಳ ಬಲೆಯಲ್ಲಿ ಸಿಲುಕುವಿರಿ, ಹೊಗೆಯಿಂದ ಹೊಗೆ ಮುಸುಗಿರುವಂತೆ, ಕನ್ನಡಿಯನ್ನು ಧೂಳು ಮಸುಳಿಸಿರುವಂತೆ ಕಾಮನೆಗಳು, ಬಯೆಕೆಯು ಜ್ಞಾನವನ್ನು ಮುಸುಗಿಸುವೆ. ಕಾಮನೆಗಳನ್ನು ನಾಶ ಮಾಡಲೇಬೇಕು. ಅಂದರೆ ಮಾತ್ರ ಶಾಂತಿಯಲ್ಲಿ, ಸ್ಪಷ್ಟವಾದ ಪ್ರಕಾಶಮಾನವಾದ ಸತ್ಯದ ಆತ್ಮದಲ್ಲಿ ನಿಲ್ಲಲು ಸಾಧ್ಯವಾಗುವುದು. ಇಂದ್ರಿಯಗಳು, ಮನಸ್ಸು, ಬುದ್ಧಿ ಇವೆಲ್ಲ ಪರಿಪೂರ್ಣತೆಯ ಶಾಶ್ವತ ತಾಣಗಳಿದ್ದಂತೆ. ಆದರೆ ಈ ಇಂದ್ರಿಯಾ ಮನಸ್ಸು ಬುದ್ಧಿ ಇವುಗಳ ಮಿತಿಯಲ್ಲಿಯೇ ನೀವು ಪರಿಪೂರ್ಣತೆಗಾಗಿ ಹುಡುಕುವಿರಿ, ಅಂಥ ಪ್ರಯತ್ನ ನಿರರ್ಥಕ. ಕ್ರಿಯಾಶೀಲತೆಯ ನಿಮ್ಮ ವ್ಯಕ್ತಿತ್ವದ ಭಾಗಕ್ಕೆ ಶಾಂತತೆಯ, ಸ್ಥಿರತೆಯ ಅಂಶವನ್ನು ಬೆಸೆಯ ಬೇಕು. ನಿಮ್ಮ ನಿಮ್ಮ ಪ್ರಕೃತಿಯನ್ನು ಉನ್ನತೀಕರಿಸಬೇಕು. ತ್ರಿಗುಣಗಳನ್ನು ಮೀರಿ ಆಚೆಗೆ ಅದು ಬೆಳೆಯ ಬೇಕು. ಎಲ್ಲವನ್ನೂ ಮೀರಿದ ಆತ್ಮದ ಸ್ತರದಲ್ಲಿ ಏರಿ ನಿಲ್ಲಬೇಕು. ನಿಮ್ಮಲ್ಲಿ ಈ ಆತ್ಮ ಶಾಂತಿಯು ಸ್ಥಾಪನೆಗೊಂಡಿತೆಂದರೆ ಆಗ ಮಾತ್ರ ನೀವು ಸ್ವತಂತ್ರ ಹಾಗೂ ದೈವೀ ಕಾರ್ಯ ಮಾಡಲು ಸಮರ್ಥರಾಗುವಿರಿ.

ಇದಕ್ಕೆ ವಿರುದ್ಧವಾಗಿ ಮೌನಿಯಾಗಿರುವವನು, ಶಾಂತವಾಗಿರುವವನು, ಸನ್ಯಾಸಿಯು ಇಂಥ ಪರಿಪೂರ್ಣತೆಯನ್ನು ಪಡೆಯುವುದು ಸಾಧ್ಯವಿಲ್ಲ; ಏಕೆಂದರೆ ಅಲ್ಲಿ ಜೀವನ, ಕರ್ಮ ಪ್ರವೇಶವಾಗುವುದೇ ಇಲ್ಲ. ಈ ಜೀವನ, ಕರ್ಮ ಇವೆಲ್ಲ ಅಪರಿಪೂರ್ಣತೆಯ, ಬಂಧನದ ಸಾಧನಗಳಲ್ಲವೇ? ಎಲ್ಲ ಕರ್ಮಗಳೂ ವಾಸ್ತವಿಕವಾಗಿ ಅಪರಿಪೂರ್ಣವೇ, ಮೂಲತಃ ಅಪಕ್ವವೇ; ಬೆಂಕಿಯ ಜೊತೆ ಹೊಗೆ ಕಾಣಿಸಿಕೊಳ್ಳುವಂತೆ ಕರ್ಮದ ಸ್ವಭಾವವೇ ರಾಜಸಿಕವಾಗಿದೆ. ರಾಜಸಿಕವೆನ್ನುವುದು ಆಶೆಗಳ ಜನಕ ಇದ್ದ ಹಾಗೆ, ತತ್‌ಫಲವಾಗಿ ಜ್ಞಾನವು ಕುಂಠಿತವಾಗುವುದು ಖಂಡಿತ, ರಾಹುಗ್ರಸ್ತವಾಗುವುದು ಖಂಡಿತ; ಆಶೆ ಪದೇ ಪದೇ ಹುಟ್ಟುವುದು, ಕೆಲ ಸಲ ಗೆಲುವು, ಕೆಲ ಸಲ ಸೋಲು ಇದೇ ಆಶೆಯ ಪರಿಭ್ರಮಣ ಚಕ್ರ; ಕೆಲ ಸಲ ಸುಖ, ಕೆಲ ಸಲ ದುಃಖಗಳ ಓಲಾಟ, ಹೊಯ್ದಾಟ, ಪಾಪ–ಪುಣ್ಯ ಇವುಗಳ ದ್ವಂದ್ವ: ಇದೆಲ್ಲ ಸಹಜ, ಇದ್ದದ್ದೇ. ಈಶ್ವರನು ಜಗತ್ತಿನಲ್ಲಿ ಇರುಬಹುದು. ಆದರೆ ಅವನೇ ಜಗತ್ತಲ್ಲವಲ್ಲ. ಅವನು ತ್ಯಾಗವನ್ನು ಬಯಸುತ್ತಾನೆ. ಅವನು ನಮ್ಮ ಕರ್ಮಗಳ ಪ್ರಭುವೂ ಅಲ್ಲ, ಕಾರಣನೂ ಅಲ್ಲ. ನಮ್ಮ ಕರ್ಮಗಳ ಪ್ರಭು ಅಂದರೆ ನಮ್ಮ ಆಶೆ, ಹಾಗೂ ಕರ್ಮಗಳ ಕಾರಣವೆಂದರೆ ನಮ್ಮ ಅಜ್ಞಾನ. ಈ ಜಗತ್ತು ಅನ್ನುವುದು ನಿಜವಾಗಿಯೂ (ಕ್ಷರ) ಒಂದು ಲೀಲೆಯಾಗಿದೆ ಅನ್ನುವುದಾದರೆ, ಪ್ರಕೃತಿಯ ಅಜ್ಞಾನದ ಜೊತೆಗೆ ಆಡುವ ಅಪರಿಪೂರ್ಣ ಆಟವಿದ್ದಂತೆ ಎಂದು ಹೇಳಬೇಕಾಗುವುದು; ಅದು ಪ್ರಕಟನೆ ಅಥವಾ ಅಭಿವ್ಯಕ್ತಿ ಅನ್ನುವುದಕ್ಕಿಂತ ಭಗವಂತನ ವಿಲುಪ್ತಿ ಅಥವಾ ಅವನನ್ನು ಕಾಣದಂತೆ ಮಾಡುವ ಕ್ರಿಯೆ ಎಂದೇ ಹೇಳುವುದು ಯೋಗ್ಯವಾದೀತು. ಇದೇನೋ ನಮಗೆ ಮೇಲ್‌ನೋಟಕ್ಕೆ ಗೊತ್ತಾಗಿ ಬಿಡುತ್ತದೆ. ಒಮ್ಮೆ ನೋಡಿದರೆ ಸಾಕು ಇದೇ ಸತ್ಯ ಎಂದೇ ಅನಿಸಿಬಿಡುತ್ತದೆ. ಜಗತ್ತಿನ ಪೂರ್ಣ ಅನುಭವ ಆದ ಮೇಲೆ ಕೂಡ ನಮಗೆ ಹೀಗೆಯೇ ಅನಿಸುವುದು ತಾನೇ? ಅಜ್ಞಾನದ ಚಕ್ರವೇ ಆತ್ಮನನ್ನು ಜನನ ಮರಣಗಳಿಗೆ ಕಟ್ಟಿಹಾಕುವುದು; ಆಶೆ, ಕಾಮನೆಯ ಪ್ರವೃತ್ತಿಯೇ ಮಾನವನ್ನು ಆಶೆ ಕರ್ಮಗಳಿಗೆ ಅಡಿಯಾಳಾಗಿ ಮಾಡುವುದು; ಆತ್ಮವು ಬೇಸತ್ತು ಕೊನೆಗೆ ಇವೆಲ್ಲವನ್ನು ಕಳಚಿ ಒಗೆಯುವವರೆಗೆ ಈ ಆಟವೇ ಮುಂದುವರಿಯುವುದು. ಕೇವಲ ಬಯಕೆ ಮಾತ್ರ ಅಲ್ಲ. ಕರ್ಮವನ್ನೂ ಸಹ ಮನುಷ್ಯ ಬಿಡಬೇಕಾಗುವುದು. ಸಂಪೂರ್ಣ ಮೌನದಲ್ಲಿ ನೆಲೆಸಿದ ಆತ್ಮವು ಮಾತ್ರ ನಿಶ್ಚಲ ನಿಷ್ಕ್ರಿಯ, ನಿಷ್ಕರ್ಮ, ಶಾಂತ, ಕೇವಲ ಬ್ರಹ್ಮನಲ್ಲಿ ಲೀನವಾಗುವುದು. ಇದೊಂದು ಆಕ್ಷೇಪಣೆ, ಇದಕ್ಕೆ

ಉತ್ತರವಾಗಿ ಗೀತೆಯು ಬಹಳ ವಿವರವಾಗಿ ವರ್ಣನೆ ಮಡುತ್ತದೆ. ನಿರಾಕಾರ ಅಥವಾ ನಿರ್ಗುಣ ತತ್ವದ ಈ ಆಕ್ಷೇಪಣೆ ಸುಲಭವಾದದ್ದೇನಲ್ಲ. ಆದರೆ ಗೀತೆ ಹೇಳುತ್ತದೆ ಮತ್ತು ಇದು ಕೇವಲ ರಾಜಸಿಕ ವ್ಯಕ್ತಿಗಿಂತ ಹೆಚ್ಚಾಗಿ ಇಡೀ ಮಾನವ ಕುಲಕ್ಕೇ ಸಂಬಂಧಿಸಿದ ಉತ್ತರವಾಗಿದೆ. ಈ ಶಾಂತತೆ, ತಟಸ್ಥತೆ ಅನ್ನುವುದು ಉನ್ನತವಾದ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಸ್ಥಿತಿಯಾಗಿದೆಯಾದರೂ ಅದೇನೂ ಪರಮೋಚ್ಚ ಸತ್ಯದ ಸಂಪೂರ್ಣ ಅವಸ್ಥೆಯಂತೂ ಅಲ್ಲ, ಹೀಗಿರುವಾಗ ಅದನ್ನೇ ವಿಶ್ವಾತ್ಮಕ ಸಂಪೂರ್ಣ, ಮಾನವನ ಜೀವನದ ಪರಮೋಚ್ಚ ಆದರ್ಶವೆಂದು ಸಾರುವುದು ಜನರಲ್ಲಿ ಗೊಂದಲವನ್ನೆಬ್ಬಿಸುವುದು, ಮಾನವ ಕುಲವು ತನ್ನ ಗುರಿಯೆಡೆಗೆ ಸಾಗುವ ದಾರಿಯಲ್ಲಿ ಅಡಚಣೆಯಾಗುವುದು. ಅಪಾಯಕಾರಿ–ಯಾಗುವುದು. ಕೇವಲ (ರಾಜಸಿಕ) ಕರ್ಮಗಳಿಗೆ ಅಂಟಿಕೊಂಡಿದ್ದರೆ ಜಗತ್ತಿಗೆ ಎಷ್ಟು ಹಾನಿಯಾಗಬಹುದೋ ಅದಕ್ಕಿಂತ ಹೆಚ್ಚಿನ ಹಾನಿ ಈ ಸನ್ಯಾಸತ್ವದಿಂದ ಆಗುತ್ತದೆ. ಪೂರ್ಣ ಸತ್ಯದ ಯಾವುದೋ ಒಂದು ಮುಖವನ್ನು ಹಿಡಿದು ಅದೇ ಪೂರ್ಣ ಸತ್ಯವೆಂದು ಪ್ರತಿಪಾದಿಸಿದರೆ (ಜ್ಞಾನದ) ಬೆಳಕೇನೋ ಬರಬಹುದು. ಆದರೆ ಅದರ ಜೊತೆ ಗೊಂದಲ, ಅನುಮಾನ, ಸಂದೇಹ ಕೂಡ ಬರುವುವು. ಏಕೆಂದರೆ ಸತ್ಯದ ಒಂದು ಅಂಶದ ಶಕ್ತಿಯು ಅದರ ಮಿಥ್ಯಾ ಗ್ರಹಿಕೆಯ ಅಥವಾ ತಪ್ಪರ್ಥೈಕೆಯ ಶಕ್ತಿಯನ್ನು (ಸಾಧ್ಯತೆಯನ್ನೂ) ಹೆಚ್ಚಿಸುವುದು. ರಾಜಸಿಕ ಅಥವಾ ಉತ್ಸಾಹ ಭರಿತ ಆದರ್ಶವು ಅಜ್ಞಾನವನ್ನು ಬೆಳೆಸಬಹುದು. ಮಾನವನ ಪ್ರಗತಿಯನ್ನು ಕುಂಠಿತಗೊಳಿಸಬಹುದು. ಪರಿಪೂರ್ಣತೆಯು ಗಗನ ಕುಸುಮವಾಗಿರುವಾಗ ಅದನ್ನು ಶೋಧಿಸುವ ಪ್ರಯತ್ನದಲ್ಲಿ ಹಿನ್ನಡೆ ಆಗಲೂ ಬಹುದು. ಅದರೆ ಸನ್ಯಾಸತ್ವದ ಆದರ್ಶವು ಜಗದ್ವಿನಾಶಕಾರಿಯ ಬೀಜವನ್ನು ತನ್ನೊಳಗೆ ಹುದುಗಿಸಿಕೊಂಡಿರುವುದು. ಕೃಷ್ಣ ಹೇಳುತ್ತಾನೆ: ನಾನೇ ಆ ವಿಷಯವಾಗಿ ಏನಾದರೂ ಮಾಡಬೇಕೆನ್ನುವುದಾದರೆ ನಾನು ಜನರನ್ನೇ ನಾಶ ಮಾಡಬೇಕಾಗುತ್ತದೆ, ಗೊಂದಲವನ್ನುಂಟು ಮಾಡಬೇಕಾಗುತ್ತದೆ. ಯಾರೊಬ್ಬ ವ್ಯಕ್ತಿಯ ಅಪರಾಧವಾಗಲಿ, ದೈವೀ ಪುರುಷನ ತಪ್ಪಾಗಲಿ, ಇಡೀ ಮಾನವ ಕುಲವನ್ನು ನಾಶಮಾಡಲು ಸಾಧ್ಯವಿಲ್ಲ; ಬಹಳ ಹೆಚ್ಚೆಂದರೆ ಸಂದೇಹ, ಗೊಂದಲಗಳನ್ನು ಸೃಷ್ಟಿಸಬಹುದು. ಅದರಿಂದ ಮಾನವನ ಜೀವಿತದ ತತ್ವವೇ ಕೆಟ್ಟುಹೋಗುವುದು, ಗೊಂದಲದ ಸ್ವಭಾವವೇ ಅದು, ನಾಶಮಾಡುವುದೇ ಅದರ ಸ್ವಭಾವ. ಅದರಿಂದಾಗಿ ಪ್ರಗತಿಯ ದಾರಿಯಲ್ಲಿ ಕೂಡ ಅಡ್ಡಿ ಬರುವುದು.

ಆದ್ದರಿಂದ ಮಾನವನಲ್ಲಿರುವ ಕರ್ಮ ತ್ಯಾಗ ಹಾಗೂ ಧ್ಯಾನ ಪರಾಯಣ ಶಾಂತ ವೃತ್ತಿಗೆ ತನ್ನಲಿರುವ ಕೊರತೆಯ ಅರಿವಾಗುವಂತೆ ವ್ಯವಸ್ಥೆ ಮಾಡುವ ಅನಿವಾರ್ಯತೆ ಈಗ ಹೆಚ್ಚಾಗಿದೆ. ಕರ್ಮ ಪರಾಯಣ ವೃತ್ತಿಯ ಹಿಂದೆ ಒಂದು ಮಹತ್ತರವಾದ ಸತ್ಯ ಇದೆ. ಮಾನವನಲ್ಲಿ ಭಗವಂತನ ಪರಿಪೂರ್ತಿ ಮಾನವನರೆಲ್ಲರ ಎಲ್ಲ ವಿಧ ಕರ್ಮಗಳಲ್ಲಿ ಈಶ್ವರನ ಉಪಸ್ಥಿತಿ, ಈ ತರಹದ ಸತ್ಯಗಳು ಮಾನವನ ಕರ್ಮ ಪರಾಯಣ ವೃತ್ತಿಯಲ್ಲಿಯೇ ಇವೆ, ಈ ಸತ್ಯವು ಶಾಂತಿಮಯ ಅವಸ್ಥೆಯಲ್ಲಿ ಎಷ್ಟಿದೆಯೋ ಅಷ್ಟೇ ಮಹತ್ವದ ಸತ್ಯವು ಅದರ ಕೊರತೆಯನ್ನು ಮನದಟ್ಟು ಮಾಡಿಕೊಡುವಲ್ಲಿ ಕೂಡ ಇದೆ. ಭಗವಂತನು ಶಾಂತಿಯಲ್ಲಿ ಇರುವಂತೆಯೇ ಕರ್ಮದಲ್ಲೂ ಇದ್ದಾನೆ. ಪ್ರಕೃತಿಯಿಂದ ಅಬಾಧ್ಯವಾಗಿರುವ ತಟಸ್ಥ ಆತ್ಮದ ಕರ್ಮ ತ್ಯಾಗ ಮತ್ತು ತದನು ಶಾಂತಿ ಹಾಗೂ ಕರ್ಮ ಪರಾಯಣ ಆತ್ಮವು ಪ್ರಕೃತಿಗೆ ಸಂಪೂರ್ಣ ಶರಣಾಗಿ ವಿಶ್ವವೆಂಬ ಮಹಾಯಜ್ಞ ಅಥವಾ ಪುರುಷ ಯಜ್ಞವನ್ನು ಸಾಂಗವಾಗಿ ನೆರವೇರಿಸಲು ಸಹಾಯ ಮಾಡುವುದು ಇವೆರಡೂ ಶಾಶ್ವತದ ದೃಷ್ಟಿಯಲ್ಲಿ ನಿತಾಂತ ಸತ್ಯವೂ ಅಲ್ಲ. ಅಸತ್ಯವೂ ಅಲ್ಲ. ಅವು ಪರಸ್ಪರ ವಿರುದ್ಧ ಸತ್ಯಗಳೂ ಅಲ್ಲ, ಅವುಗಳ ಪೈಕಿ ಒಂದು ಶ್ರೇಷ್ಠ, ಇನ್ನೊಂದು ಕನಿಷ್ಠವೆಂಬುದಿಲ್ಲ, ಅವು ಪರಸ್ಪರ ವಿನಾಶಕಾರಿ ಶಕ್ತಿಗಳಲ್ಲ. ಅವು ದೈವೀ ಪ್ರಕಟನೆಯ ಎರಡು ಅಭಿವ್ಯಕ್ತಿ ಅವಸ್ಥೆಗಳು ಮಾತ್ರ. ದೈವೀ ಸಾರ್ಥಕತೆಯಲ್ಲಿ ಅಕ್ಷರ (ಪುರುಷ) ಮಾತ್ರ ಏಕೈಕ ಬೀಗದ ಕೈ ಅಲ್ಲ. ಅದೇ ಅತ್ಯುನ್ನತ ರಹಸ್ಯವೂ ಅಲ್ಲ. ಈ ಎರಡೂ ಸ್ಥಿತಿ, ಅವಸ್ಥೆ ಅಥವಾ ಹಂತಗಳ ಪರಿಪೂರ್ಣ ಸಾರ್ಥಕತೆಯು ಪುರುಷೋತ್ತಮನ ಪರಿಕಲ್ಪನೆಯಲ್ಲಿ ಸಮ್ಮಿಳಿತವಾಗಿರುವುದು. ಗೀತೆಯ ಮಟ್ಟಿಗೆ ಕೃಷ್ಣನೇ ಆ ಪುರುಷೋತ್ತಮ. ವಿಶ್ವ ಪ್ರಭು, ವಿಶ್ವ ನಿಯಾಮಕ. ಅವನು ಪರಮೋಚ್ಚ ತತ್ವದ ಅವತಾರ. ದಿವ್ಯನಾಗಿ ಬದಲಾದ ದೇವ ಮಾನವನು ಮೊದಲು ಹೇಗೆ ಮಾಡುತ್ತಿದ್ದನೋ ಹಾಗೆ ಕರ್ಮ ಪರಾಯಣನಾಗಿ ಕರ್ಮ ಮಾಡುತ್ತಾನೆ. ಅವನು ಎಂದಿಗೂ ಕರ್ಮ ತ್ಯಾಗ ಮಾಡುವುದಿಲ್ಲ. ಮಾನವನು ಅಜ್ಞಾನದಲ್ಲಿ ಇರುವಾಗಲೂ ಅವನ ಮೂಲಕ ಪರಮಾತ್ಮ ಕೆಲಸ ಮಾಡುತ್ತಾನೆ. ಅದೇ ರೀತಿ ಜ್ಞಾನದಲ್ಲೂ ಸಹ ಅವನು ಕೆಲಸ ಮಾಡುತ್ತಾನೆ. ಆ ಪರಮಾತ್ಮನನ್ನು ಅರಿತುಕೊಳ್ಳುವುದೇ ನಮ್ಮ ಆತ್ಮದ ಪರಮ ಕರ್ತವ್ಯ. ಅದು ಅತ್ಯುಚ್ಚ, ಅತಿ ಕಲ್ಯಾಣಕರ ಕರ್ಮವಾಗಿದೆ. ಇದೇ ಪರಿಪೂರ್ಣತೆಯ ವ್ಯಾಖ್ಯಾನ ಕೂಡ ಹೌದು. ಹಾಗೆಂದು ಆತ್ಮನ ಕರ್ಮ

ಸನ್ಯಾಸದ, ವಿಶ್ವಾತೀತ ಪರಬ್ರಹ್ಮನ ಸಾಕ್ಷಾತ್ಕಾರ ಮಾತ್ರವೇ ಏಕೈಕ ಪರಮ ಸಿದ್ಧಿ ಎಂದು ತಿಳಿಯಬಾರದು. ನಾವು ಅರ್ಥಮಾಡಿಕೊಳ್ಳಬೇಕಾದ ಗ್ರಹಿಸಬೇಕಾದ ರಹಸ್ಯವೇನೆಂದರೆ, ಶಾಶ್ವತನಾದ, ಅವ್ಯಕ್ತನಾದ ಅಜಾತನಾದ ಪರಮಾತ್ಮನ ಜೊತೆಗೆ ಅವನ ದಿವ್ಯ ಜನ್ಮ, ದಿವ್ಯ ಕರ್ಮಗಳನ್ನು ತಿಳಿದುಕೊಳ್ಳಬೇಕು. ಎರಡರ ಅರ್ಥವನ್ನು, ರಹಸ್ಯ ಸತ್ಯವನ್ನು ಗ್ರಹಿಸಬೇಕು. "ಜನ್ಮ ಕರ್ಮ ಚ ಮೇ ದಿವ್ಯಂ" ಎಂದು ಕೃಷ್ಣನೇ ಹೇಳುತ್ತಾನೆ. ಈ ರಹಸ್ಯ ಜ್ಞಾನದ ಹಿನ್ನೆಲೆಯಲ್ಲಿ ಮಾಡಿದ ಯಾವ ಕರ್ಮಗಳೂ ಬಂಧನಕಾರಿಯಾಗುವುದಿಲ್ಲ. ವ್ಯಕ್ತಿ ಕರ್ಮ ಸಂಗದಿಂದ ಮುಕ್ತನಾಗಿರುತ್ತಾನೆ. "ಯಾರು ನನ್ನನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೋ ಅವರು ಕರ್ಮಗಳಿಂದ ಬಂಧಿತರಾಗಿರುವುದಿಲ್ಲ" ಎಂದು ಕೃಷ್ಣನು ಸ್ಪಷ್ಟವಾಗಿಯೇ ಹೇಳುತ್ತಾನೆ. ಕರ್ಮದ ಬಂಧನದಿಂದ, ಅವರ ಸಂಸರ್ಗದಿಂದ ಪಾರಾಗುವುದು, ಪುನರ್ಜನ್ಮದ ಚಕ್ರದಿಂದ ಮುಕ್ತನಾಗುವುದು ಇದೇ ಮಾನವನ ಗುರಿ ಹಾಗೂ ಆದರ್ಶವಾಗಿದ್ದರೆ ಈ ಜ್ಞಾನವು ಮಾತ್ರ ಅವಶ್ಯ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಮುಕ್ತಿಯನ್ನು ಪಡೆಯಲು ಇದು ರಹದಾರಿ ಎಂದು ತಿಳಿದುಕೊಳ್ಳಬೇಕು. ಏಕೆಂದರೆ ಗೀತೆ ಹೇಳುವಂತೆ "ಯಾರು ನನ್ನ ದಿವ್ಯ ಜನ್ಮ ಹಾಗೂ ದಿವ್ಯ ಕರ್ಮಗಳ ಹಿಂದಿನ ತತ್ವವನ್ನು ಸರಿಯಾಗಿ ಗ್ರಹಿಸುತ್ತಾರೋ, ಅವರು ತಮ್ಮ ಶರೀರಾವಸಾನದ ನಂತರ ನನ್ನಲ್ಲಿ ಬಂದು ಸೇರಿಕೊಳ್ಳುತ್ತಾರೆ, ಅಂಥವರು ಪುನಃ ಜನನ ಮರಣಗಳ ಚಕ್ರದಲ್ಲಿ ಬೀಳುವುದಿಲ್ಲ." ದಿವ್ಯ ಜನ್ಮ ಹಾಗೂ ದಿವ್ಯ ಕರ್ಮದ ಜ್ಞಾನದ ಮೂಲಕ ಅವನು ನಿಧಾನವಾಗಿ ಅಜಾತನಾದ, ವ್ಯಕ್ತನಾದ, ಅಗೋಚರನಾಗಿರುವ, ಅವಿನಾಶಿಯಾಗಿರುವ ಆತ್ಮನೆಡೆಗೆ ಸಾಗುತ್ತಾರೆ. ಅಂಥ ಅವ್ಯಯ, ಅಜಾತ ಆತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ. ದಿವ್ಯ ಕರ್ಮಗಳ ಹಿಂದಿನ ತತ್ವವನ್ನು ತಿಳಿದ ಜ್ಞಾನಿಯು "ಸರ್ವ ಭೂತಾನಾಂ ಈಶ್ವರ"ನಾಗಿರುವ ಕರ್ಮ ಪ್ರಭುವಿನೆಡೆಗೆ ಸಾಗುತ್ತಾನೆ. ಅರ್ಥಾತ್ ಅಂಥ ಜ್ಞಾನಿಯಾದವನು ಶಾಂತ, ಅಜ ಆತ್ಮನಲ್ಲಿ ನೆಲೆಸುತ್ತಾನೆ, ಹಾಗೂ ಅವನ ಕರ್ಮಗಳು ವಿಶ್ವ ಪ್ರಭುವಿನ ಆದೇಶದಂತೆ, ಸಂಕಲ್ಪದಂತೆ ನಡೆಯುತ್ತವೆ.

(ಸಶೇಷ)

# ಶ್ರೀ ಅರವಿಂದರ ಕಾವ್ಯ
# "ಈಲಿಯನ್"

**– ಅನು: ಡಾ॥ ಬಿ.ಆರ್. ಭೀಡ್, ರಾಯಚೂರು**

## ಮೊದಲ ಹೊತ್ತಿಗೆ: ಆಗಮನದ ಹೊತ್ತಿಗೆ (1/8)

305–308. ಟ್ರಾಯ್ ವೀರ ಐನೀಸ ಹೇಳುತ್ತಾನೆ ಏರೀಟ್ಸ್‌ನ ಪುತ್ರನಾದ ಥ್ರಾಸಿಮೇಕಸ್ ಕೇಳು, ದೇವತೆಗಳು ಸದಾ ಆ ಕೆಲಸ ಈ ಕೆಲಸ ಎಂದು ಬಿಜಿಯಾಗಿಯೇ ಇರುತ್ತಾರೆ. ತಮ್ಮ ಮಗ್ಗದ ಮೇಲೆ ಸದಾ ಅದೃಷ್ಟ, ಭಾಗ್ಯ, ದುರಾದೃಷ್ಟಗಳನ್ನು (ನಮಗಾಗಿ) ನೇಯುತ್ತಲೇ ಇರುತ್ತಾರೆ. ನಿನ್ನೆಯ ದಿನ, ಇಂದು, ನಾಳೆ ಹೀಗೆ ಅವರು ಸದಾ ದೇಶ – ಕಾಲಗಳ ಮೂಲಕ ನಿರ್ಮಿತವಾದ ಕೈಮಗ್ಗ ಮತ್ತು ಶಟಲ್‌ಗಳ ಮೇಲೆ ಕೆಲಸ ಮಾಡುತ್ತಲೇ ಇರುತ್ತಾರೆ. (1.105)

•ದೇವತೆಗಳು ಮತ್ತು ಅವರು ಮಾಡುವ ಕೆಲಸವನ್ನು ಇಲ್ಲಿ metaphor ಉಪಮಾನದ ಮುಖಾಂತರ (ಕೈಮಗ್ಗ ಮತ್ತು ಶಟಲ್) ವರ್ಣಿಸಿರುವುದನ್ನು ನೋಡಬಹುದು.

308–309. ಅವರು ಮಾಡುವ ಕೆಲಸದ ಬಗ್ಗೆ ಎಲ್ಲರಿಗೂ ಅಚ್ಚರಿ ಇದೆ, ಕುತೂಹಲ ಇದೆ. ಅವರು ಇರುವುದೆಲ್ಲಿ, ಅವರು ಮಾಡುವ ಕೆಲವೇನು, ಅವರ ಕೆಲಸದ ದೂರದ ಉದ್ದೇಶವೇನು, ಯಾರಿಗೆ ತಿಳಿದಿದೆ? (1.106)

310. ತಮ್ಮ ಕೆಲಸವನ್ನವರು ಬಹು ಗೌಪ್ಯವಾಗಿ, ಶಾಂತವಾಗಿ, ಸದ್ದುಗದ್ದಲವಿಲ್ಲದೇ ಮೌನವಾಗಿ ಮಾಡುತ್ತಾರೆ. ಅವರು ವಾಸವಾಗಿರುವುದು ಮೋಡಗಳ ಮರೆಯಲ್ಲಿ. ಅವರು ನಮ್ಮ ಕಣ್ಣಿಗೆ ಕಾಣದಂತೆ ಸುತ್ತಲೆಲ್ಲ ಗಾಢ ಕತ್ತಲೆ ಆವರಿಸಿದೆ. (1.107)

311–313. ಏನೇ ಆದರೂ ನಾನು ಮಾತ್ರ Apollo ಅಪೋಲೋ ದೇವನನ್ನು ಪೂಜಿಸುತ್ತೇನೆ, ಪ್ರಾರ್ಥಿಸುತ್ತೇನೆ. ಮಹಾ ಧನುರ್ಧಾರಿಯಾಗಿರುವ Archer ಸಾಹಸಶೀಲನಾದ ಅವನು ಮಾನವರ ಸ್ನೇಹಿತ. ಮಾನವರ ಜೊತೆ ಅವನಿಗೆ ಬಹು ಒಳ್ಳೆಯ ಸಂಬಂಧ ಇದೆ. ಅವನು ಸದಾ ವಿಧಿಯ (ಅಥವಾ ಅದೃಷ್ಟದ) ಬೆನ್ನೇರಿ ಬರುತ್ತಾನೆ. ಗುಡುಗು ಮಿಂಚುಗಳು ಅವನ ಆಯುಧ. ನನ್ನ ಮಾತೃಭೂಮಿಯ ಮೇಲೆ ಕೆಡಕು, ಅಪಾಯ, ದುರಂತ, ವಿಪತ್ತುಗಳು

ಸಂಭವಿಸದಿರಲು ಭಕ್ತಿಯಿಂದ ನೆನೆಯುತ್ತ ನನ್ನನ್ನು ಅವನಿಗೆ ಸಮರ್ಪಿಸಿಕೊಳ್ಳುತ್ತೇನೆ.

•Apollo ಅಂದರೆ ನಮ್ಮ ಸೂರ್ಯ ದೇವ ಇದ್ದ ಹಾಗೆ. ಅವನು ಮಹಾ ಬಿಲ್ಲುಗಾರನೆಂದು Archer ಗ್ರೀಕರು ಆರಾಧಿಸುತ್ತಾರೆ. ಅವನು ಗುಡುಗು ಮಿಂಚುಗಳ ದೇವತೆ. ಧನುರ್ವಿದ್ಯೆಯ ಪ್ರವರ್ತಕನು ಅವನೇ. ಭೂಮಿಯ ಮೇಲೆ ವಿಪತ್ತುಗಳು ಬರಬಾರದೆಂದರೆ – ಅತಿವೃಷ್ಟಿ ಅನಾವೃಷ್ಟಿ ತ್ಸುನಾಮಿ ಮುಂತಾದ ಪ್ರಕೋಪಗಳನ್ನು ತಪ್ಪಿಸಿಕೊಳ್ಳಲು ಮಿತ್ರನಂತಿರುವ ಅಪೋಲೋ ದೇವನನ್ನೇ ಪ್ರಾರ್ಥಿಸಬೇಕು.

•ಮೂಲದಲ್ಲಿರುವ fatherland ನ್ನು ನಾನು ಮಾತೃಭೂಮಿ ಎಂದು ಅನುವಾದಿಸಿದ್ದೇನೆ. ನಮ್ಮಲ್ಲಿ ತಾಯಿ, ತಾಯ್ನಾಡು ಮುಂತಾದ ಭಾವನೆಗಳಿರುವಂತೆ, ಪಾಶ್ಚಾತ್ಯರಲ್ಲಿ ತಾಯಿಯ ಬದಲಾಗಿ ತಂದೆ, ತಂದೆಯ ನಾಡು ಹೀಗೆ ಹೇಳುವ ವಾಡಿಕೆ ಇದೆ.

313–320. ಮರ್ಫಿಯಾ (ನಿದ್ರಾ ದೇವತೆ) ತನ್ನ ಕಪ್ಪು ಕತ್ತಲೆಯ ಕೈಗಳಿಂದ ನಮ್ಮೆಲ್ಲರ ಸರಿ ತಪ್ಪುಗಳನ್ನು ಬೇರಿಲ್ಲದಂತೆ ಒಟ್ಟುಗೂಡಿಸುತ್ತಾನೆ; ನಾವಾಗ ಗುಣಾವಗುಣಗಳ ಭೇದವಿಲ್ಲದೇ ಎಲ್ಲ ಮರೆತು ನಿದ್ರಿಸುತ್ತೇವೆ. ಅಂಥ ಮರ್ಫಿಯನು ಇಡೀ ರಾತ್ರಿ ನನ್ನ ಬಳಿ ನಿಂತಿದ್ದನು. ಏನೇನೋ ಕನಸುಗಳು, ನನ್ನ ಮನಃಪಟಲದ ಮೇಲೆ ಮೂಡಿ ಮರೆಯಾದವು. (1.108) "ಕನಸಿನಲ್ಲೇ ನಾನು ಈಲಿಯನ್ ಪಟ್ಟಣದ ತುಂಬೆಲ್ಲ ಸುತ್ತಾಡಿದೆ. ಸುತ್ತಲೆಲ್ಲ ಶತ್ರುಗಳೇ ಶತ್ರುಗಳು, ಮಹಾ ಅಗ್ನಿ ಜ್ವಾಲೆಗಳು ಈಲಿಯನ್ ಪಟ್ಟಣವನ್ನು ನುಂಗಿ ನೊಣೆಯುತ್ತಿದ್ದವು. ನಾನು ಅಸಹಾಯನಾಗಿ ನೋಡುತ್ತಿದ್ದೆನೇ ವಿನಃ ಏನೂ ಮಾಡಲಾಗುತ್ತಿರಲಿಲ್ಲ." (1.109) "ಪ್ರಾಯಮ್‌ನ ಅರಮನೆ ಹೊತ್ತಿ ಉರಿದು ಕೆಂಪು ಹೊಗೆ ಆಕಾಶವನ್ನೇ ತುಂಬಿಸಿತ್ತು. ಗ್ರೀಕರ ಬಾಹುಗಳು ಟ್ರಾಯ್‌ನ್ನು ಆಕ್ರಮಿಸಿದ್ದವು. ಎಲ್ಲ ತರಹದ, ನನ್ನ ಜನರ ದುಃಖದ ಆಕ್ರಂದನ, ಗ್ರೀಕರ ಗೆಲುವಿನ ವಿಜಯಘೋಷ ಇವೆಲ್ಲವುಗಳ ಮಿಶ್ರ ಧ್ವನಿ ನನ್ನ ಕಿವಿಗಳಲ್ಲಿ ಮೊರೆಯುತ್ತಿತ್ತು. ಅಂಥದರಲ್ಲಿ ಸಮುದ್ರದ ಭೀಕರ ಮೊರೆತ, ಹೆಸ್ಪರಸ್ ಮೇಲಿಂದ ಬಲವಾಗಿ ಬೀಸಿ ಬರುವ ಪಶ್ಚಿಮದ ಗಾಳಿಯ ಕರ್ಕಶ ಧ್ವನಿ ನನ್ನನ್ನು ಹತಾಶನನ್ನಾಗಿ, ಹುಚ್ಚನನ್ನಾಗಿ ಮಾಡುತ್ತಿದ್ದವು" (1.110)

•Hesperus ಇದನ್ನು ಸಂಜೆ ನಕ್ಷತ್ರ ಎಂದು ಕರೆಯುತ್ತಾರೆ. ಐನಿಯಸ್‌ನ ಈ ಕನಸು ಟ್ರಾಯ್ ಮೇಲೆ ಎರಗಲಿರುವ ಮಹಾ ವಿಪತ್ತಿನ ಮುನ್ಸೂಚನೆಯಾಗಿತ್ತು. "red was the smoke" "the arms of the Greeks" "voices were crying" "the violent ocean" ಮುಂತಾದ ವಿಶಿಷ್ಟ ಪದ ಪ್ರಯೋಗಗಳು ಟ್ರಾಯ್‌ನ ಮೇಲೆ ಬರಲಿರುವ ಘೋರ ವಿಪತ್ತಿನ ಪೂರ್ವ ಲಕ್ಷಣಗಳು.

ಕನಸುಗಳಿಗೆ ಗ್ರೀಕ್ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನವಿದೆ. ಕನಸುಗಳ ಮೂಲಕ ದೇವತೆಗಳು ಮುಂದೆ ಒದಗಲಿರುವ ಕೆಟ್ಟ ಅಥವಾ ಒಳ್ಳೆಯ ಘಟನೆಗಳ ಪೂರ್ವ ಸೂಚನೆ ನೀಡುತ್ತಾರೆ ಎಂಬುದು ಗ್ರೀಕರ ಬಲವಾದ ನಂಬಿಕೆ. ಮಾನವರ ಬದುಕಿನಲ್ಲಿ ದೇವತೆಗಳ ನೇರ ಹಸ್ತಕ್ಷೇಪವನ್ನು ಅವರ ಅನೇಕ ಕಾವ್ಯಗಳಲ್ಲಿ ವರ್ಣಿಸಿರುವುದನ್ನು ಕಾಣಬಹುದು. ಶ್ರೀ ಅರವಿಂದರು ಬೇರೆ ಬೇರೆ ನೆಲದ ಕಥೆ ಕಾವ್ಯಗಳನ್ನು ಸುಮ್ಮನೇ ವರ್ಣಿಸುತ್ತ ಹೋಗುವುದಿಲ್ಲ; ಜೊತೆಗೆ ಆಯಾ ದೇಶಗಳ ಸಂಸ್ಕೃತಿಯನ್ನು ಕೂಡ ಬಹು ಚೆನ್ನಾಗಿ ಪರಿಚಯಿಸುತ್ತಾರೆ. ಇದು ಅವರು ಬೇರೆಬೇರೆ ದೇಶಗಳ ಸಂಸ್ಕೃತಿಯನ್ನು ಆಳವಾಗಿ ಮತ್ತು ಬಹು ಸೂಕ್ಷ್ಮವಾಗಿ ಅಧ್ಯಯನ ಮಾಡಿರುವುದನ್ನು ತೋರಿಸುತ್ತದೆ.

320–331. ಥ್ರಾಸಿಮೆಕಸ್ ಮತ್ತು ಐನಸ್ ಇಬ್ಬರೂ ವಿಚಾರ ಭಾರದಿಂದ ಕುಗ್ಗಿಹೋಗಿದ್ದರು. ದೂರದ ಆಶೆ ಭರವಸೆ ಕೂಡ ಉಳಿದಿಲ್ಲ. ಭಾರವಾದ ಹೃದಯದಿಂದ ನಿಶಬ್ದವಾಗಿ ಕೇವಲ ಮೂಕ ಕೈಸನ್ನೆಯ ಮೂಲಕ ಪರಸ್ಪರ ಬೀಳ್ಕೊಂಡರು. (1.111)

ಥ್ರಾಸಿಮೆಕಸ್ ಹಿಂತಿರುಗಿ ಬಾಗಿಲ ಬಳಿ ಹೋದ. ಐನಸ್ ಮೊದಲೇ ದೇವತೆಗಳ ಸಂತಾನ. ಅವನು ಅಫ್ರೋಡೈಟ್ ದೇವತೆಯ ಮಗ, ಅವನ ಹೊಣೆಗಾರಿಕೆ ಹೆಚ್ಚಿನದು. ತಾನು ಮಾಡಬೇಕಾಗಿರುವ ಕೆಲಸವನ್ನು ಜ್ಞಾಪಿಸಿಕೊಂಡು ತಾನೂ ಹೊರಡಲು ಸಜ್ಜಾಗತೊಡಗಿದ.

ತಮ್ಮ ದೇಶ ನಾಶವಾಗುವುದು ಖಂಡಿತ ಇಬ್ಬರಿಗೂ ಗೊತ್ತು. ತನ್ನ ಕಣ್ಣಮುಂದೆ ಹಾಗಾಗಕೂಡದು, ತನ್ನ ಆಹುತಿ ಮೊದಲು ಆನಂತರ ಏನಾಗುವುದೋ ಯಾರು ಬಲ್ಲರು! ಥ್ರಾಸಿಮೆಕಸ್ ಟ್ರಾಯ್ ಕೋಟೆಯ ರಕ್ಷಣೆಗಾಗಿ ಅತಿ ಶೀಘ್ರವಾಗಿ ಸಾಗಿದ.

ಈ ಕಡೆಗೆ ದೇವತಾ ಸ್ತ್ರೀಯ ಮಗ, ಐನಸ್ ಎಲ್ಲ ಸಿದ್ಧತೆಯ ಕೆಲಸಗಳನ್ನು ಯಾಂತ್ರಿಕವಾಗಿ ಮಾಡಿದ. ಕೆಲಸದಲ್ಲಿ ಶೀಘ್ರತೆ ಇತ್ತು ಆದರೆ ಮೌನವಾಗಿ, ಶಾಂತಿಯಿಂದ ಸಹನೆಯಿಂದ ಸಿದ್ಧತೆ ಮಾಡಿಕೊಳ್ಳುತ್ತಿದ್ದ. ಅವನ ದೃಷ್ಟಿ ಕಣ್ಣಮುಂದಿರುವ ದೃಶ್ಯದ ಮೇಲಿರಲಿಲ್ಲ, ಗಹನವಾದ ವಿಚಾರದಲ್ಲಿ ಮುಳುಗಿದ್ದ, ಅವನ ವಿಚಾರಗಳ ಛಡಿ ಏಟಿನಿಂದ ಕುದುರೆಗಳು ಓಡುತ್ತಿವೆ ಅನ್ನುವ ಹಾಗೆ ದೇವತೆಗಳ ರಥ (ಅವನ ರಥವನ್ನು ದೇವತೆಗಳೇ ಅವನಿಗಾಗಿ ವಿಶೇಷವಾಗಿ ಮಾಡಿಕೊಟ್ಟಿದ್ದರು) ಮಹಾಬೀದಿಗಳ ಮೂಲಕ ವೇಗವಾಗಿ ಸಾಗಿತು. ತನ್ನ ವಿಶೇಷ ಹಾಗೂ ಪ್ರಬಲವಾದ ಅದೃಷ್ಟ ಭವಿಷ್ಯದೆಡೆಗೆ ದೇವತೆಯಾದ ಅಫ್ರೋಡೈಟ್‌ಳ ವೀರಪುತ್ರ ಸಾಗಿದ. (1.112) ಅವನು ಎಷ್ಟೆಂದರೂ ದೇವ ಸಂತಾನ. ಟ್ರಾಯ್ ನಗರ, ಟ್ರೋಜನ್ ಸಾಮ್ರಾಜ್ಯದ ಸರ್ವನಾಶದ ಮಧ್ಯದಲ್ಲಿ ಎಲ್ಲ ದುರಂತವನ್ನು ಕೊಡವಿಕೊಂಡು ಎದ್ದು ನಿಲ್ಲಬಲ್ಲ ಸಾಮರ್ಥ್ಯ ಇರುವವನು ಅವನು; ದೇವತೆಗಳು ಅವನನ್ನು ಮತ್ತೊಂದು ಸಾಮ್ರಾಜ್ಯದ ಸ್ಥಾಪನೆಗಾಗಿ ಆಯ್ಕೆ ಮಾಡಿದ್ದರು. ಒಂದು ಜಗತ್ತೇನೋ ನಾಶವಾಯಿತು, ಆಯಿತು, ಏನು ಮಾಡಲು ಸಾಧ್ಯ? ಮತ್ತೊಂದು ಸಾಮ್ರಾಜ್ಯ ಕಟ್ಟುವುದು ಬೆಳೆಸುವುದು ಇದೆಲ್ಲ ಸಾಮಾನ್ಯವಾಗಿ ಇದ್ದದ್ದೇ. ಇತಿಹಾಸವೆಂದರೆ ಇದೇ ಅಲ್ಲವೇ. ಟ್ರೋಜನ್ ಸಾಮ್ರಾಜ್ಯದ ಅವನತಿಯನ್ನು, ಕೊನೆಯನ್ನು ರೂಪಿಸಿದವರು ದೇವತೆಗಳೇ. ಪುನಃ ಅಪಾರ ಧೈರ್ಯ ಸಾಹಸ ಮೆರೆದು ಹೊಸದಾದ, ಮತ್ತಷ್ಟು ದೊಡ್ಡದಾದ ಹಿರಿದಾದ ಸಾಮ್ರಾಜ್ಯವನ್ನು ಕಟ್ಟುವ ಕೆಲಸಕ್ಕೆ ದೇವತೆಗಳು ಆಯ್ಕೆ ಮಾಡಿದ್ದು ಅಫ್ರೋಡೈಟ್‌ಳ ಮಗ ಐನಸ್‌ನನ್ನು. (1.113)

•Aeneas ಟ್ರೋಜನ್ ಯುವರಾಜ. ಇವನು ಟ್ರೋಜನ್ ವೀರ ಅರಸು Anchises ಮತ್ತು ದೇವತಾಸ್ತ್ರೀ Aphrodite ಅಥವಾ Venus ಇವರ ಸಂತಾನ. ಮುಂದೆ ಇವನು ಟ್ರಾಯ್ ಸಾಮ್ರಾಜ್ಯದ ಸರ್ವನಾಶದ ನಡುವೆಯೂ ಬದುಕುಳಿದು ಟ್ರಾಯ್‌ದಿಂದ ಪಾರಾಗಿ ಹೋಗುತ್ತಾನೆ, ಅವನೇ ಮುಂದೆ ಬಲಿಷ್ಠ ರೋಮ್ ಸಾಮ್ರಾಜ್ಯವನ್ನು ಕಟ್ಟಿದನು.

(ಸಶೇಷ)

## ಶ್ರೀ ಅರವಿಂದರ ಕಾವ್ಯ
## "ಶ್ರೀಮಾತೆಯ ರಕ್ಷೆಯೊಳಗೆ..."

**– ಅನು: ಪುಟ್ಟು ಕುಲಕರ್ಣಿ**

ಪುಷ್ಪಗಳ–ಮೇಳ ಗಿಡಗಂಟಿ–ಬೇರು ಜೊತೆ ವೃಕ್ಷ ಬಳಗದೊಡನೆ
ಲೇಪಗೊಂಡಿಲ್ಲಿ ರೂಪ ಚೇತನದಿ ಪರಿಪೂರ್ಣ ಮಿಡಿತದೊಡನೆ
ಪಿಂಗಲದ –ರಂಗಿನಲಿ ಬುವಿಯ–ಮಹತ್–ಕಾಯವದು ಸ್ಮಿತದಿ ಹೊರಳಿ
ಆಕಾಶಮಾಲೆ–ಮಾಲೆಗಳ ಸರಣಿಗೀಗಿದೊ ನಿತ್ಯ–ಅರಳಿ,

ಕಡಲೊಡಲ–ನೀಲಘನಮುಗುಳು ನಗೆಗೆ ಆಕಾಶನೀಲವೀಗ
ಪ್ರತಿಸ್ಪಂದ–ಛಂದ–ಬಂಧದಲಿ ಸ್ಮಿತದ ಉತ್ತರವನಿತ್ತಿತೀಗ;
ನವ–ನವೋನ್ಮೇಷ ಜೀವಿಗಳು ಭಾವ ತುಂಬುತಲಿ ಇಂಬುಗೊಳಲು
ಅದೃಶ್ಯವಿರುವ ಆಳದಾಳಗಳಲೀಗ ಸತತ ಬೆಳಗುಗೊಳಲು

ಜೀವನದ ಭವ್ಯ ವೈವಿಧ್ಯ ಮಹಿಮೆ ಜೊತೆ ತೇಜ–ಪುಟಿತಗೊಂಡು
ಆ ವನ್ಯಜೀವ–ಜೀವಿಗಳ ಶೋಭೆ ಸೌಂದರ್ಯದಲ್ಲಿ ಮಿಂದು,
ಮನುಜನೀಗಿದೋ ತಾ ಸ್ಥೈರ್ಯಗೊಂಡ ಚಿಂತನದ ಜೊತೆಗೆ ಇಂತು
ಈ ಲೋಕವೀಗ ಅವನಾತ್ಮವೆಂದು ಸಮ್ಮಿಲಿತಗೊಳುತಲಿಂತು.

ಮರ್ತ್ಯಮಾನವನ ನಶ್ವರದ ವಕ್ಷಸ್ಥಳಕಿಳಿದು ದೇವಿ ಬಂದು
ಗಗನ–ಮಂಡಲವ ನಿಗಮಯೋಗದಲಿ ಸಂಯೋಗಗೊಳಿಸಿ ಇಂದು,
ಅವನ ಬೆಳಗುಗಳಿಗಳಲೀಗ ಅವಳು ತುಂಬುತಲಿ ಇಂಬುಗೊಂಡು
ಅಸ್ಥಿರದ ರೂಹುಗಳಲೀಗ ಅವಳ ಆ– ಜನ್ಮ–ತಾಣವಿಂದು;

ಅದರ ರೂಪಣೆಗೆ ನಮಿತಗೊಂಡಿಲ್ಲಿ ಅವತರಣಗೊಂಡು ಬಂದು
ಜಡದ ಗರ್ಭದಲಿ ಅಮೃತತತ್ವವನ್ನು ತಾ ಎರಕ ಹೊಯ್ಯಲೆಂದು,
ಅನುಭೂತಿ ಇರದ ಸುವಿಶಾಲ–ವ್ಯಾಪ್ತದವಕಾಶದಲ್ಲಿ ಬೆಳಗಿ
ಚಿಂತನದ ಜೊತೆಗೆ ಭರವಸೆಯ ತರುವ ಜಾಗರದ ಜ್ಯೋತಿಯಾಗಿ,

ಜೀವ–ದೇಹಗಳ ಪ್ರಾಣನಾಡಿಗಳ ಕಣಕಣದಿ ಕುಣಿಸಿ ನಿತ್ಯ
ಪ್ರಚ್ಛನ್ನದಲ್ಲಿ ಕಮನೀಯ ಮತ್ತೆ ರಮಣೀಯ ಚಾರು ಸತ್ಯ
ಅಭಿಭೂತಗೊಳಿಸಿ ಆ ಪರಮತೋಷವನ್ನೀಗ ಅಲ್ಲಿ ಮತ್ತೆ
ಆಸಕ್ತಿರಹಿತ ಮೃಣ್ಮಯದ ರೂಹುಗಳಿಗೀಗ ಬೆಳಗು ಸತ್ತೆ.

**(ಸಾವಿತ್ರಿ; 2–3–130)**

## ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 21ನೇ ಮೇ 2023 ರಂದು ಮಿಸ್ ರೂಪಾಲಿ ದಾಸ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ತ್ವಸ್ತ್ರೀ ಸಂಸ್ಥೆವತಿಯಿಂದ ಶ್ರೀ ಅರಬಿಂದೋ ಸೊಸೈಟಿ ಜೆ.ಪಿ.ನಗರ ಸಹಯೋಗದೊಂದಿಗೆ "Living Consciously" ವಿಷಯದ ಬಗ್ಗೆ ಕಾರ್ಯಗರವನ್ನು ಬೆಳಿಗ್ಗೆ 10.30 ರಿಂದ 12.30 ರ ವರೆಗೂ ಆಯೋಜಿಸಲಾಗಿತ್ತು. ಆಧ್ಯಾತ್ಮಿಕ ಪ್ರಯಾಣವನ್ನು ಪ್ರಾರಂಭಿಸಲು ಬಯಸುವವರಿಗೆ ಈ ಕಾರ್ಯಗಾರವು ಬಹಳ ಉಪಯುಕ್ತವಾಗಿತ್ತು. ಕಾರ್ಯಗಾರದಲ್ಲಿ ಆಂತರಿಕ ಅರಿವಿನ ಅಭಿವೃದ್ಧಿ, ಸ್ವಯಂ ಮತ್ತು ಇತರರೊಂದಿಗೆ ಸಂಬಂಧದ ಸುಧಾರಣೆ, ಪ್ರಜ್ಞಾಪೂರ್ವಕ ಅಭ್ಯಾಸಗಳನ್ನು ಬೆಳೆಸುವುದು ಮತ್ತು ಭಾವನೆಗಳ ನಿಯಂತ್ರಣ ವಿಷಯಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಡಲಾಯಿತು.



ಫೋಟೋ: ಇಮೇಜಿಂಗ್ ಸಾವಿತ್ರಿ

ಅವನ ಆ ಸರ್ವ ಭೂತ–ಶಕ್ತಿಗಳು ಪರಿಪೂರ್ಣಗೊಳ್ಳುವಲ್ಲಿ;

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 62)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಶ್ರೀ ಗುರುವಿಗಾಗಿ ತನುಧಾರಿಯಾಗಿ ಬಂದಂಥ ಸದಾಶಿವಗೆ ॥
ಅನಂತಾನಂತ ನತಿಯ ಉಪಕೃತಿಯ ಒಪ್ಪಿಸುವೆವು ಇವಗೆ ।
'ಎಷ್ಟು ದುಡಿದೆ ನೀನೆಷ್ಟು ಪಡೆದೆ ಹೇ। ನಮೋ ನಮೋ ನಿನಗೆ' ॥
ಕಷ್ಟವೇನು ಸಂಘರ್ಷವೇನು ಪಾಡೇನು ತಾಳ್ಮೆಯೇನು ।
ನಮಗಾಗಿ ಕಲ್ಪ ನಮಗಾಗಿ ತಲ್ಪ ಸಾಧಿಸಿದೆ ನಮಗೆ, ನೀನು ॥
ಬಾಗಿ ಕೂಗಿ ಬೇಡುವೆವು ನಿನಗೆ ಅರೆಚಣವು ಕೂಡ ನೋಡು ।
ನಮ್ಮ ಸಂಪದವು ನಿನ್ನ ಪ್ರಾಪ್ತಿ ಇದ ಮರೆಯದಂತೆ ಮಾಡು ॥

**ಅನುವಾದ: ದ ರಾ ಬೇಂದ್ರೆ**

(ಶ್ರೀ ಅರವಿಂದಾಶ್ರಮದ ಸಮಾಧಿಯ ಮೇಲೆ ಲಿಖಿತವಾಗಿರುವ ಶ್ರೀಮಾತೆಯವರ ಪ್ರಾರ್ಥನೆ. ಈ ಕವನವು ಬೇಂದ್ರೆಯವರ 'ಚೈತ್ಯಾಲಯ' (1958) ರಲ್ಲಿ ಪ್ರಕಾಶನಗೊಂಡಿದೆ)

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.